

ಸಂಪುಟ 24 ಸಂಚಿಕೆ 39
ಸೆಪ್ಟೆಂಬರ್ 29, 2002 ಬೆಲೆ ರೂ. 3.00

ದುಡಿವ ಜನರ ಪ್ರಾಣಮಿತ್ರ


ಐಕ್ಯರಂಗ




ಗುಟ್ಕಾ ನಿಷೇಧದ ರಾಜಕೀಯ ಮತ್ತು ಅಡಿಕೆ ಬೆಳೆಗಾರರು




ವಂಚಿಸಲೆಂದೇ ಬಂದವರು




ಆಹಾರ ದಾಸ್ತಾನು : ಹಸಿದ ಒಡಲಿಗಿಲ್ಲ ತುತ್ತು





ತ್ರಿಪುರಾ: ಉಗ್ರರೊಂದಿಗೆ ಕಾಂಗ್ರೆಸ್



ಸಿನಿಮಾ ಅರಾಜಕತೆಯ ರಾಜಕೀಯ 'ಧ್ರುವ'

ಬರ ಪರಿಹಾರ ಕಾಮಗಾರಿಕೆ ಒತ್ತಾಯಿಸಿ ಪ್ರತಿಭಟನೆ

ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ಕೇಂದ್ರ ಸಮಿತಿಯ ಕರೆಯನ್ವಯ ಅಂದು ಬೆಂಗಳೂರಿನಲ್ಲಿ "ರಾಜ್‌ಭವನ್ ಚಲೋ" ಕಾರ್ಯಕ್ರಮ ನಡೆಯಿತು. ಪ್ರದಾನ ಅಂಚೆ ಕಛೇರಿ ಬಳಿ ನೆರೆದ 300ಕ್ಕೂ ಅಧಿಕ ಕಾರ್ಯಕರ್ತರು ಕೇಂದ್ರ ಮತ್ತು ರಾಜ್ಯ ಸರ್ಕಾರದ ನಿರ್ಲಕ್ಷದ ವಿರುದ್ಧ ಘೋಷಣೆ ಕೂಗಿ ತಮ್ಮ ಆಕ್ರೋಶ ವ್ಯಕ್ತಪಡಿಸಿದರು. ರಾಜಭವನಕ್ಕೆ ತೆರಳಲು ಪ್ರತಿಭಟನಾಕಾರರಿಗೆ ಪೋಲೀಸರು ಅವಕಾಶ ನೀಡದಿದ್ದಾಗ ಅಲ್ಲೇ ಭಹಿರಂಗ ಸಭೆ ನಡೆಸಿದರು. ಈ ಸಂದರ್ಭದಲ್ಲಿ ಮಾತನಾಡಿದ ರಾಜ್ಯ ಕಾರ್ಯದಶಿಅ ಕಾ. ಜಿ.ಎನ್ ನಾಗರಾಜ್, ರಾಜ್ಯ ಕಾರ್ಯದರ್ಶಿ ಮಂಡಳಿ ಸದಸ್ಯರಾದ ಕಾಂ.ಜಿ.ಸಿ.ಬಯ್ಯಾರೆಡ್ಡಿ ಬೆಂಗಳೂರು ಜಿಲ್ಲಾ ಸಮಿತಿ ಕಾರ್ಯದರ್ಶಿ ಕಾಂ.ಕೆ.ಪ್ರಕಾಶ್ ಬರದಿಂದಾಗಿ ನರಳುತ್ತಿರುವ ಜನತೆಯ ರಕ್ಷಣೆಗೆ ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಮುಂದಾಗಬೇಕೆಂದು ಒತ್ತಾಯಿಸಿದರು. ನಂತರ ರಾಜ್ಯಪಾಲರನ್ನು ಬೇಟಿ ಮಾಡಿ 16 ಬೇಡಿಕೆಗಳನ್ನು ಮನವಿ ಪತ್ರವನ್ನು ಸಲ್ಲಿಸಲಾಯ್ತು. ತುರ್ತಾಗಿ ಬರ ಪರಿಹಾರ ಕಾಮಗಾರಿ ಕೈಗೆತ್ತಿಕೊಳ್ಳಬೇಕು, ರೈತರ ಸಾಲ ಮನ್ನಾ, ಪಂಪ್‌ಸೆಟ್ ರೈತರ ಹಳೆಯ ವಿದ್ಯುತ್ ಬಾಕಿ ವಸೂಲಿ ಕೈಬಿಡಬೇಕು, ಬೆಳೆ ಹಾನಿಗೆ ಪರಿಹಾರ, ಕೂಲಿಗಾಗಿ ಕಾಳು ಯೋಜನೆ ಜಾರಿ, ಎಲ್ಲಾ ಬಡವರಿಗೆ ಹಳದಿ ಪಡಿತರ ಚೀಟಿ ವಿತರಣೆ ಮುಂತಾಗಿ 16 ಬೇಡಿಕೆಗಳುಳ್ಳ ಪಟ್ಟಿಯನ್ನು ರಾಜ್ಯಪಾಲರಿಗೆ ಸಲ್ಲಿಸಲಾಯ್ತು.

ಗುಲ್ಬರ್ಗಾ: ಪ್ರತಿಭಟನಾ ಮೆರವಣಿಗೆ

ಕೇಂದ್ರ ಸಮಿತಿಯ ಕರೆಯ ಮೇರೆಗೆ ಗುಲ್ಬರ್ಗಾದಲ್ಲಿ ಸಿ.ಪಿ.ಐ(ಎಂ) ಜಿಲ್ಲಾ ಸಮಿತಿ ನೇತೃತ್ವದಲ್ಲಿ ಬೃಹತ್ ಪ್ರತಿಭಟನಾ ಮೆರವಣಿಗೆ ನಡೆಸಿ ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ವಿರುದ್ಧ ಘೋಷಣೆ ಕೂಗಿ ಪ್ರತಿಭಟನೆ ವ್ಯಕ್ತಪಡಿಸಿದರು. ಜಿಲ್ಲಾಧಿಕಾರಿ ಕಛೇರಿಯಿಂದ ಸುಪರ್ ಮಾರ್ಕೆಟ್‌ವರೆಗೆ ಮೆರವಣಿಗೆ ಹೊರಟು ಬಹಿರಂಗ ಸಭೆ ನಡೆಸಿದರು. ಸಭೆಯಲ್ಲಿ ಮಾತನಾಡಿದ ಮುಖಂಡರು ಕೇಂದ್ರದ ನಿರ್ಲಕ್ಷ್ಯ ಧೋರಣೆಯನ್ನು ಕಟು ಪದಗಳಲ್ಲಿ ಖಂಡಿಸಿದರಲ್ಲದೆ, ಬರಪರಿಹಾರ ಕಾಮಗಾರಿಯನ್ನು ಶೀಘ್ರವಾಗಿ ಕೈಗೆತ್ತಿಕೊಳ್ಳಲು ಒತ್ತಾಯಿಸಿದರು. ಕೇಂದ್ರ ಸರಕಾರ ಹಲವು ಹಗರಣಗಳಲ್ಲಿ ಮುಳುಗಿದ್ದು, ಅಭಿವೃದ್ಧಿ ಕಾರ್ಯ ಕುಂಠಿತವಾಗಿದೆ. ಬಿ.ಜೆ.ಪಿಯ ಹಲವು ಮುಖಂಡರು ಹಗರಣಗಳಲ್ಲಿ ಸಿಲುಕಿದ್ದಾರೆ. ತಮ್ಮ ಮೇಲಿನ ಹಗರಣಗಳನ್ನು ಮುಚ್ಚಿ ಹಾಕಲು ಬಿ.ಜೆ.ಪಿ ಮತ್ತು ಸಂಘ ಪರಿವಾರ ಅಲ್ಲಲ್ಲಿ ಹಿಂದೂ ಮುಸ್ಲಿಂ ಗಲಭೆಗಳನ್ನು ಹಬ್ಬಿಸುತ್ತಾ ಜನರ ಮನಸ್ಸನ್ನು ಬೇರೆಡೆಗೆ ತಿರುಗಿಸಲು ಯತ್ನಿಸುತ್ತಿದ್ದಾರೆ. ಜನತೆ ಈ ಬಗ್ಗೆ ಎಚ್ಚರದಿಂದಿರಬೇಕೆಂದು ಅವರು ಹೇಳಿದರು. ಜಮ್ಮು ಕಾಶ್ಮೀರವನ್ನು ಮೂರು ಭಾಗಗಳಾಗಿ ವಿಂಗಡಿಸುವ ಬಿ.ಜೆ.ಪಿ ಮತ್ತು ಸಂಘಪರಿವಾರ ಯತ್ನಿಸುತ್ತಿರುವುದನ್ನು ತೀವ್ರವಾಗಿ ಖಂಡಿಸಿದ ಅವರು ಇದರಿಂದ ಕಾಶ್ಮೀರದ ಒಂದು ಭಾಗವನ್ನು ಪಾಕಿಸ್ತಾನಕ್ಕೋ, ಅಮೇರಿಕಾಕ್ಕೋ ಒಪ್ಪಿಸುವ ಹುನ್ನಾರ ಇದಾಗಿದೆ ಎಂದು ನೇರವಾಗಿ ಆರೋಪಿಸಿದರು. ಸಭೆಯನ್ನು ಉದ್ದೇಶಿಸಿ ರಾಜ್ಯ ಕಾರ್ಯದರ್ಶಿ ಮಂಡಳಿ ಸದಸ್ಯರಾದ ಕಾಂ.ಮಾರುತಿ ಮಾನ್ಪಡೆ, ಕಾಂ.ನೀಲಾ, ಜಿಲ್ಲಾ ಸಮಿತಿ ಮುಖಂಡರಾದ ಕಾಂ.ಮೇಘರಾಜ್ ಕಠಾರೆ, ವಿರೂಪಾಕ್ಷಪ್ಪ ತಡಕಲ್ ಮುಂತಾದವರು ಮಾತನಾಡಿದರು. ಮೆರವಣಿಗೆಯಲ್ಲಿ 400ಕ್ಕೂ ಅಧಿಕ ಕಾರ್ಯಕರ್ತರು ಭಾಗವಹಿಸಿದ್ದರು.

ಇದಕ್ಕೆ ಮುನ್ನ ಜಿಲ್ಲಾಧಿಕಾರಿ ಕಛೇರಿ ಬಳಿ ಪ್ರತಿಭಟನೆ ವ್ಯಕ್ತಪಡಿಸಿ ಜಿಲ್ಲಾಧಿಕಾರಿಗೆ ಮನವಿ ಪತ್ರ ಸಲ್ಲಿಸಿ ಬರಕಾಮಗಾರಿಗಳನ್ನು ಶೀಘ್ರವಾಗಿ ಕೈಗೆತ್ತಿಕೊಳ್ಳಲು ಒತ್ತಾಯಿಸಿದರು.

ತುಮಕೂರು ಜಿಲ್ಲಾಧಿಕಾರಿ ಕಛೇರಿ ಎದುರು ಧರಣಿ

ತುಮಕೂರಿನಲ್ಲಿ ನಡೆದ ಪ್ರತಿಭಟನಾ ಮೆರವಣಿಗೆ ಹೊರಟು ಜಿಲ್ಲಾಧಿಕಾರಿ ಕಛೇರಿ ಎದುರು ಧರಣಿ ನಡೆಸಿದರು. ಟೌನ್ ಹಾಲ್‌ನಿಂದ ಹೊರಟ ಮೆರವಣಿಗೆ ಜಿಲ್ಲಾಧಿಕಾರಿ ಕಛೇರಿ ಬಳಿ ಪ್ರತಿಭಟನಾ ಸಭೆಯಾಗಿ ಮಾರ್ಪಟ್ಟಿತು.

ಮಳೆಯಿಲ್ಲದೇ ಕೃಷಿ ಕೂಲಿ ಕಾರ್ಮಿಕರ ಪರಿಸ್ಥಿತಿ ತೀವ್ರ ಸಂಕಷ್ಟಕ್ಕೀಡು ಮಾಡಿದೆ. ಕೇಂದ್ರ ಸರ್ಕಾರಕ್ಕೆ ರಾಜ್ಯ ಸರ್ಕಾರ ಬರದ ಬಗ್ಗೆ ವಿಳಂಬವಾಗಿ ಮಾಹಿತಿ ನೀಡುತ್ತಿದೆ. ಇಂತಹ ಕಷ್ಟದ ಸನ್ನಿವೇಶದಲ್ಲೂ ಕೇಂದ್ರದ ಪ್ರಧಾನಿ ಮತ್ತು ಸಚಿವರು ವಿದೇಶಿ ಪ್ರವಾಸ ಮಾಡುತ್ತಿದ್ದಾರೆಂದು ಆರೋಪಿಸಿದ ಸಿ.ಪಿ.ಐ(ಎಂ)ನ ಜಿಲ್ಲಾ ಕಾರ್ಯದರ್ಶಿ ಕಾಂ.ಸಯ್ಯದ್ ಮುಜೀಬ್ ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ವಿಳಂಬ ನೀತಿಯನ್ನು ಖಂಡಿಸಿದರು. ನಂತರ ಜಿಲ್ಲಾಧಿಕಾರಿಗೆ ಮನವಿ ಪತ್ರ ಸಲ್ಲಿಸಲಾಯ್ತು.

ಬೆಳಿಗ್ಗೆ 11 ಗಂಟೆಯಿಂದ ಮಧ್ಯಾಹ್ನ 1 ಗಂಟೆವರೆಗೆ ಎರಡು ಗಂಟೆಗಳ ಕಾಲ ನಡೆದ ದರಣಿ ಕಾರ್ಯಕ್ರಮದಲ್ಲಿ 200ರಷ್ಟು ಕಾರ್ಯಕರ್ತರು ಭಾಗವಹಿಸಿದ್ದರು. ಜಿಲ್ಲಾ ಮುಖಂಡರಾದ ಕಾಂ.ಬಿ.ಉಮೇಶ್, ಕಾಂ.ಮಹಮ್ಮದ್ ದಸ್ತಗೀರ್ ಮತ್ತು ಕಾಂ.ಕೋದಂಡರಾಮ್ ಈ ಸಂದರ್ಭದಲ್ಲಿ ಮಾತನಾಡಿದರು. ಕೊಳಗೇರಿ ನಿವಾಸಿಗಳ ಹಿತರಕ್ಷಣಾ ಸಮಿತಿ ಮುಖಂಡರಾದ ನರಸಿಂಹ ಮೂರ್ತಿ ಸಭೆಯನ್ನು ಉದ್ದೇಶಿಸಿ ಮಾತನಾಡಿದರು.

ಮೈಸೂರು ಎಫ್.ಸಿ.ಐ ಮುತ್ತಿಗೆ

ಮೈಸೂರಿನಲ್ಲಿ ಭಾರತ ಆಹಾರ ನಿಗಮದ ಗೋದಾಮಿಗೆ (ಎಫ್.ಸಿ.ಐ) ಮುತ್ತಿಗೆ ಹಾಕಿ ಪ್ರತಿಭಟಿಸಿದ 250ಕ್ಕೂ ಅಧಿಕ ಸಿ.ಪಿ.ಐ(ಎಂ) ನ ಕಾರ್ಯಕರ್ತರು ಕೇಂದ್ರ ಸರ್ಕಾರ ಮತ್ತು ರಾಜ್ಯ ಸರ್ಕಾರದ ವಿರುದ್ಧ ಘೋಷಣೆ ಕೂಗಿದರು. ಗೋದಾಮುಗಳಲ್ಲಿ ಕೊಳೆಯುತ್ತಿರುವ ಧಾನ್ಯಗಳನ್ನು ಬರಪೀಡಿತರಿಗೆ ಹಂಚುವಂತೆ ಅವರು ಸರ್ಕಾರವನ್ನು ಒತ್ತಾಯಿಸಿದರು. ನಂತರ ಜಿಲ್ಲಾಧಿಕಾರಿಯವರಿಗೆ ಮನವಿ ಸಲ್ಲಿಸಲಾಯ್ತು.

ಪ್ರತಿಭಟನೆಯ ನೇತೃತ್ವವನ್ನು ಮೈಸೂರು ಜಿಲ್ಲೆಯ ಸಿ.ಪಿ.ಎಂ ಮುಖಂಡರಾದ ಕಾಂ.ಪ್ರಭಾಕರ್ ಇನ್ನಿತರರು ವಹಿಸಿದ್ದರು.



ಅಶ್ಲೀಲತೆ, ಹಿಂಸೆಯ ವೈಭವೀಕರಣ: ಪ್ರತಿಭಟಿಸಿದ ವಿದ್ಯಾರ್ಥಿನಿಯರು

ಇತ್ತೀಚೆಗೆ J.P ನಗರದಲ್ಲಿ ಶೃತಿ ಎಂಬ ಹುಡುಗಿಯ ಮೇಲೆ ನಡೆದ ಆ್ಯಸಿಡ್ ಪ್ರಕರಣ ಎಲ್ಲರ ಮನಕಲಕುವಂತೆ ಮಾಡಿತು. ಆಕೆಗೆ ಸಾಂತ್ವನದ ನುಡಿಗಳು, ಧನ ಸಹಾಯದ ಮಹಾಪುರವೇ ಹರಿದು ಬಂದಿತು. ಆದರೆ ಜೊತೆಗೆ ಮೊದಲಿನ ಸ್ಥಿತಿಯನ್ನು ಮಾನಸಿಕ ನೆಮ್ಮದಿಯನ್ನು ತಂದುಕೊಡಲು ಸಾಧ್ಯವೆ? ಇದು ಕೇವಲ ಒಂದು ಘಟನೆ ಮಾತ್ರವಲ್ಲ. ಇಂತಹ ನೂರಾರು ಘಟನೆಗಳು ಪ್ರತಿನಿತ್ಯ ನಡೆಯುತ್ತಲೇ ಇವೆ. ಅವುಗಳಲ್ಲಿ ಬಹುಪಾಲು ಬೆಳಕಿಗೆ ಬಾರದಿರುವುದೇ ಹೆಚ್ಚು. ಆರೋಗ್ಯವಂತ ಮನಸ್ಸಿದ್ದರೆ ಮಾತ್ರ ಆರೋಗ್ಯವಂತ ಸಮಾಜ ನಿರ್ಮಾಣವಾಗಲು ಸಾಧ್ಯ. ಈ ಎಲ್ಲಾ ಘಟನೆಗಳಿಗೂ ನಮ್ಮ ಸುತ್ತಮುತ್ತಲ ಪರಿಸರವೇ ಕಾರಣ. ಇತ್ತೀಚೆಗೆ ಮಾಧ್ಯಮಗಳಲ್ಲಿ ಹೆಚ್ಚುತ್ತಿರುವ ಅಶ್ಲೀಲತೆ, ಹಿಂಸೆಯನ್ನು ವೈಭವೀಕರಿಸುವುದು ಅವ್ಯಾಹತವಾಗಿ ನಡೆಯುತ್ತಲೇ ಇದೆ. ಇದರಿಂದ ಸಹಜವಾಗಿಯೇ ಯುವಕರು ಉದ್ರೇಕಗೊಳ್ಳುವಂತೆ ವಾತಾವರಣ ನಿರ್ಮಾವಾಗುತ್ತಿದೆ. ಹಾದಿ ಬೀದಿಗಳಲ್ಲಿ ಕಾಲೇಜು ಕಾಂಪೌಂಡ್‌ಗಳ ಮೇಲೆ ಅಶ್ಲೀಲ ಚಿತ್ರಗಳ ಭಿತ್ತಿಪತ್ರಗಳು ರಾರಾಜಿಸುತ್ತಿರುತ್ತವೆ. ಇಂತಹ ವಾತಾವರಣದಿಂದ ಆ್ಯಸಿಡ್ ಪ್ರಕರಣದಂತಹ ಘಟನೆಗಳು ಸರ್ವೆಸಾಮಾನ್ಯವಾಗುತ್ತಿವೆ. ಹುಡುಗಿ ಪ್ರೀತಿಸಲಿಲ್ಲ ಎನ್ನುವ ಕಾರಣಕ್ಕೆ ಆ್ಯಸಿಡ್ ಎರಚುವುದಾದರೆ ಮನಸ್ಸುಗಳ ವಿಕೃತತೆ ಯಾವ ಮಟ್ಟದಲ್ಲಿದೆ ಎಂದು ಊಹಿಸಬಹುದು. ಇಲ್ಲೊಂದು ಸರ್ಕಾರವಿದೆಯೇ, ಸೆನ್ಸಾರ್ ಮಂಡಳಿ ಇದೆಯೇ ಎನ್ನುವಷ್ಟರ ಮಟ್ಟಿಗೆ ಅನುಮಾನಗಳು ಮೂಡುತ್ತವೆ. ಇದರಿಂದ ಇಡೀ ಯುವ ಜನಾಂಗವೆ ಅಧಃಪತನದ ಹಾದಿ ಹಿಡಿದಿದೆಯೇ ಎನ್ನುವಷ್ಟರ ಮಟ್ಟಿಗೆ ಆತಂಕವಾಗುತ್ತದೆ. ಇಂತಹ ಪರಿಸ್ಥಿತಿಯಲ್ಲಿ ಸ್ವಚ್ಛ ಸಮಾಜ ರೂಪುಗೊಳ್ಳುವುದಾದರೂ ಹೇಗೆ? ಇಂತಹ ಸಂದರ್ಭದಲ್ಲಿ SFI ಬೆಂಗಳೂರು ಜಿಲ್ಲಾ ಸಮಿತಿಯು ಇಂತಹ ಘಟನೆಗಳನ್ನು ಖಂಡಿಸಿ, ಜನರಲ್ಲಿ ಜಾಗೃತಿ ಮೂಡಿಸುವ ಸಲುವಾಗಿ 07/09.2002 ರಂದು ವಿದ್ಯಾರ್ಥಿನಿಯರ ಜಾಥಾ ಏರ್ಪಡಿಸಿತ್ತು. ಮಹಾರಾಣಿ ವಿಜ್ಞಾನ, ಕಲಾ ಕಾಲೇಜು, ಗೃಹವಿಜ್ಞಾನ ಕಾಲೇಜು ವಿದ್ಯಾರ್ಥಿನಿಯರು ಜಾಥಾದಲ್ಲಿ ಪಾಲ್ಗೊಂಡಿದ್ದರು. ಪಿ.ಯು ಮಂಡಳಿ ಸರ್ಕಲ್‌ನಿಂದ DIG ಕಛೇರಿಯವರೆಗೆ ಮೆರವಣಿಗೆ ಬಂದ ವಿದ್ಯಾರ್ಥಿನಿಯರನ್ನು ಉದ್ದೇಶಿಸಿ S.F.I ರಾಜ್ಯಾಧ್ಯಕ್ಷೆ K.S ಲಕ್ಷ್ಮಿ ಮಾತನಾಡಿದರು. ನಂತರ ADD DIG ಯವರಿಗೆ ಮನವಿ ಪತ್ರ ಸಲ್ಲಿಸಲಾಯಿತು. ಸ್ಥಳದಲ್ಲಿಯೇ ತುರ್ತುಕ್ರಮ ತೆಗೆದುಕೊಳ್ಳಲು ಅಧಿಕಾರಿಗಳು ಮುಂದಾದುದು ಆ ಕ್ಷಣದ ವಿಜಯವೆನ್ನೋಣವೆ.



ಕಾವೇರಿಯ ಮುಗಿಯದ ವಿವಾದ ರಾಜ್ಯಕ್ಕೆ ಪರಿಶೀಲನಾ ನಿಯೋಗ

ದಿನಂಪ್ರತಿ 9000 ಕ್ಯೂಸೆಕ್ಸ್ (0.778 ಟಿ.ಎಮ್.ಸಿ) ಕಾವೇರಿ ನೀರನ್ನು ತಮಿಳುನಾಡಿಗೆ ಬಿಡಬೇಕೆಂಬ ಪ್ರಧಾನಿ ಅಧ್ಯಕ್ಷತೆಯ ಕಾವೇರಿ ನದಿ ಪ್ರಾಧಿಕಾರದ ಆಜ್ಞೆಯ ಜಾರಿಯನ್ನು ಕರ್ನಾಟಕ ಸರ್ಕಾರ 'ಅಮಾನತ್ತು' ಗೊಳಿಸಿದೆ. ಬರಬಹುದಾದ ಎಲ್ಲಾ ಸಂದರ್ಭಗಳನ್ನೂ ಎದುರಿಸುವುದಾಗಿ ಸಚಿವ ಸಂಪುಟದ ಬಳಿಕ ಪ್ರಕಟಣೆ ಹೊರಬಿದ್ದಿದೆ. ದಿನಾಲು 1.25 ಟಿ.ಎಮ್.ಸಿ ನೀರನ್ನು ತಮಿಳುನಾಡಿಗೆ ಹರಿಯಬಿಡಬೇಕು ಎಂಬ ಸುಪ್ರಿಂ ಕೋರ್ಟಿನ ಆಜ್ಞೆಯ ಸಂಕಟದಿಂದ ಪಾರಾಗಲು ಪ್ರಾಧಿಕಾರವು ನೀಡಿದ್ದ ಕೊಂಚ ರಿಯಾಯತಿಯ ಆದೇಶದ ಜಾರಿ ಈಗ ಡೋಲಾಯಮಾನದಲ್ಲಿದೆ.

ಇದು ಅತ್ಯಂತ ಸಂದಿಗ್ಧ ಸಂದರ್ಭ. ತಮಿಳುನಾಡಿಗೆ ನೀರು ಬಿಡಬಾರದೆಂದು ಕಾವೇರಿ ತೀರದ ಜಿಲ್ಲೆಯಾದ ಮಂಡ್ಯ, ಮೈಸೂರು, ಇತರೆಡೆಯಲ್ಲಿ ಆತಂಕಿತ ರೈತರಿಂದ ಭುಗಿಲೆದ್ದ ಚಳುವಳಿಯ ಒತ್ತಡಗಳು ಒಂದೆಡೆ. ಇದು ತಲುಪಿದ್ದು ಅತ್ಯಂತ ಧಾರುಣ ಘಟನೆಯಲ್ಲಿ ಹೆಚ್.ಡಿ ಕೋಟೆಯ ಬೀಚನಹಳ್ಳಿಯ ರೈತ, ಪಂಚಾಯ್ತಿ ಉಪಾಧ್ಯಕ್ಷ ಗುರುಸ್ವಾಮಿ ನೀರಿಗೆ ಬಿದ್ದು ಸಾವನ್ನಪ್ಪಿದ್ದು ಒಂದು ಗಂಭೀರ ಬೆಳವಣಿಗೆ. ಹೀಗಾಗಿ ಕೃಷ್ಣರ ಸರ್ಕಾರ ಈಗ ನೀರು ಬಿಡದಿರುವ ನಿಲುವಿಗೆ ಬಂದಿದೆ. ಅಲ್ಲದೇ ಒಟ್ಟು ವಿದ್ಯಮಾನಗಳನ್ನು ಚರ್ಚಿಸಲು ವಿಧಾನಸಭೆಯ ತುರ್ತು ಅಧಿವೇಶನವನ್ನು ಸೆಪ್ಟೆಂಬರ್ 24ರಂದು ಕರೆಯಲಾಗಿದೆ.ಈಗಾಗಲೇ ಸೆಪ್ಟೆಂಬರ್ 21ರಂದು ದೆಹಲಿಯಲ್ಲಿ ಸರ್ವಪಕ್ಷಗಳು ಸಭೆ ಸೇರಿದೆ. ನೀರು ನಿಲ್ಲಿಸಿರುವುದರಿಂದ ರಾಜ್ಯ ಸರ್ಕಾರವನ್ನು ವಜಾಗೊಳಿಸಬೇಕೆಂದು, ನ್ಯಾಯಾಂಗ ನಿಂದನೆಯ ಮೊಕದ್ದಮೆ ಹೂಡಬೇಕೆಂದು ಆರ್ಭಟಿಸಿದ್ದಾರೆ. ಹಾಗೂ ಕೇಂದ್ರ ಸರ್ಕಾರ ಮಧ್ಯಪ್ರವೇಶಿಸಬೇಕೆಂದು ಹೇಳಿದ್ದಾರೆ. ಇದನ್ನು ಅನುಸರಿಸಿ ಪ್ರಾಧಿಕಾರದ ಆಜ್ಞೆ ಜಾರಿಗೊಳಿಸಬೇಕೆಂದು ಪ್ರಧಾನಿ ವಾಜಪೇಯಿ ತಾಕೀತು ಮಾಡಿದ್ದಾರೆ.

ಜನರ ಆತಂಕ ನಿವಾರಿಸಲಿಲ್ಲ

ಕೃಷ್ಣರವರ ಪ್ರಕಟಣೆಯ ಬಳಿಕವೂ ಉದ್ವೇಗ ಕಡಿಮೆಯಾಗಿಲ್ಲ. ಈ ಹಿಂದೆ ಮೆರವಣಿಗೆ, ಕಾವೇರಿ ಜಲಾಶಯದ ಮುತ್ತಿಗೆ, ಬಂದ್‌ಗಳು, ಬೆಂಕಿ ಹಚ್ಚಿದ, ಲಾಠಿ ಚಾರ್ಜ್ ಹೊಡೆತಗಳು ನಡೆದಿವೆ. ಇಂತಹ ಸ್ಥಿತಿ ನಿರ್ಮಾಣಗೊಳ್ಳಲು ಸರ್ಕಾರ ಹಾಗೂ ಆಳುವ ಕಾಂಗ್ರೆಸ್ ಪಕ್ಷ ಹೊಣೆ ಹೊರಬೇಕು. ತಮ್ಮ ಪಾಲಿನ (205 ಟಿ.ಎಮ್.ಸಿ) ನೀರನ್ನು ಬಿಡಬೇಕೆಂದು ತಮಿಳುನಾಡು ಸರ್ಕಾರ ಸುಪ್ರಿಂ ಕೋರ್ಟಿಗೆ ಮೊರೆ ಹೋದಾಗ, ಅಲ್ಲಿನ ರೈತರು ಸಂಕಷ್ಟದಲ್ಲಿರುವಾಗ ಒಂದು ಹನಿ ನೀರನ್ನು ಬಿಡಲಾಗುವುದಿಲ್ಲವೆಂಬ ನಿಲುವು ಪ್ರತಿಪಾದಿಸಿದ್ದು ಕರ್ನಾಟಕ ಸರ್ಕಾರ ಕೊನೆಗೆ 1.25 ಟಿ.ಎಮ್.ಸಿ ನೀರಿನ ನಿರ್ದೇಶನವನ್ನು ಕೋರ್ಟ್‌ನಿಂದ ಪಡೆಯುವಂತಾಯಿತು. ಬಳಿಕ ಪ್ರಾಧಿಕಾರದ ನಿರ್ದೇಶನದ ಜಾರಿಯ ಅನಿವಾರ್ಯತೆಯನ್ನೂ, ಅಲ್ಲದೆ ಒಟ್ಟು ವಿದ್ಯಮಾನಗಳ ಕುರಿತಾದ ಸರ್ಕಾರದ ಸ್ಥಿತಿ ಇತ್ಯಾದಿ ಅಂಶಗಳನ್ನು ಜನತೆಗೆ ವಿವರಿಸಿ ಮನವರಿಕೆ ಮಾಡಿಕೊಡಲಿಲ್ಲ. ಮೇಲಾಗಿ ಸರ್ಕಾರ ಕೋರ್ಟ್ ಹಾಗೂ ಪ್ರಾಧಿಕಾರದ ನಿರ್ದೇಶನಕ್ಕೆ ಬದ್ಧವೆನ್ನುತ್ತಾ ಇನ್ನೊಂದೆಡೆ ಕಾಂಗ್ರೆಸ್ ಪಕ್ಷವು ಆ ಭಾಗದಲ್ಲಿ ನೀರು ಬಿಡಲಾಗದು ಎಂದು ಚಳುವಳಿ ಮಾಡುತ್ತಾ ಇಬ್ಬಂದಿ ನೀತಿಯನ್ನು ಅನುಸರಿಸಿತು. ನಂತರದ ಪ್ರತಿ ಹಂತದಲ್ಲಿಯೂ ಜನತೆಯ ವಿಶ್ವಾಸ ಗೆಲ್ಲಲಾಗದೇ, ಕೊನೆಗೆ ದಮನಕ್ಕೆ ಇಳಿದಿದ್ದು ಖಂಡನೀಯ.

ಎಷ್ಟೆಲ್ಲಾ ರಂಪಾಟ ಆಗಿ, ಪೋಲೀಸರನ್ನೂ ಬಿಟ್ಟು ಜಲಾಶಯ ಖಾಲಿ ಮಾಡಿಸಿದ ನಂತರವೂ ಮತ್ತೆ ಅಲ್ಲಿಗೆ ಜನರನ್ನು ಹೋಗಲು ಬಿಟ್ಟಿದ್ದು ಯಾಕೆ? ಇದು ಒಬ್ಬರ ಸಾವಿನಲ್ಲಿ ಪರ್ಯಾವಸಾನ ವಾಯಿತು. ನೀರು ನಿಲ್ಲಿಸದಿದ್ದರೆ 'ಆತ್ಮಹತ್ಯೆ' ಮಾಡಿಕೊಳ್ಳುವ ಮಾತುಗಳು ವ್ಯಾಪಕ ಕೇಳಿ ಬಂದಿದ್ದಾಗ್ಯೂ, ಅದನ್ನು ತಡೆಯಲು ಪೋಲೀಸರು ಕಿಂಚಿತ್ತು ಕ್ರಮ ಯಾಕೆ ವಹಿಸಲಿಲ್ಲ? ಇಂತಹ ಅದಕ್ಷತೆಗೆ ಬೇರೆ ನಿದರ್ಶನ ಬೇಕೆ?

ಇಷ್ಟಾದರೂ ಕೃಷ್ಣರವರಿಗೆ, ಅಲ್ಲಿಯ ತಮ್ಮ ಪಕ್ಷದವರನ್ನೇ ನಿಯಂತ್ರಿಸಲು ಆಗದೆ, ದೌರ್ಬಲ್ಯ ಎನ್ನಬೇಕೋ ಅಥವಾ ಈಗಲೂ ಎಡಬಿಡಂಗಿ ನೀತಿಯನ್ನೇ ಅನುಸರಿಸಲಾಗುತ್ತದೆಯೇ?

ಈಗಲಾದರೂ ಉದ್ಭವಿಸಿರುವ ಹೊಸ ಸನ್ನಿವೇಶದಲ್ಲಿ ಜನತೆಗೆ ನೈಜ ಸ್ಥಿತಿ ಮನವರಿಕೆ ಮಾಡಿಕೊಡಬೇಕು. ಸಂಕುಚಿತ ರಾಜಕೀಯಕ್ಕೆ ಕಡಿವಾಣ ಹಾಕಬೇಕು. ಉಭಯ ರಾಜ್ಯಗಳ ರೈತರ ಸಂಕಟ, ಆತಂಕಗಳೂ ಒಂದೇ ಎಂಬುದನ್ನು ಎಲ್ಲರೂ ಅರಿಯಬೇಕಿದೆ.

ಸುಪ್ರಿಂ ಕೋರ್ಟಿನ ಇನ್ನೊಂದು ತೀರ್ಪು 23ರಂದು ಹೊರಬೀಳಲಿದೆ. ಕಗ್ಗಂಟಾಗುತ್ತಿರುವ ಕಾವೇರಿ ಸಮಸ್ಯೆಗೆ ಪರಿಹಾರ ರೂಪಿಸುವ ದಿಶೆಯಲ್ಲಿ ಸರ್ವ ಪಕ್ಷಗಳ ಸಭೆ ದೆಹಲಿಯಲ್ಲಿ ಸೇರಿ ಪ್ರಧಾನಿಗಳನ್ನು ಕಂಡಿತು.(ಸಿಪಿಎಂ ಮುಖಂಡರು ನಿಯೋಗದಲ್ಲಿ ತೆರಳಲಿಲ್ಲ) ಈಗ ಕರ್ನಾಟಕದ ಜಲಾಶಯಗಳಲ್ಲಿ ನೀರಿನ ಮಟ್ಟ ಅರಿಯಲು ಒಂದು ಸಮಿತಿಯನ್ನು ಪ್ರಾಧಿಕಾರ ಕಳುಹಿಸಲಿದೆ. ನೀರು ಬಿಡಲೇಬೇಕೆಂದು ಪ್ರಧಾನಿ ನಿರ್ದೇಶಿಸಿದ್ದಾರೆ. ಫಲಿತಾಂಶ ಕ್ಕಾಗಿ ಕಾದು ನೋಡಬೇಕಿದೆ.

ವಿಧಾನಸೌಧದ ಮೇಲೆ

ಹಾಗೆಯೇ ಈ ಸಂದರ್ಭ ದಲ್ಲಿ ಬೆಂಗಳೂರು ಬಂದ್ ಅತ್ಯಂತ ಯಶಸ್ವಿ ಯಾಗಿದೆ. ಒಂದೆಡೆ ರೈತರ ಜೀವನ್ಮರಣದ ಆತಂಕ, ಇನ್ನೊಂದೆಡೆ ಕಳೆದ ಬಾರಿಯಲ್ಲಿ ನಡೆದ ಹಿಂಸೆಗಳ ಅಳಿಯದ ನೆನಪು-ಭಯ, ಈ ಪ್ರತಿಕ್ರಿಯೆಯಲ್ಲಿ ಕೂಡಿವೆ. ಬಂದ್ ಯಶಸ್ವಿಯಿಂದ ಪುಳಕಿತರಾದ ಕೆಲವರು ಪ್ರಾದೇಶಿಕ ಪಕ್ಷವನ್ನು ಹುಟ್ಟುಹಾಕಿ ವಿಧಾನಸೌಧದ ಮೇಲೆ ಕನ್ನಡ ಬಾವುಟ ಹಾರಿಸುವ ಕನಸು ಹಂಚಿಕೊಂಡಿದ್ದಾರೆ. ಕನ್ನಡನಾಡಿನ-ದೇಶದ ಒಟ್ಟು ರಾಜಕೀಯ-ಸಾಮಾಜಿಕ ವಾಸ್ತವಗಳನ್ನು ನಿರಾಕರಿಸುತ್ತಿರುವ ಅವರು 'ಧ್ವಜಹಾರಿಸುವ' ಕನಸನ್ನು ದೃಢವಾಗಿ ಕಟ್ಟುತ್ತಲೇ ಇರಬಹುದು.


ನೀರಿಗೆ ಹಾರುವ ಮುನ್ನ ಗುರುಸ್ವಾಮಿ

ಈವಾರ ಕರ್ನಾಟಕ ಒಂದು ನೋಟ

ಎಸ್.ವೈ.ಗುರುಶಾಂತ್

ಬಾಗಲಕೋಟೆ ನಿರಾಶ್ರಿತರು ನಡುನೀರಿನಲ್ಲಿ

519.6 ಮೀಟರ್‌ಗೆ ಅಣೆಕಟ್ಟೆಯನ್ನು ವಿಸ್ತರಿಸಿದ ಬಳಿಕ ಮೊದಲ ಬಾರಿಗೆ ಆಲಮಟ್ಟಿ ಜಲಾಶಯ ತುಂಬಿ ತುಳುಕುತ್ತಿದೆ. ಇದು ಸಂಭ್ರಮ ಮೂಡಿಸಿರುವಾಗಲೇ ಇನ್ನೊಂದು ಬದಿಯಲ್ಲಿ ದುರಂತದ ಅಧ್ಯಾಯ ತೆರೆದುಕೊಂಡಿದೆ. ಈಗ ಬಾಗಲಕೋಟೆ ನಗರದ ತುಂಬಾ ನೀರು ನುಗ್ಗಿ, ವ್ಯಾಪಾರ ಕೇಂದ್ರಗಳು ದಿನದ ವಹಿವಾಟು ಸ್ಥಗಿತಗೊಂಡಿವೆ. ಮನೆಗಳ ಹೊಸ್ತಿಲವರೆಗೂ ನೀರು ನಿಂತಿದೆ. ಊರಿನ ಹೊಲಸು ಎತ್ತಲೂ ಆಗದೆ ದುರ್ನಾತ ಹೆಚ್ಚಿಸಿದೆ. ಮಲಿನತೆ ಪರಿಣಾಮ ರೋಗಗಳು ಉಲ್ಬಣಗೊಂಡಿವೆ. ಹಾವು - ವಿಷ ಜಂತುಗಳು ಭಯ ಕಾಡುತ್ತಿವೆ. ಹೀಗೆ ಬದುಕುವುದೂ ಅಸಾಧ್ಯವಾಗಿ ಎಲ್ಲಿಯೂ ನೆಲೆ ಸಿಕ್ಕದೇ ಅಲ್ಲಿಯ ಜನ ಒದ್ದಾಡುತ್ತಿದ್ದಾರೆ. ಇಂತಹ ಸ್ಥಿತಿ ಉದ್ಭವವಾಗುವ ಬಗ್ಗೆ ಹತ್ತಾರು ವರ್ಷಗಳ ಚಿಂತನ ಮಂಥನ ನಡೆದಿದೆ. ಪುನರ್ವಸತಿಗಾಗಿ ಹಲವು ಇಲಾಖೆ, ದೊಡ್ಡ ಅಧಿಕಾರಿಗಳು ಪ್ರಯತ್ನ ನಡೆಸಿದ್ದಾರೆ. ಕೋಟ್ಯಾಂತರ ಹಣಖರ್ಚು ಆಗಿದೆ. ಆದಾಗ್ಯೂ ಈ ವಿಷಮಯ ಸನ್ನಿವೇಶ ಯಾಕೆ? ಇಂತಹ ಪುನರ್ವಸತಿಗಾಗಿ ಕಟ್ಟಲಾದ ನವನಗರದಲ್ಲಿ 30 ಸಾವಿರ ಜನರನ್ನು ಮಾತ್ರ ಸ್ಥಳಾಂತರಿಸಲಾಗಿದೆ. ಆದರೆ ಅವರಿಗೆ ಸೂಕ್ತ ನಾಗರೀಕ ಸೌಲಭ್ಯಗಳಿಲ್ಲ. ದುಡಿಮೆಯ ಅವಕಾಶಗಳೂ ಇಲ್ಲ. ಹೀಗಾಗಿ 8 ಕಿ.ಮಿ ದೂರದ ಬಾಗಲಕೋಟೆಯತ್ತ ಅವರು ಬರಬೇಕು. ಬಂದರೂ ಅಲ್ಲೇನಿದೆ?


ನಾಡಿನ ಅಭಿವೃದ್ಧಿಗಾಗಿ ತಮ್ಮ ಮನೆ-ಮಠ, ಹೊಲ, ಉದ್ಯೋಗ ಕಳೆದುಕೊಂಡ ಜನತೆಯ ಬಗ್ಗೆ ಸರ್ಕಾರದ ದೃಷ್ಟಿಕೋನ, ನಡವಳಿಕೆ ಹೇಸಿಗೆ ತರಿಸುವಂತಹದ್ದು. ಪ್ರತಿಯೊಂದು ಅಭಿವೃದ್ಧಿ ಯೋಜನೆಗಳ ಅನುಷ್ಠಾನದಲ್ಲಿ ಪುನರ್‌ವಸತಿಗಾಗಿ ಭಾರೀ ಭರವಸೆಯನ್ನು ನೀಡಲಾಗುತ್ತದೆ. ಆದರೆ ಕೊನೆಯಲ್ಲಿ ಜನರನ್ನು ಅಮಾನವೀಯವಾಗಿ ನಡೆಸಿಕೊಳ್ಳಲಾಗುತ್ತದೆ. ಅದಕ್ಕಾಗಿ ಮಾಡುವ ಖರ್ಚು ವ್ಯರ್ಥವೆಂದು ಭಾವಿಸಲಾಗುತ್ತದೆ. ಕನಿಷ್ಠ ಸೌಲಭ್ಯ ನೆಲೆ ನೀಡದೇ ನಿರ್ದಯವಾಗಿ, ನಿರ್ಲಕ್ಷಿಸಲಾಗುತ್ತದೆ. ಇದನ್ನು ಪ್ರತಿಭಟಿಸಿ ಅಲ್ಲಿಯ ಜನ 15 ದಿನಗಳು ಧರಣಿ ನಡೆಸಿದ್ದಾರೆ. ಈಗ ಸಭೆ ನಡೆಸಿದ ಮುಖ್ಯ ಮಂತ್ರಿಗಳು ಇನ್ನೂ 15 ದಿನಗಳಲ್ಲಿ ಖುದ್ದು ಭೇಟಿ ಮಾಡುವರಂತೆ. ಇದನ್ನು ಸ್ವಾಗತಿಸಬಹುದು. ಆದರೆ ಅವರು ಭೇಟಿ ಮಾಡುವವರೆಗೂ ನಡುನೀರಿನಲ್ಲಿ ಕೃಷ್ಣನನ್ನೇ ನೆನೆಸಿಕೊಳ್ಳುತ್ತಾ ಬದುಕಲು ಸಾಧ್ಯವೇ? ಸಚಿವರು, ದೊಡ್ಡ ದೊಡ್ಡ ಅಧಿಕಾರಿಗಳು ಅಲ್ಲಿ ಏನು ಮಾಡುತ್ತಿದ್ದಾರೆ. ತಕ್ಷಣದ ನೆರವಿಗೆ, ಧಾವಿಸುವ ಕನಿಷ್ಠ ಮನುಷ್ಯತ್ವ ಈ ಸರ್ಕಾರದಲ್ಲಿಲ್ಲವೇ? ಆದ್ದರಿಂದ ಕೂಡಲೇ ತುರ್ತು ಪರಿಹಾರದ ಕ್ರಮಕೈಗೊಳ್ಳಬೇಕು. ಶಾಶ್ವತ ಯೋಜನೆಗಳಿಗಾಗಿ ಎಷ್ಟೋ ವರುಷ ಕಾದು ನೋಡಿಯಾಗಿದೆ. ಇನ್ನೂ 15 ದಿನಗಳು ಕಾಯಲೂ ಬಹುದು. ಆದರೆ ಸಮಸ್ಯೆಗೆ ಪರಿಹಾರ ಕಾಣಲೇಬೇಕು.

ಗಣೇಶನ ಸುತ್ತ ಜಮಾಯಿಸಿದ ಖಾವಿಪಡೆ

ಘಟನೆ 1- ಒಂದು ಕ್ಷುಲ್ಲಕ ಎನ್ನಬಹುದಾದ ಸಂಗತಿ. ಸಿನಿಮಾದಲ್ಲಿ ನೋಡಿದ ಅಸಭ್ಯ ಹವ್ಯಾಸವನ್ನು ಕಾರ್ಯರೂಪಕ್ಕಿಳಿಸಲು ಮುಂದಾದ ಯುವಕ. ಯುವತಿ ಏನೆಂದಳೋ ಗೊತ್ತಿಲ್ಲ ಆದರೆ ಇಬ್ಬರು ಯುವಕರ ನಡುವೆ ಹತ್ತಿಕೊಂಡಿತು ವ್ಯಾಜ್ಯ. ಇಬ್ಬರ ನಡುವೆ ನಡುವೆ ಬಗೆ ಹರಿಯಬಹುದಾದದ್ದನ್ನು ಬೀದಿ ರಂಪ ಮಾಡಿದರು. ಅವರು ಹುಡುಗ ಹುಡುಗಿಯ ಮತದ ಜಾಡು ಹಿಡಿದು ಬಡಿದಾಡಿಸಿದರು. ಇದೇ ಅವಕಾಶಕ್ಕೆ ಕಾದಿದ್ದ ಚಡ್ಡಿಪಡೆ ಊರ ತುಂಬಾ ಖ್ಯಾತೆ ಎಬ್ಬಿಸಿದರು. ಪರಿಣಾಮ ವ್ಯಾಪಕ ಹಿಂಸಾಚಾರ, ಇರಿತ, ಕೋಮುಗಲಭೆ, ಕಂಡಲ್ಲಿ ಗುಂಡಿಡುವ ಕರ್ಫ್ಯೂ ಆಜ್ಞೆ, ಒಂದು ಬಾರಿಯಲ್ಲ, ಹಿಂಸೆ ಹಲವು ಸುತ್ತಿನ ಮರುಕಳಿಕೆ. ಒಂದು ಬದಿಯಲ್ಲಿ ಕಾವೇರಿಗಾಗಿ ಚಳುವಳಿ, ವೀರಪ್ಪನ್‌ನ ಅಪಹರಣದ ತಲ್ಲಣ, ಬರಗಾಲದಲ್ಲಿಯೂ ಗಣೇಶನ ಹಬ್ಬದ ಜೋರು. ಈ ನಡುವೆ ಕೆ.ಆರ್. ನಗರ ಕೋಮು ದಳ್ಳುರಿಯಿಂದ ತತ್ತರಿಸಿತು. ಒದೆ ಚೆನ್ನಾಗಿ ತಿಂದವರನ್ನು, ಇರಿತಕ್ಕೆ ಒಳಗಾದ,ಆಸ್ತಿ ಹಾನಿಗೀಡಾದವರನ್ನು ವಿಚಾರಿಸಲು ಹೋದ ಸಚಿವ ವಿಶ್ವನಾಥ್ ಮೇಲೆ ಒಂದು ಕೋಮಿನವರನ್ನು ಓಲೈಸುತ್ತಿದ್ದಾರೆ ಎಂದು ಆರೋಪಿಸಲಾಯಿತು. ಆರೋಪಿಸಿದವರು ಖಾಕೀ ಚಡ್ಡಿಯನ್ನು ಒಳಉಡುಪಾಗಿ ಧರಿಸಿದ್ದರು ಎಂದು ಬೇರ ಹೇಳಬೇಕಿಲ್ಲ.

ಘಟನೆ 2- ಹರಪನಹಳ್ಳಿ ದಾವಣಗೆರೆ ಜಿಲ್ಲೆಯ ತಾಲ್ಲೂಕು ಕೇಂದ್ರ. ಶಿಕ್ಷಣದ ವ್ಯಾಪಾರಕ್ಕೆ ಪ್ರಸಿದ್ಧ. ಈ ಬಾರಿ ಗಣೇಶನನ್ನು ವಿಸರ್ಜಿಸಲೆಂದು ಹೊರಟ ಮೆರವಣಿಗೆ ಮಸೀದಿ ಬಳಿ ಬಂದಾಗ ಪರಿಸ್ಥಿತಿ ಉದ್ರಿಕ್ತವಾಯಿತಂತೆ. ಪರಿಣಾಮ ಘರ್ಷಣೆ, ಹಿಂಸಾಚಾರ, ಕರ್ಫ್ಯೂ, ಬಂಧನ. ಒಂದು

ಪುಟ 4 ಕ್ಕೆ


ಹಲವು ಲೆಕ್ಕಾಚಾರಗಳಲ್ಲಿ ನಡೆದ ಗಲಭೆಗಳು

ಪೊನ್ನಂಪೇಟೆ: ಕೋಮುವಾದಿಗಳೊಡನೆ ಮತ್ತೊಮ್ಮೆ ಸರ್ಕಾರದ ರಾಜಿ

ಪೊನ್ನಂಪೇಟೆ-ಬಾಳೆಲೆ ಪ್ರದೇಶಗಳಲ್ಲಿನ ಕ್ರಿಮಿನಲ್ ಚಟುವಟಿಕೆಗಳನ್ನು ಹದ್ದುಬಸ್ತಿನಲ್ಲಿಡುವ ಕರ್ತವ್ಯಕ್ಕೆ ಮುಂದಾದ ಸಬ್‌ಇನ್ಸ್‌ಪೆಕ್ಟರ್‌ರನ್ನು ಎತ್ತಂಗಡಿ ಮಾಡಿಸಲಾಯಿತು. ಈ ಘನ ಕಾರ್ಯಕ್ಕೆ ಇಳಿದದ್ದು ಸಂಘ ಪರಿವಾರದವರೇ. ಅವರು ರಕ್ಷಿಸುತ್ತಿದ್ದದ್ದು ಇತ್ತೀಚಿನ ಅಲ್ಪಸಂಖ್ಯಾತರ ಮೇಲೆ ಆಕ್ರಮಣ ಮಾಡಿದ ಸಮಾಜಘಾತುಕರನ್ನೇ. ಇದಕ್ಕೆ ಕಾಂಗ್ರೆಸ್ ಸರ್ಕಾರ ಕೈ ಜೋಡಿಸಿತು. ಇಂತಹ ಕ್ರಿಮಿನಲ್‌ಗಳಿಗೆ ದಕ್ಷ ಅಧಿಕಾರಿಗಳು ಅಡಿಯಾಳಾಗಬೇಕೆ? ಅಂತಹ ಸನ್ನಿವೇಶದ ಬಗೆಗಿನ ವರದಿ.

ಪಾಲೂರು ಘಟನೆಯ ನಂತರ ಕೊಡಗು ಜಿಲ್ಲೆಯ ಹಲವು ಭಾಗಗಳಲ್ಲಿ ಕೋಮುಗಲಭೆ ಅವ್ಯಾಹತವಾಗಿ ನಡೆಯಿತು. ಪೊನ್ನ ಪೇಟೆ, ಬಾಳೆಲೆ ಭಾಗದಲ್ಲಿಯೂ ಪೋಲೀಸ್ ಇಲಾಖೆ ಸಂಪೂರ್ಣ ನಿಷ್ಕ್ರಿಯವಾಗಿತ್ತು ಎನ್ನುವುದಕ್ಕಿಂತ ಕೋಮುವಾದಿಗಳೊಡನೆ ಪೋಲೀಸರೂ ಶಾಮೀಲಾಗಿದ್ದರು ಎಂದರೆ ತಪ್ಪಾಗಲಾರದು. ಪೋಲೀಸರ ಈ ರೀತಿಯ ಕರ್ತವ್ಯ ಲೋಪ ದಿಂದಾಗಿ ಸಂಘಪರಿವಾರಿ ಅಟ್ಟಹಾಸದಿಂದ ಮೆರೆಯಿತು. ಅಲ್ಪಸಂಖ್ಯಾತರ ಮೇಲೆ ವ್ಯಾಪಕವಾಗಿ ದಾಳಿ ದಬ್ಬಾಳಿಕೆ ನಡೆಸಿತು.

ಬಾಳೆಲೆ ಗ್ರಾಮದಲ್ಲೂ ಸಂಘಪರಿವಾರದ ಗೂಂಡಾಗಳು ತನ್ನದೇ ಗ್ರಾಮದ ಅಲ್ಪಸಂಖ್ಯಾತರ ಮನೆಗಳನ್ನು ಲೂಟಿ ಮಾಡತೊಡಗಿದಾಗಲೂ ಪೋಲೀಸರು ನೊಂದವರು ನೆರವಿಗೆ ಬರಲಿಲ್ಲ. ಇಲ್ಲಿಯೂ ಸಂಘಪರಿವಾರದ ಕುಕೃತ್ಯಗಳಿಗೆ ಕೈಜೋಡಿಸಿ ತಮ್ಮ ಕರ್ತವ್ಯವನ್ನೇ ಮರೆತರು. ಗಲಭೆ ಮುಗಿದ ನಂತರವೂ ಹಲವು ದಿನಗಳವರೆಗೆ ಸಂಘ ಪರಿವಾರದ ಗೂಂಡಾಗಳು ಬಾಳೆಲೆ ಗ್ರಾಮದ ಮುಸ್ಲಿಮರಿಗೆ ತಮ್ಮ ಅಂಗಡಿ ಮುಂಗಟ್ಟುಗಳನ್ನು ತೆರೆಯಲು ಅವಕಾಶವನ್ನೇ ನೀಡಿರಲಿಲ್ಲ. ಈ ಬಗ್ಗೆ ಜಿಲ್ಲೆಯ ಸಚಿವರಾಗಲಿ, ಜಿಲ್ಲಾ ಉಸ್ತುವಾರಿ ಸಚಿವ ರಾಗಲಿ, ಸರ್ಕಾರವಾಗಲಿ, ತಲೆ ಕೆಡಿಸಿಕೊಂಡಿರ ಲಿಲ್ಲ. ಕೆಲವು ಸ್ಥಳೀಯ ರಾಜಕೀಯ ಮುಖಂಡರ ಮಧ್ಯಪ್ರವೇಶದಿಂದಾಗಿ ಅಲ್ಲಿನ ಪರಿಸ್ಥಿತಿ ಶಾಂತ ಸ್ಥಿತಿಗೆ ಬಂದಿತ್ತು.



ಕೋಮುವಾದಿಗಳ ಆಕ್ರಮಣದಲ್ಲಿ ಹಾನಿಗೀಡಾದದ್ದು

ದಕ್ಷ ಪೋಲೀಸ್ ಅಧಿಕಾರಿ ನೇಮಕ

ಪೊನ್ನಂಪೇಟೆ ಪೋಲೀಸ್ ಠಾಣೆಗೆ ಸಬ್ ಇನ್ಸ್‌ಪೆಕ್ಟರ್ ಆಗಿ ಟಿ.ಪಿ.ರಾಜು ಬಂದ ನಂತರ ಕೋಮುವಾದಿಗಳ, ಮರಗಳ್ಳರ ಲೇವಾದೇವಿ ಗಾರರ ಕೂಟದ ಅಟ್ಟಹಾಸಕ್ಕೆ ಕಡಿವಾಣ ಹಾಕಲು ಪ್ರಯತ್ನಿಸಿದರು.. ಮುಖ್ಯವಾಗಿ ಪೊನ್ನಂಪೇಟೆ, ಬಾಳೆಲೆ ಬಾಗದಲ್ಲಿ ಇಂತಹ ಸಮಾಜ ಘಾತುಕ ಶಕ್ತಿಗಳನ್ನು, ಕೋಮುವಾದಿ ಗಲಭೆಗಳಿಗೆ ಪ್ರಚೋ ದಿಸುವವರನ್ನು ಗುರುತಿಸಿ ಅಂತಹವರನ್ನು ಹದ್ದು ಬಸ್ತಿನಲ್ಲಿಡಲು ಪ್ರಯತ್ನಿಸಿದರು. ಇಂತಹ ದಕ್ಷ ಪೋಲೀಸ್ ಅಧಿಕಾರಿಯಿಂದ ತಮ್ಮ ಸಮಾಜ ಘಾತುಕ ಕೆಲಸಗಳಿಗೆ ಅಡ್ಡಿಯಾಗುತ್ತಿರುವುದನ್ನು ಸಹಿಸದ ಬಾಳೆಲೆಯ ಸಂಘ ಪರಿವಾರ ಮತ್ತು ಮರಗಳ್ಳರ ಕೂಟವು ಅಧಿಕಾರಿಯನ್ನು ಎತ್ತಂಗಡಿ ಮಾಡಿಸಲು ಕುತಂತ್ರ ರೂಪಿಸತೊಡಗಿದರು.

ಬೆನ್‌ಕಾಳಯ್ಯ ಪ್ರಕರಣ ಸೃಷ್ಟಿ

ಸೆಪ್ಟೆಂಬರ್ 4ರಂದು ಕಳ್ಳಿ ಚೆಂಡ ಬೆನ್ ಕಾಳಯ್ಯ ಎಂಬಾತ ಅಲ್ಪಸಂಖ್ಯಾತರೊಬ್ಬರು ಹಣ ಕೊಡಬೇಕೆಂಬ ಸುಳ್ಳು ಆರೋಪ ಹೊರಿಸಿ ಆತನನ್ನು ಚೆನ್ನಾಗಿ ಥಳಿಸಿದ ಜೊತೆಗೆ ಅಲ್ಲೆ ಇದ್ದ ಪೋಲೀಸ್ ಪೇದೆಯನ್ನು ಸಹ ಬೆದರಿಸಿದರು. ಇದನ್ನು ತಿಳಿದ ಸಬ್ ಇನ್ಸ್‌ಪೆಕ್ಟರ್ ರಾಜು ಪೊನ್ನಂಪೇಟೆಯಿಂದ ಬಾಳೆಲೆಗೆ ಬಂದು ಬೆನ್ ಕಾಳಯ್ಯನನ್ನು ಠಾಣೆಗೆ ಕರೆದಾಗ ಎಸ್.ಪಿ. ರಾಜು ರವರಿಗೇ ಆತ ಬೆದರಿಕೆ ಹಾಕಿದ್ದಾನೆ. ನಾನು ಠಾಣೆಗೆ ಬರುವುದಿಲ್ಲ. ಕೇಸ್ ಬೇಕಾದರೂ ರಿಜಿಸ್ಟರ್ ಮಾಡಿಕೊಳ್ಳಿ ಎಂದು ಗರ್ವದಿಂದ ಮಾತನಾಡಿ "ನಿನ್ನ ಹತ್ತಿರ ಒಂದೇ ರಿವಾಲ್ವರ್ ಇದೆ. ಅದೂ ಸರ್ಕಾರ ಕೊಟ್ಟಿದ್ದು, ನನ್ನ ಬಳಿ ಅಂತಹ ಎರಡು ಮೂರು ರಿವಾಲ್ವರ್ ಇವೆ. ನೀನು ನನ್ನನ್ನು ಏನೂ ಮಾಡಲು ಸಾಧ್ಯವಿಲ್ಲ" ಎಂದು ಬೆದರಿಸಿದ್ದಾನೆ. ಎಸ್.ಪಿ. ರಾಜುರವರು ಇಂತಹ ಕ್ರಿಮಿನಲ್ ಬೆನ್‌ನನ್ನು ಬಲವಂತವಾಗಿ ಠಾಣೆಗೆ ಕರೆದೊಯ್ದು ಕೇಸು ದಾಖಲಿಸಿದ್ದರು. ನಂತರ 40-50 ಜನರು ಆತನನ್ನು ಬಿಡಿಸಿಕೊಳ್ಳಲು ಯತ್ನಿಸಿದರು. ಶಾಂತಿ, ಸುವ್ಯವಸ್ಥೆ ನೆಪ ಹೇಳಿ ಸ್ಥಳೀಯ ಜನಪ್ರತಿನಿಧಿ ಯೊಬ್ಬರು ಬೆನ್‌ನನ್ನು ಬಿಡಿಸಿ ಕೊಂಡು ಹೋದ ನಂತರ ಪೋಲೀಸರು ಬೆನ್ ಕಾಳಯ್ಯನನ್ನು ಚೆನ್ನಾಗಿ ಥಳಿಸಿದ್ದಾರೆಂದು ಸುಳ್ಳು ಸುದ್ದಿ ಹಬ್ಬಿಸಿ ಬಾಳೆಲೆ, ಪೊನ್ನಂಪೇಟೆ, ಗೋಣಿ ಕೊಪ್ಪಲು ಬಂದ್ ನಡೆಸಿ ಸಬ್ ಇನ್ಸ್‌ಪೆಕ್ಟರ್ ಮೇಲೆ ಕ್ರಮಕ್ಕೆ ಒತ್ತಾಯಿಸಿ ದರು. ಬೆನ್ ಕಾಳಯ್ಯನ ಮೇಲೆ ಪೋಲೀಸ್ ಠಾಣೆಯಲ್ಲಿ ಈ ಹಿಂದೆಯೇ ಹಲವು ಕೇಸುಗಳು ದಾಖಲಾಗಿವೆ. ರೌಡಿ ನಿರ್ಬಂದ ಕಾಯ್ದೆಯಡಿ ರೌಡಿ ಪಟ್ಟಿಯಲ್ಲಿ ಈತನ ಹೆಸರಿದೆ. ಸರ್ಕಾರಿ ನೌಕರರ, ಪೋಲೀಸ್ ಕರ್ತವ್ಯಗಳಿಗೆ ಅಡ್ಡಿ ಮಾಡಿದ ಆರೋಪ, ಕೋಮುಗಲಭೆಗಳಿಗೆ ಪ್ರಚೋದಿಸಿದ ಆರೋಪಗಳೂ ಈತನ ಮೇಲಿದೆ.

ಚಿಡ್ಡಿಗಳಿಗೆ ಮಣಿದ ಸರ್ಕಾರ

ಸಂಘ ಪರಿವಾರ ಮತ್ತು ಸಮಾಜ ಘಾತುಕ ಶಕ್ತಿಗಳ ಕುತಂತ್ರಕ್ಕೆ ಮಣಿದ ಪೋಲೀಸ್ ಇಲಾಖೆ ರಾಜುರವರನ್ನು ಈಗ ಮಡಿಕೇರಿಗೆ ವರ್ಗ ಮಾಡಿದೆ. ಕೋಮುವಾದಿಗಳ ವಿರುದ್ದ ದಿಟ್ಟ ಕ್ರಮ ಕೈಗೊಳ್ಳುವ ಬದಲು ಕಾಂಗ್ರೆಸ್ ಸರ್ಕಾರ ಇಂತಹ ಶಕ್ತಿಗೊಂದಿಗೆ ಸದಾ ರಾಜಿ ಮಾಡಿಕೊಳ್ಳುತ್ತಾ ಸಂಘ ಪರಿವಾರ ಮತ್ತಷ್ಟು ಬೆಳೆಯಲು ಅವಕಾಶ ನೀಡುತ್ತಿ ರುವುದಕ್ಕೆ ಈ ಪ್ರಕರಣ ಮತ್ತೊಂದು ಸಾಕ್ಷಿಯಾಗಿದೆ.

ಸಿ.ಪಿ.ಐ(ಎಂ) ವಿರೋಧ

ನಿಷ್ಠಾವಂತ ಪೋಲೀಸ್ ಅಧಿಕಾರಿ ರಾಜು ರವರನ್ನು ವರ್ಗಾವಣೆ ಮಾಡಿರುವುದನ್ನು ಸಿಪಿಐ(ಎಂ) ವಿರೋಧ ವ್ಯಕ್ತಪಡಿಸಿದೆ. ಕೋಮು ವಾದಿಗಳ ಅಟ್ಟಹಾಸ, ಮರಗಳ್ಳರ ಕಳ್ಳ ವ್ಯವ ಹಾರಗಳನ್ನು ಮಟ್ಟ ಹಾಕಲು ಜನರಲ್ಲಿ ಆತ್ಮ ವಿಶ್ವಾಸ ತುಂಬಲು ರಾಜುರವರ ವರ್ಗಾವಣೆ ಯನ್ನು ರದ್ದುಗೊಳಿಸಿ ಮತ್ತೆ ಪೊನ್ನಂಪೇಟೆ ಠಾಣೆಗೆ ನೇಮಿಸಬೇಕೆಂದು ಸಿಪಿಐ(ಎಂ) ಕೊಡಗು ಜಿಲ್ಲಾ ಸಮಿತಿ ಸರ್ಕಾರವನ್ನು ಒತ್ತಾಯಿಸಿದೆ.

ಈ ವಾರ ಕರ್ನಾಟಕ...

ಪುಟ 3 ರಿಂದ

ಕೋಮಿನವರನ್ನು ಓಲೈಸಲು ಇನ್ನೊಂದು ಕೋಮಿನವರನ್ನು ಬಂಧಿಸಲಾಗಿದೆ ಎಂಬ ಆರೋಪ. ಮುಂದುವರಿದ ಪೋಲೀಸರ ಪೆರೇಡು ಈಗ ಅಲ್ಲಿಯೂ ಶಾಂತಿಯಿದೆಯೆಂದು ವರದಿ.

ಹಿಂದೆ ಭಾರತದ ಸ್ವಾತಂತ್ರ್ಯ ಹೋರಾಟದಲ್ಲಿ 'ಭಾಗವಹಿಸಿದ್ದ' ಗಣಪತಿಗೆ ಈಗ 'ರಾಷ್ಟ್ರೀಯ ಜಾಗೃತಿ'ಯ ಕೆಲಸವಂತೆ. ಈ ಕೆಲಸವನ್ನು ಹಂಚಿ ಕೆಲಸ ಮಾಡಿಸುತ್ತಿರುವವ ಏಕೈಕ ಗುತ್ತಿಗೆದಾರರು ಈ ಸಂಘ ಪರಿವಾರದವರು.

ಘಟನೆ 3-ಪತ್ರಿಕೆ ಮುದ್ರಣಕ್ಕೆ ಹೋಗುತ್ತಿರುವಂತೆಯೇ ಬಂದ ಸುದ್ದಿ ಬೆಳಗಾವಿಯ ಟಿಳಕವಾಡಿಯಲ್ಲಿ'ಪ್ರಾರ್ಥನಾ ಮಂದಿರ'ದ ಗೋಡೆ ಮೇಲೆ 'ಪ್ರಚೋದನಕಾರಿ' ಘೋಷಣೆ ಬರೆಯಲಾಯಿತೆಂದು ಗಲಭೆ ಭುಗಿಲೆದ್ದಿದೆ. ಅಲ್ಲಿ ಬಲಿಹಾಕಲು ಇನ್ನೆಂಥ ಸಿದ್ಧತೆ ಮಾಡಲಾಗಿದೆಯೋ.

ಹೀಗಾಗಿ ದೇಶದ ಹಲವೆಡೆ ಗಣಪನ 'ವಿಸರ್ಜನೆ' ಸಂದರ್ಭದಲ್ಲಿ ಗಲಭೆಗಳು ಹಬ್ಬಿವೆ. ದಕ್ಷಿಣ ಭಾರತವನ್ನು ಅದರಲ್ಲೂ ಕರ್ನಾಟಕವನ್ನು ಏನಾದರೂ ಮಾಡಿ (ಸದ್ಯ ತಿರಸ್ಕೃತವಾಗುತ್ತಿದ್ದರೂ) ತಮ್ಮ ನೆಲೆಯಾಗಿಸಿ ಮೇಲುಗೈ ಸಾಧಿಸಬೇಕೆಂಬ ಆರ್.ಎಸ್.ಎಸ್. ಬಿಜೆಪಿಗಳ ವರಸೆ ಈಗಿನಿಂದ ತೀವ್ರ. ಅದರಲ್ಲೂ ಇನ್ನೆರಡು ವರುಷಗಳಲ್ಲಿ ವಿಧಾನಸಭೆಗೆ ಚುನಾವಣೆಗಳ ಬರಲಿವೆ. ಮೇಲಾಗಿ ಅದ್ವಾನಿಯವರನ್ನು ಪೂರ್ಣ ಪ್ರಮಾಣದ ಪ್ರಧಾನಿಯನ್ನಾಗಿಸುವ ಅಜೆಂಡಾಬೇರೆ. ಹೀಗಾಗಿ ಎಲ್ಲ ನಾಯಕರೂ ರಾಜ್ಯದ ತುಂಬಾ ಕಾರ್ಯಮಗ್ನರು.

ಈಗ ಕರ್ನಾಟಕ ಶಾಂತವಾಗಿದೆ ಎಂಬ ವರದಿಗಳು ಗೃಹಸಚಿವ ಖರ್ಗೆ ಮೇಜಿನ ಮೇಲಿದೆ. ಆದರೆ ಇದು ದಳ್ಳುರಿ ಹಬ್ಬಿಸಲು ನಡೆಸುವ ಸಿದ್ಧತೆಯ ಅವಧಿಯೆಂಬುದು ಸುಳ್ಳಲ್ಲ.

ದಲಿತ ಚಳುವಳಿಯಲ್ಲಿ ಈ ಒಡಕೇಕೆ?

ನಾಡಿನ ದಲಿತರದಲ್ಲಿ ಸ್ವಾಭಿಮಾನದ ಕಿಚ್ಚು ಹೊತ್ತಿಸಿ, ಅನ್ಯಾಯ, ಅಸಮಾನತೆ ದಬ್ಬಾಳಿಕೆಗಳ ವಿರುದ್ಧ ಪ್ರಭಲವಾದ ಒಂದು ಆಂದೋಲನ ಸಾರಿದ್ದ ಕರ್ನಾಟಕ ದಲಿತ ಸಂಘರ್ಷ ಸಮಿತಿಯಲ್ಲಿ ಮತ್ತೆ ಒಡಕು ಕಂಡಿದೆ. 1980ರ ದಶಕದಲ್ಲಿದ್ದ ಸಂಘಟನಾ ಶಕ್ತಿ-ಚಳುವಳಿಯ ಕಾವು ಈಗಿಲ್ಲ. ಅದು ಹಂತಹಂತವಾಗಿ ಕ್ಷೀಣಿಸುತ್ತಾ, ಹಲವಾರು ಬಣಗಳಾಗಿ ಒಡೆದು ದುರ್ಬಲವಾಗುತ್ತಿದೆ. ಇದು ಜಾಗತೀಕರಣ-ಕೋಮುವಾದದ ಧಾಳಿಗಳು ಹೆಚ್ಚುತ್ತಿರುವ ಈ ಸಂದರ್ಭದಲ್ಲಿ ಪ್ರಜಾಸತ್ತಾತ್ಮಕ ಚಳುವಳಿಯಲ್ಲಿ ಗಂಭೀರವಾದ ಬೆಳವಣಿಗೆ.

ದಲಿತರ ಮೇಲಿನ ದೌರ್ಜನ್ಯಗಳು ನಡೆದಾಗಲೆಲ್ಲ ದಲಿತ ಚಳುವಳಿ ಘರ್ಜಿಸಿದೆ. ಶೋಷಿತರಲ್ಲಿ ಆತ್ಮವಿಶ್ವಾಸ, ಎಚ್ಚರವನ್ನೂ ಮೂಡಿಸಿದೆ. ಅನೇಕ ಹೋರಾಟಗಳು ಸ್ಥಾಪಿತ ಹಿತಾಸಕ್ತಿಗಳನ್ನು ನಡುಗಿಸಿವೆ. ಇಂತಹ ಹಲವಾರು ಗಟ್ಟಿ ಹೋರಾಟಗಳು ಕರ್ನಾಟಕದ ರಾಜಕೀಯ, ಸಾಮಾಜಿಕ ರಂಗಗಳಲ್ಲಿ, ಚಿಂತನೆಗಳಲ್ಲಿ ಹಲವು ಬದಲಾವಣೆ ತರಲು ಕೊಡುಗೆ ನೀಡಿದೆ. ದಮನದ ವಿರುದ್ಧ ನಡೆದ ಎತ್ತರದ ಹೋರಾಟಗಳ ಜೊತೆ ದಲಿತ ಸಮುದಾಯದ ವಿಮೋಚನೆಗೆ ಪ್ರಗತಿದಾಯಕ ಹೆಜ್ಜೆಯಾಗಿರುವ ಭೂಮಿ ಪ್ರಶ್ನೆ, ಕೂಲಿ, ಮೊದಲಾದ ದುಡಿವವರ್ಗದ ಇತರೆ ಪ್ರಶ್ನೆಗಳಿಗಾಗಿ ಆಳಕ್ಕಿಳಿಯಲಿಲ್ಲ. (1990ರ ದಶಕದಲ್ಲಿನ ಭೂ ಹೋರಾಟಗಳು ಬಿಟ್ಟರೆ) ದುಡಿವವರ್ಗದ ಭಾಗವೇ ಆಗಿರುವ ಅತ್ಯಂತ ಶೋಷಿತ ವರ್ಗದ ಈ ಚಳುವಳಿಯು ಜನತೆಯ ಪ್ರಜಾಸತ್ತಾತ್ಮಕ ಚಳುವಳಿಯೊಂದಿಗೆ ಬೆಸೆದು ಹಾಸು ಹೊಕ್ಕಾಗಲಿಲ್ಲ. ಬಹಳ ಮುಖ್ಯವಾಗಿ ಅದಕ್ಕಾಗಿ ಬೇಕಾದ ಗಟ್ಟಿತನದ ಸೈದ್ಧಾಂತಿಕ, ರಾಜಕೀಯ ನೆಲೆಗಟ್ಟಿನಲ್ಲಿ ಎಳಕಗೊಂಡು ಅರಳಲಿಲ್ಲ. ಹೀಗಾಗಿ ಕರ್ನಾಟಕ ಹಾಗೂ ಭಾರತ ಕಂಡ ಹಲವಾರು ರಾಜಕೀಯ-ಸಾಮಾಜಿಕ-ಆರ್ಥಿಕ ಸ್ಥಿತ್ಯಂತರ, ಏರಿಳಿತಗಳಲ್ಲಿ ದೃಢತೆಯನ್ನು ಸಾರಲಿಲ್ಲ. ಹಿಂದಿನ ಹಾಗೂ ಇಂದಿನ ಒಡಕು-ತಾಕಲಾಟಗಳಿಗೆ ವ್ಯಕ್ತಿಗತ ಕಾರಣಗಳನ್ನು ಗುರುತಿಸುವಾಗಲೇ ಮುಖ್ಯವಾಗಿ ಸೈದ್ಧಾಂತಿಕ-ರಾಜಕೀಯ ಕಾರಣಗಳು ಪ್ರಧಾನವಾಗುತ್ತವೆ. ಈ ಕುರಿತು ಮುಕ್ತವಾದ ವಿಮರ್ಶೆ-ಸ್ವವಿಮರ್ಶೆಗಳ ಅಗತ್ಯವಿದೆ. ಅಂದಾಗ ಮಾತ್ರ ಇನ್ನೂ ಹೆಚ್ಚಿನ ದುರ್ಬಲತೆ ಹಾಗೂ ಒಡಕಿನ ಆಹುತಿ ತಪ್ಪಿಸಬಹುದು. ವರ್ತಮಾನದ ಸವಾಲುಗಳಿಗೆ ದುಡಿವವರ್ಗದ ಪ್ರಬಲ ಪ್ರತಿರೋಧ ಒಡ್ಡಬಹುದು. ಆ ನಿಟ್ಟಿನ ಕ್ರಿಯಾಶೀಲತೆ ಇಂದಿನ ತುರ್ತು ಅಗತ್ಯ.

ರೈಲು ಅಫಘಾತ : ಯಾರು ಹೊಣೆ?

ರಾಜಿನಾಮೆ ನೀಡದ ಬೇಜವಾಬ್ದಾರಿ ಸಚಿವ ನಿತಿಶ್‌ಕುಮಾರ್

ರೈಲ್ವೆ ಅಪಘಾತಗಳ ಮೂಲ ಕಾರಣಗಳನ್ನು ಪತ್ತೆ ಹಚ್ಚಿ, ಅದನ್ನು ಸರಿಪಡಿಸದೇ, ಇವೆಲ್ಲ ವಿಧ್ವಂಸಕ ಶಕ್ತಿಗಳ ಕೃತ್ಯವೆಂದು ಸರಾಗವಾಗಿ ರಾಗ ಹಾಡುವ ಈ ರೈಲ್ವೆ ಸಚಿವರಿಗೆ ನಾಗರಿಕ ರಕ್ಷಣೆಯ ಕಿಂಚಿತ್ತಾದರೂ ಹೊಣೆ ಇದೆಯೇ? ತನಿಖಾ ವರದಿಗಳ ಶಿಫಾರಸುಗಳಿಗೇನು ಬೆಲೆಯಿದೆ? ಇನ್ನೆಷ್ಟು ದುರಂತಗಳು ಸಂಭವಿಸಬೇಕು?

ಒಂದರ ಮೇಲೊಂದರಂತೆ ಅಫಘಾತ ಸಂಭವಿಸಿದರೂ ಅಧಿಕಾರಕ್ಕೆ ಅಂಟಿಕೊಂಡು ಕುಳಿತಿದ್ದಾರೆ. ಮಾನ್ಯ ರೈಲ್ವೆ ಮಂತ್ರಿಗಳು ನೂರಾರು ಜನ ಸತ್ತರೂ, ಸಾವಿರಾರು ಜನ ಗಾಯಗೊಂಡರೂ, ಅದೊಂದು ವಿಧ್ವಂಸಕೃತ್ಯ ಎಂದೋ, ಐಎಸ್ಐ ಕೈವಾಡ ಎಂದೋ ಹೇಳಿಕೆ ನೀಡಿ ಕೈತೊಳೆದು ಕೊಂಡಿದ್ದಾರೆ ರೈಲ್ವೆ ಮಂತ್ರಿ ಸತೀಶ್ ಕುಮಾರ್ ನೈತಿಕತೆ ಇಲ್ಲದ ನಿತಿಶ್ ಕುಮಾರ್ ಬಳಗ ನೈತಿಕ ಹೊಣೆ ಹೊತ್ತು ರಾಜಿನಾಮೆ ನೀಡಿ ಹೊರ ನಡೆಯುಬೇಕು.



ಆದರೆ ಇಪರಂಧ ಇಂಥದ್ದನ್ನು ನಿರೀಕ್ಷಿಸುವುದು ಹೇಗೆ?

ದಿನ ಬೆಳಗಾದರೆ ಪ್ರಯಾಣ ದರ, ಸಾಗಾಣಿಕೆ ದರ ಹೆಚ್ಚಿಸುವ ಕೇಂದ್ರ ಸರಕಾರ, ರೈಲ್ವೆ ಸುರಕ್ಷಿತೆಯ ಬಗ್ಗೆ ಯಾವುದೇ ಕ್ರಮ ಇಲ್ಲ. ಆದ್ದರಿಂದಲೇ ಇತ್ತೀಚೆಗೆ ಬಿಹಾರದ ರಾಣಿಗಂಜ್ ಬಳಿಯಲ್ಲಿ ಸಂಭವಿಸಿದ ಭೀಕರ ರೈಲು ಅಫಘಾತದಲ್ಲಿ 150ಕ್ಕೂ ಹೆಚ್ಚು ಜನ ಮೃತಪಟ್ಟು, ಸಾವಿರಾರು ಜನಕ್ಕೆ ಗಾಯಗಳಾಗಿವೆ. ಕೆಲವರ ಕೈಕಾಲು ತುಂಡಾಗಿದ್ದು ಶಾಶ್ವತ ಅಂಗವಿಕಲರಾಗಿದ್ದಾರೆ.

ಕೇಂದ್ರ ಸರಕಾರ ಹೇಳುತ್ತಿರುವ ವಿಧ್ವಂಸಕ ಕೃತ್ಯ ನಂಬಲು ಸಾಧ್ಯವಿಲ್ಲ. ಏಕೆಂದರೆ ಅದೇ ರೈಲು ಹಾದಿಯ ಮೇಲೆ ಕೆಲವೇ ಸಮಿತಿಗಳ ಮೊದಲು ಇನ್ನೊಂದು ಗೂಡ್ಸ್ ರೈಲು ಹಾದುಹೋಗಿತ್ತು. ಕೆಲವೇ ನಿಮಿಷಗಳ ಅಂತರದಲ್ಲಿ ವಿಧ್ವಂಸಕ ಕೃತ್ಯ ಸಾಧ್ಯವೆ? 6 ವರ್ಷಗಳ ಹಿಂದೆ ಅದೇ ಟ್ರ್ಯಾಕ್‌ನಲ್ಲಿ ರಾಜಧಾನಿ ಎಕ್ಸ್‌ಪ್ರೆಸ್ ಹಳಿತಪ್ಪಿ ಅಫಘಾತ ಸಂಭವಿಸಿತ್ತು.. ಆಗಲೂ ವಿಧ್ವಂಸರ ಕೃತ್ಯ ಎಂದೇ ಹೆಸರಿಸಲಾಗಿತ್ತು. ಹಾಗಾದರೆ ಈ 6 ವರ್ಷಗಳಲ್ಲಿ ತನಿಖೆ ಯಾಕೆ ನಡೆಯಲಿಲ್ಲ. ಒಂದು ವೇಳ ತನಿಖೆ ನಡೆದಿದ್ದರೆ, ಅವರ ವರದಿಯೇನು ಹೇಳುತ್ತದೆ.

ಅಭಿವೃದ್ಧಿ ಇಲ್ಲ

ಪ್ರತಿವರ್ಷ ರೈಲ್ವೆ ಬಜೆಟ್ ಮಂಡಿಸಿದಾಗ, ಜನಪ್ರಿಯತೆ ಗಳಿಸಿ ಕೊಳ್ಳುವುದಕ್ಕಾಗಿ ಅಥವಾ ಜನರ ಒತ್ತಾಯದಿಂದ ಹೊಸ ರೈಲುಗಳನ್ನು ಓಡಿಸುತ್ತಾರೆ. ಆದರೆ ಹೊಸ ಮಾರ್ಗಗಳನ್ನು ಹಾಕುವುದಕ್ಕಾಗಿ ಅಥವಾ ಇರುವ ಮಾರ್ಗಗಳನ್ನು ಭದ್ರಪಡಿಸುವುದಕ್ಕೆ ಯಾವುದೇ ಕಾರ್ಯಕ್ರಮಗಳಿಲ್ಲ. ಹೊಸ ವಲಯ ಕಛೇರಿ, ವಿಭಾಗೀಯ ಕಛೇರಿಗಳನ್ನು ಸ್ಥಾಪಿಸಿ, ಒಂದುರಾಜ್ಯದ ಜನರನ್ನು ವಿರುದ್ಧ ಎತ್ತಿಕಟ್ಟುವ ಕೆಟ್ಟ ಕೆಲಸಕ್ಕೆ ಕೈ ಹಾಕುವ ದುಷ್ಟ ಜನ, ಇದಕ್ಕಾಗಿ ಕೋಟಿಗಟ್ಟಲೆ ಖರ್ಚು ಮಾಡುತ್ತಾರೆ. ಆದರೆ ಈಗ ಇರುವ ರೈಲ್ವೆ ಮಾರ್ಗಗಳನ್ನು ದುರಸ್ಥಿ ಮಾಡಲು ರೈಲ್ವೆ ಬ್ರಿಡ್ಜ್‌ಗಳನ್ನು ದುರಸ್ತಿ ಮಾಡಲು ಅಥವಾ ಹೊಸ ಬ್ರಿಡ್ಜ್‌ಗಳನ್ನು ಸ್ಥಾಪಿಸಲು ಕಾರ್ಯಕ್ರಮ ಇಲ್ಲ.

ರೈಲ್ವೆ ಮಂತ್ರಿಯೇ ನೇಮಿಸಿದ ರಾಖೇಶ್ ಮೋಹನ್ ಸಮಿತಿಯು, ಹೊಸ ರೈಲ್ವೆ ವಿಭಾಗೀಯ ಕಛೇರಿ, ವಲಯ ಕಛೇರಿಗಳನ್ನು ಸ್ಥಾಪಿಸುವುದು ಅಗತ್ಯ ಇಲ್ಲ ಎಂದು ಹೇಳಿತ್ತು. ಆದರೆ ಅದಕ್ಕೆ ಕಿವಿಗೊಡದೆ, ಹೊಸ ವಲಯಗಳನ್ನು ಸ್ಥಾಪಿಸಿ, ಜನರ ಅತೃಪ್ತಿಗೆ ಕಾರಣರಾದರು.

ವರದಿ ನಿರ್ಲಕ್ಷ್ಯ

ಆದರೆ ರೈಲ್ವೆ ಮಂಡಳಿಯೇ ನೇಮಿಸಿದ ಖನ್ನಾ ಸಮಿತಿ, ರಾಜಧಾನಿ ಎಕ್ಸ್ ಪ್ರೆಸ್ ಅಪಘಾತ ನಡೆದ ರಫೀಗಂಜ್ ಬಳಿ ಇರುವ ಸೇತುವೆಯನ್ನು ಬದಲಿಸಭೇಕು ಎಂದು 1991ರಲ್ಲಿ ಶಿಫಾರಸ್ಸು ಮಾಡಿತ್ತು. ಆ ಸೇತುವೆ ಕಟ್ಟಿದ್ದು 1916ರಲ್ಲಿ 86 ವರ್ಷಗಳ ಹಿಂದೆ ಆ ಸೇತುವೆಯನ್ನು ಒಮ್ಮೆ ದುರಸ್ತಿ ಮಾಡಿಸಿದ್ದು. 1958ರಲ್ಲಿ 44 ವರ್ಷಗಳ ಹಿಂದೆ ಅದನ್ನು ಪುನಃ ದುರಸ್ತಿಮಾಡಲು, ಹೊಸ ಸೇತುವೆ ಕಟ್ಟಲು ರೈಲ್ವೆ ಬಳಿ ಹಣ ಇಲ್ಲ! ಹಾಗಾದರೆ ಗಂಟೆಗೆ 130 ಕಿ.ಮೀ ವೇಗವಾಗಿ ಚಲಿಸಬೇಕಾದ ರಾಜಧಾನಿ, ಶತಾಬ್ದಿ ರೈಲುಗಳು ಇಂತಹ ಸೇತುವೆಗಳಲ್ಲಿ ಚಲಿಸುವುದು ಹೇಗೆ.

ಹಾಗೆಯೇ ರೈಲ್ವೆಮಾರ್ಗಗಳ ರಕ್ಷಣೆಗೆಂದು ವರ್ಷಕ್ಕೆ 15 ಕೋಟಿರೂ. ಗಳನ್ನು ರಾಜ್ಯಕ್ಕೆ ನೀಡಲಾಗುತ್ತದೆ. ಇದು ಯಾವ ಮೂಲೆಗೆ? ಇದನ್ನು ಕೂಡ ರಾಜ್ಯ ಸರಕಾರಗಳು ಸರಿಯಾಗಿ ಬಳಿಸಿ ಕೊಳ್ಳುತ್ತಿವೆಯೇ ಹಾಗೂ ರೈಲ್ವೆ ಮಾರ್ಗಗಳ ರಕ್ಷಣೆ ಮಾಡುತ್ತಿವೆಯೇ ಎಂಬ ಬಗ್ಗೆ ಸರಿಯಾದ ಪರಿಶೀಲನೆ ನಡೆಯುತ್ತಿಲ್ಲ. ಹೀಗೆ ಮುಂದುವರಿದರೆ ಇನ್ನಷ್ಟು ಅಫಘಾತಗಳು ಹೆಚ್ಚುತ್ತವೆ.

ಭೀಕರ ಅಫಘಾತದ ಬಗ್ಗೆ ಉನ್ನತ ಮಟ್ಟದ ತನಿಖೆ ನಡೆಯಬೇಕು. ಹಾಗೂ ಅಫಘಾತಗಳನ್ನು ತಪ್ಪಿಸುವ ಪರಿಹಾರ ಮಾರ್ಗಗಳನ್ನು ಕಂಡುಹಿಡಿಯಬೇಕು. ರೈಲ್ ಅಫಘಾತಗಳ ಸರಮಾನೆಗಳೇ ನಡೆಯುತ್ತಿರುವಾಗ ನಿತೀಶ್ ಕುಮಾರ್ ರಾಜಿನಾಮೆನೀಡಲೇಬೇಕು.

ಸೆಪ್ಟೆಂಬರ್ 11'ರ ನಂತರದ ಒಂದು ವರ್ಷ

ಪ್ರಕಾಶ್ ಕಾರಟ್

11'ರಂದು ನಡೆಸಲಾದ ಭಯೋತ್ಪಾಧಕತೆಯ ಧಾಳಿ ಅಂತೆಯೇ ಅದನ್ನು ನಿಗ್ರಹಿಸುವ ಹೆಸರಿನಲ್ಲಿ ಅಮಾಯಕರನ್ನು ಬಲಿ ತೆಗೆದುಕೊಳ್ಳುವ ಅಮೇರಿಕಾದ ಸಾಮ್ರಾಜ್ಯಶಾಹಿಯ ದಬ್ಬಾಳಿಕೆಯನ್ನು ಸಹಾ ವಿರೋಧಿಸಿ ಸೋಲಿಸಬೇಕಿದೆ.

ವರ್ಷದ ಹಿಂದೆ ಸೆಪ್ಟೆಂಬರ್ 11ರಂದು ಅಮೇರಿಕಾದಲ್ಲಿ ನಡೆದ ಭಯಾನಕ ದಾಳಿಯಲ್ಲಿ ಮಡಿದ ಅಮಾಯಕರನ್ನು ಇಡೀ ವಿಶ್ವ ನೆನೆಯುತ್ತಿದೆ. ಧರ್ಮಾಂಧತೆ ಪ್ರೇರಿತ ಭಯೋತ್ಪಾದನೆಯನ್ನು ದೃಢವಾಗಿ ಹತ್ತಿಕ್ಕುವ ಯತ್ನವನ್ನು ಪುನರುಚ್ಚರಿಸುವ ಸಂದರ್ಭವಿದು. ಅಮೇರಿಕಾದ ಆಳುವ ವಲಯ ಹಾಗೂ ಪಶ್ಚಿಮದಿಂದ ನಿಯಂತ್ರಿಸಲ್ಪಟ್ಟಿರುವ ಬಲಿಷ್ಠ ಗುತ್ತೆದಾರಿ ಮಾಧ್ಯಮಗಳು ಪ್ರತಿಪಾದಿಸಿದಂತೆ ಸೆಪ್ಟೆಂಬರ್ 11'ರ ಧಾಳಿಗಳು ವಿಶ್ವವನ್ನು ಬದಲಿಸಿಲ್ಲ. ಆದರೆ ಕಳೆದ ಒಂದು ವರ್ಷದಲ್ಲಿ ಅಮೇರಿಕಾದ ಯಜಮಾನಿಕೆ ವಿಶ್ವದ ಮೇಲೆ ಹೆಚ್ಚಿದೆ. ಸೆಪ್ಟೆಂಬರ್ 11'ರ ವರ್ಷಾಚರಣೆ ಯನ್ನು ನೆನೆಯುತ್ತಲೆ ಅಧ್ಯಕ್ಷ ಬುಷ್ ಇರಾಕ್ ಮೇಲೆ ವಿನಾಶಕಾರಿ ಯುದ್ಧ ಏರಲು ಹೊರಟಿದ್ದಾರೆ. ಅಮೇರಿಕಾ ಭಯೋತ್ಪಾದಕ ಧಾಳಿಗೆ ಬಲಿಯಾದ ಅಮಾಯಕರನ್ನು ನೆನೆಯುತ್ತಿರುವಾಗಲೇ, ಅಮೇರಿಕಾ ಆರಂಭಿಸಿರುವ "ಭಯೋತ್ಪಾದಕತೆ ವಿರುದ್ಧದ ಸಮರಕ್ಕೆ" ಮತ್ತಷ್ಟು ಅಮಾಯಕರು ಬಲಿಯಾಗಲಿದ್ದಾರೆ.

ವಿನಾಶದ ಹೆಚ್ಚಳ

ಬುಷ್ ಪ್ರಕಾರ "ಭಯೋತ್ಪಾದಕತೆ ವಿರುದ್ಧದ ಸಮರ", ಅಂತ್ಯವಿಲ್ಲದ್ದು. ಮೊದಲನೆ ಯದು ಅಫಘಾನಿಸ್ತಾನದ ವಿರುದ್ಧದ ಯುದ್ಧವಾದರೆ, ನಂತರದ್ದು ಫಿಲಿಫೈನ್ಸ್‌ನಲ್ಲಿ ಅಬು ಸಾಯುಪ್ ಗುಂಪನ್ನು ಹಿಡಿಯಲೆಂದು, ಅಲ್ಲಿಗೆ ಅಮೇರಿಕಾದ ವಿಶೇಷ ಪಡೆಯ ಸೈನ್ಯವನ್ನು ಕಳುಹಿಸಿದ್ದು. ತನ್ನ ಸೈನ್ಯವನ್ನು ಫಿಲಿಫೈನ್ಸ್ ನೆಲೆಯ ಮೇಲಿರಿಸುವ ಮೂಲಕ ಅಮೇರಿಕಾ ಫಿಲಿಫೈನ್ಸ್ ರಾಷ್ಟ್ರದ ಸಂವಿಧಾನ ವನ್ನು ಉಲ್ಲಂಘಿಸಿದೆ. ನ್ಯೂಯಾರ್ಕ್ ಮೇಲಿನ ಧಾಳಿಯಿಂದ ಸತ್ತ ಅಮಾಯಕರ ಸಂಖ್ಯೆಯನ್ನು, ಅಫಘಾನಿಸ್ತಾನದ ಮೇಲಿನ ಬಾಂಬ್ ಧಾಳಿಯಿಂದ ಸತ್ತ ಅಮಾಯಕರ ಸಂಖ್ಯೆ ಮೀರಿಸಿದೆ. ಅಮೇರಿಕಾದ ಅತ್ಯಂತ ಜಾಗರೂಕ ಲೆಕ್ಕಚಾರದಂತೆಯೇ ಅಫಘಾನಿಸ್ತಾನದಲ್ಲಿ 3500ಕ್ಕೂ ಹೆಚ್ಚು ನಾಗರೀಕರ ಸಾವು ಸಂಭವಿಸಿದೆ.

ಅಫಘಾನಿಸ್ತಾನದ ಮೇಲಿನ ಯುದ್ಧದ ಸಮಯದಲ್ಲಿ ಉಜ್‌ಬೆಕಿಸ್ತಾನ ಮತ್ತು ಕಜಾಖ್‌ಸ್ತಾನದಲ್ಲಿ ನಿರ್ಮಿಸಲಾಗಿದ್ದ ಅಮೇರಿಕಾದ ಮಿಲಿಟರಿ ನೆಲೆಗಳನ್ನು ಮುಂದುವರಿಸಲಾಗಿದೆ. ಜಗತ್ತಿನ ಎಲ್ಲಾ ಮೂಲೆಗಳಲ್ಲೂ ಭಯೋತ್ಪಾದಕತೆ ಭಯೋತ್ಪಾದಕರ ವಿರುದ್ಧದ ಧಾಳಿಗಳಲ್ಲಿ ಅಮೇರಿಕಾ ತಯಾರಿಸಿದ ಎಫ್-16 ಬಾಂಬ್‌ಗಳು ಮತ್ತು ಹೆಲಿಕಾಪ್ಟರ್ ಗನ್ ಶಿಪ್‌ಗಳನ್ನು ಬಳಸಿರುವುದನ್ನು ಅಮೇರಿಕಾ ಪ್ರತಿಪಾದಿಸಿದೆ.

ಯುದ್ಧಾಪಾಯ

ಈ ಜಾಗತೀಕ ಯುದ್ಧದ ಪರಿಣಾಮ ಅಮೇರಿಕಾದ ಮಿಲಿಟರಿ ವೆಚ್ಚದಲ್ಲಿ ತೀವ್ರ ಹೆಚ್ಚಳವಾಗಿದೆ. ಹಳೆದ ವರ್ಷಕ್ಕೆ ಹೋಲಿಸಿದಲ್ಲಿ 50 ಬಿಲಿಯನ್ ಡಾಲರ್ ಹೆಚ್ಚಳ ಮಾಡಲಾಗಿದೆ. ಇದುವರೆಗಿನ ಅತೀ ಹೆಚ್ಚಿನ ವೆಚ್ಚ ಇದಾಗಿದೆ. ಇತರೆ ರಾಷ್ಟ್ರಗಳು ತನ್ನ ಮೇಲೆ ಕ್ಷಿಪಣಿ ಧಾಳಿ ನಡೆಸಬಹುದೆಂಬ ನೆಪದಲ್ಲಿ ರಾಷ್ಟ್ರೀಯ ಕ್ಷಿಪಣಿ ರಕ್ಷಣೆ(ಎನ್.ಎಮ್.ಡಿ) ಯೋಜನೆಯೊಂದಿಗೆ ಮುಂದಾಗಿದೆ. ಅತ್ಯಾದುನಿಕ ಅಸ್ತ್ರಗಳನ್ನು ಮತ್ತು ಮಿಲಿಟರಿ ವೆಚ್ಚದ ಲೆಕ್ಕದಲ್ಲಿ ಅಮೇರಿಕಾವು ರಷ್ಯ, ಚೀನಾ ಮತ್ತು ಐರೋಪ್ಯ ರಾಷ್ಟ್ರಗಳ ರಕ್ಷಣಾ ವೆಚ್ಚವನ್ನು ಮೀರಿದೆ. ಅಣ್ವಸ್ತ್ರಗಳ ಬಳಕೆಗೆ ಸಂಬಂಧಿಸಿದಂತೆ ಮತ್ತಷ್ಟು ಆಕ್ರಮಣಕಾರಿ ನೀತಿಯನ್ನು ಪ್ರತಿಪಾದಿಸಲಾಗುತ್ತಿದೆ. ಅಮೇರಿಕಾದ ಅಣ್ವಸ್ತ್ರ ಶಕ್ತಿಗಳ ನಿರ್ಣಾಯಕ ಗುಂಪುಗಳನ್ನಾಗಿ ಲಿಬಿಯಾ, ಸಿರಿಯಾ, ಇರಾನ್, ಇರಾಕ್ ಮತ್ತು ಉತ್ತರ ಕೋರಿಯಾವನ್ನು ಉದ್ದೇಶಪೂರ್ವಕವಾಗಿ ಪಟ್ಟಿಮಾಡಲಾಗಿದೆ. ಇದರ ಅರ್ಥ ಅಪಾಯವಿದೆ ಎಂದು ಅಮೇರಿಕಾವು ಅಣ್ವಸ್ತ್ರರಹಿತ ರಾಷ್ಟ್ರಗಳ ಮೇಲೂ ಅಣ್ವಸ್ತ್ರ ಬಳಸಲಿದೆ ಎಂಬುದಾಗಿದೆ.

ಅಮೇರಿಕಾ ಆಡಳಿತದ ಎಲ್ಲಾ ಪ್ರಯತ್ನಗಳ ಮಧ್ಯೆಯೂ ಸೆಪ್ಟೆಂಬರ್ 11'ರ ಧಾಳಿಯ ಹಿಂದೆ ಇರಾಕ್ ಕೈವಾಡ ಇರುವ ಯಾವುದೇ ಪುರಾವೆ ದೊರೆತಿಲ್ಲ. ಆದರೂ ಬುಷ್ ಪ್ರತಿಪಾದನೆಯಂತೆ ಸಮರವನ್ನು ಮುಂದುವರಿಸಬೇಕಿದೆ ಹಾಗೂ ಮುಂದಿನ ಗುರಿ ಇರಾಕ್ ಆಗಿದೆ. ಇರಾಕ್ ಮೇಲೆ ಸಂಪೂರ್ಣ ಪ್ರಮಾಣದ ಯುದ್ಧವೆಂದರೆ, ಅಫಘಾನಿಸ್ತಾನದಲ್ಲಿ ಸಂಭವಿಸಿದ ಅನಾಹುತ ಗಳಿಗಿಂತ ಹೆಚ್ಚು ಭೀಕರ ಅನಾಹುತ ಹಾಗೂ ಪರಿಣಾಮಕ್ಕೆ ಸಿದ್ಧರಿರಬೇಕಿದೆ.

ದ್ವಂದ್ವ ನೀತಿ ಬೇಡ

ಭಯೋತ್ಪಾದನೆಯ ವಿರುದ್ಧದ ಸಮರದ ಒಂದು ವರ್ಷದಲ್ಲಿ ತನ್ನ ಹಿಡಿತಕ್ಕೆ ಬಾರದ ಶಕ್ತಿಗಳನ್ನು ಅಮೇರಿಕಾ ಹರಿಬಿಟ್ಟಿದೆ. ಅಫಘಾನಿಸ್ತಾನದಲ್ಲಿ ಸೆಪ್ಟೆಂಬರ್ 11'ರ ಧಾಳಿಯಲ್ಲಿ ಮಡಿದವರನ್ನು ನೆನೆಯಬೇಕಿದೆ. ಅದೇ ಸಮಯದಲ್ಲಿ ತನ್ನ ಮಿಲಿಟರಿ ಧಾಳಿ, ದರ್ಪ, ದಬ್ಬಾಳಿಕೆಯಿಂದ, ರಾಷ್ಟ್ರಗಳ ಸಾರ್ವಭೌಮತೆಯನ್ನು ಉಲ್ಲಂಘಿಸಿ, ಅಮಾಯಕ ಪ್ರಾಣ ಹಾನಿ ಮೂಲಕ ಭಯೋತ್ಪಾದನೆಯ ನಿರ್ಮೂಲನೆ ಸಾಧ್ಯವಿಲ್ಲ ಎಂಬುದನ್ನು ಅಮೇರಿಕಾ ಅರಿಯಬೇಕಿದೆ. ಇತ್ತೀಚೆಗೆ ಚೀನಾ ಮತ್ತು ರಷ್ಯಾ ಭಯೋತ್ಪಾದಕತೆಯನ್ನು ಪ್ರತಿರೋಧಿಸಲು ಹಾಗೂ ಅಂತರಾಷ್ಟ್ರೀಯ ಸುರಕ್ಷತೆ ಕಾಪಾಡಲು ಜಂಟಿ ಹೇಳಿಕೆ ನೀಡಿವೆ. ಅದರ ಪ್ರಕಾರ, ಭಯೋತ್ಪಾದಕತೆ ಅಂತರಾಷ್ಟ್ರೀಯ ಸುರಕ್ಷತೆಗೆ ಧಕ್ಕೆ ತರುತ್ತದೆ ಹಾಗೂ ಅದನ್ನು ನಿಗ್ರಹಿಸಲು ನಡೆಸಲಾಗುವ ಎಲ್ಲಾ ಧಾಳಿಗಳನ್ನು ಅಂತರಾಷ್ಟ್ರೀಯ ಕಾನೂನು ಮತ್ತು ವಿಶ್ವಸಂಸ್ಥೆಯ ನಿಯಮಾವಳಿಗಳ ಪ್ರಕಾರವೇ ನಡೆಸಬೇಕು.

ಅಮೇರಿಕಾ ತೋರಿರುವ ರೀತಿ ಭಯೋತ್ಪಾದನೆ ಎದುರಿಸಲು ದ್ವಂದ್ವ ನೀತಿ ಅನುಸರಿಸಲು ಸಾಧ್ಯವಿಲ್ಲ. ರಾಷ್ಟ್ರೀಯ ವಿಮೋಚನೆ ಹಾಗೂ ಸಾಮಾಜಿಕ ನ್ಯಾಯಕ್ಕಾಗಿ ನಡೆಸಲಾಗುವ ಹೋರಾಟವನ್ನು ಹತ್ತಿಕ್ಕಲು ಭಯೋತ್ಪಾದನೆಯನ್ನು ಬಳಸಬಾರದು, ಆದರೆ ಉಗ್ರಗಾಮಿ ಅಥವಾ ಮೂಲಭೂತವಾದಿ ಗುಂಪುಗಳ ಭಯೋತ್ಪಾದನೆಯನ್ನು ಹತ್ತಿಕ್ಕಲು ಬಳಸಬೇಕಿದೆ. ಸೆಪ್ಟೆಂಬರ್ 11'ರ ನಂತರದ ಒಂದು ವರ್ಷವನ್ನು ನೆನೆಯುತ್ತಾ ಒತ್ತಿ ಹೇಳಬೇಕಾದ ಅಂಶವೆಂದರೆ, 11'ರಂದು ನಡೆಸಲಾದ ಭಯೋತ್ಪಾಧಕತೆಯ ಧಾಳಿ ಅಂತೆಯೇ ಅದನ್ನು ನಿಗ್ರಹಿಸುವ ಹೆಸರಿನಲ್ಲಿ ಅಮಾಯಕರನ್ನು ಬಲಿ ತೆಗೆದುಕೊಳ್ಳುವ ಅಮೇರಿಕಾದ ಸಾಮ್ರಾಜ್ಯಶಾಹಿಯ ದಬ್ಬಾಳಿಕೆಯನ್ನು ಸಹಾ ವಿರೋಧಿಸಿ ಸೋಲಿಸಬೇಕಿದೆ.



ಗುಟ್ಕಾ ನಿಷೇಧದ ರಾಜಕೀಯ ಮತ್ತು ಅಡಿ...

ಓಟಿನ ಲಾಭ ಕೋಟೆಯತ್ತ, ನೋಟಿನ ಲಾಭ ಕೊಟಾರಿಯತ್ತ ಬೆಳೆಗಾರರ...

ಸತತ ಬೆಲೆ ಕುಸಿತ, ಬೆಳೆ ಕುಸಿತ ಸಾಲದ ಹೊರೆ, ನೀಗದ ಬದುಕು, ಸಂಕಷ್ಟಗಳ ಯಮಭಾರದ ಮೂಟೆ ಹೊರಿಸಿ ಪ್ರಪಾತದಂಚಿಗೆ ತಳ್ಳಲ್ಪಡುತ್ತಿರುವ ಕಾಫಿ, ಅಡಿಕೆ ಮುಂತಾದ ಬೆಳೆಗಾರರ ಸ್ಥಿತಿ ಅತಂತ್ರದತ್ತ. ಇಷ್ಟ ದೇವರುಗಳು, ಅಧಿಕಾರಸ್ಥರನ್ನು ಕಾಡಿ ಬೇಡಿದ್ದಾಯ್ತು. ಒಬ್ಬೊಬ್ಬರದೂ ಒಂದೊಂದು ವ್ಯಾಖ್ಯಾನ. ಭರವಸೆಗಳ ಗಾನ, ಬಳಿಕ ಭ್ರಮನಿರಸನ. ಮತ್ತೆ ಹೊಸಬರು... ಹೀಗೆಯೇ ಬೆಳೆಗಾರರ ಬವಣೆಯ ಮೂಲ ತೋರಿಸದೇ ಹೊಸ ಭ್ರಮಾಲೋಕ ಸೃಷ್ಟಿಸುವುದೇ ಆಳುವವರ ಕರಾಮತ್ತು. ಇನ್ನೇನು ಸಚಿವರದ್ದು ಆಯಿತು ಎಂದು ಬೇರೆ ದಾರಿಯನ್ನೇನು ಎಂದಾಗ ರಕ್ಷಣಾ ಸಚಿವ ಜಾರ್ಜ್ ಫರ್ನಾಂಡಿಸ್‌ರ ಆಗಮನವಾಯಿತು. ಅವರ ಜೊತೆಗೆ ಅನಂತಕುಮಾರ್. ಈ ಜೋಡಿಗಳುಳ್ಳ ಸಮಾವೇಶಗಳು ಮಂಗಳೂರು, ಮಡಿಕೇರಿ ಕಂಡದ್ದಾಯಿತು. ಪರಿಣಾಮ ಶೂನ್ಯವೆನಿಸುತ್ತಿರುವಾಗ ಸಾಲದ್ದೆಂದು ಹಣಕಾಸು ಸಚಿವ ಜಸ್ವಂತ್‌ಸಿಂಗರನ್ನು ಚಿಕ್ಕಮಗಳೂರಿಗೆ ಕರೆದುತಂದರು. ಈ ಭೇಟಿ ಸಮಾವೇಶಗಳು ನಿರೀಕ್ಷೆಗಳ ಫಲ ನೀಡಿತೆ ಎಂಬ ಬಗ್ಗೆ ಲೇಖನವಿಲ್ಲಿದೆ. ಇನ್ನೊಂದು ಗುಟ್ಕಾ ನಿಷೇಧದ ಹಿಂದಿನ ರಾಜಕೀಯ ಹಾಗೂ ಅಡಿಕೆ ಬೆಳೆಗಾರರ ಸಮಾವೇಶದ ಹಿಂದಿರುವ ರಾಜಕೀಯ-ಲಾಭಾಂಶದ ಹಿತಾಸಕ್ತಿಗಳ ಬಗೆಗೆ ಇನ್ನೊಂದು ಲೇಖನ.

ಟಿ.ಆರ್. ರಾಘವೇಂದ್ರರಾವ್ ಯಡಗುಡ್ಡೆ, ತೀರ್ಥಹಳ್ಳಿ

ಅಡಿಕೆ ಒಂದು ವಾಣಿಜ್ಯ ಬೆಳೆ. ಈಗ್ಗೆ ಸುಮಾರು 6-7 ವರ್ಷದ ಹಿಂದೆ ಕೆಂಪು ಅಡಿಕೆ ಕ್ವಿಂಟಾಲ್ ಒಂದಕ್ಕೆ 5ರಿಂದ 10 ಸಾವಿರ ರೂಪಾಯಿಗಳು. ಬಿಳಿ ಅಡಿಕೆ ಚಾಲಿ 2ರಿಂದ 3 ಸಾವಿರ ರೂಪಾಯಿ ಬೆಲೆ ಇತ್ತು. ಅಕಾಲದಲ್ಲಿ ಜರ್ದಾಬೀಡ ತಿನ್ನುವ ಸಂಖ್ಯೆ ವಿಪರೀತ ಬೆಳೆಯಲಾರಂಭಿಸಿತು. ಆಗ ಚಾಲಿ ಬೆಲೆ ಏರಿಕೆ ಪ್ರಾರಂಭವಾಗಿ 6ರಿಂದ 8 ಸಾವಿರದವರೆಗೆ ಚಾಲಿ ಬೆಲೆ ಏರಿಕೆ ಆಯಿತು. ಅಂತೆಯೇ ಉತ್ತರ ಭಾಗದಲ್ಲಿ ಗುಟ್ಕಾ ಆರಂಭವಾಯಿತು. ಆರಂಭದಲ್ಲಿ ಕಾನ್ಪುರದಲ್ಲಿ ಗುಟ್ಕಾ ತಯಾರಿ ಆರಂಭವಾಗಿ ಇಡೀ ದೇಶದಲ್ಲಿ ಆವರಿಸಿತು. ಅದರಿಂದ ಸಿಗರೇಟು ವ್ಯಾಪಾರಕ್ಕೆ ತುಂಬಾ ಹೊಡೆತವಾಯಿತು. ಹಾಗೇ ಕೆಂಪು ಅಡಿಕೆ ಬೆಲೆ ಕ್ವಿಂಟಾಲ್ ಒಂದಕ್ಕೆ 12-16-18 ಸಾವಿರದವರೆಗೆ ಏರಿಕೆ ಆಯಿತು. ಅಡಿಕೆ ಬೆಳೆಗಾರರ ವಹಿವಾಟು ಗಗನಕ್ಕೇರಿತು. ಹೀಗೆ ಅಡಿಕೆ ತಯಾರಿ ವೆಚ್ಚ ಅದಕ್ಕನುಗುಣವಾಗಿ ಏರತೊಡಗಿತು. ಅದಕ್ಕೆ ತಕ್ಕಂತೆ ಸಾಲಗಳು ದೊರೆಯಲಾರಂಭವಾಯಿತು. ಅಡಿಕೆ ಬೆಳೆಗಾರರು ಶ್ರೀಮಂತ ಜೀವನ, ಕಾರು, ಟಿ.ವಿ. ಉತ್ತಮ ಮನೆ ಮಾಡಿಕೊಳ್ಳಲು ಸಾಧ್ಯವಾಯಿತು.

ಹಿಗ್ಗಿದ ರೈತ

ಗುಟ್ಕಾ ತಯಾರಿಗೆ ಅಡಿಕೆ ಮೂಲಕಚ್ಚಾ ವಸ್ತು ಎಂದು ಭಾವಿಸಿದ್ದ ಬೆಳೆಗಾರ ತನ್ನ ಬೆಳೆಗೆ ಎಂದೂ ಬೆಲೆ ಕುಸಿಯಲಾರದೆಂಬ ನಂಬಿಕೆಯಿಂದ ಶಾಶ್ವತ ನೀರಿನ ವ್ಯವಸ್ಥೆ, ಬೇಲಿ ವ್ಯವಸ್ಥೆ ಕೂಲಿ ವ್ಯವಸ್ಥೆ ಮಾಡಿಕೊಂಡ ಮತ್ತೆ ಹಳೆ ಬೇಸಾಯ ಪದ್ಧತಿಯನ್ನು ಬದಲಿಸಿ ದುಬಾರಿ ಬೇಸಾಯವೂ ಆರಂಭ ವಾಯಿತು. ಅದು ಅಂದಿನ ಬೆಲೆಯಲ್ಲಿ ಸುಧಾರಿಸಲು ಸಾಧ್ಯವಾಯಿತು. ಅದನ್ನು ಗಮನಿಸಿದ ಇತರೆ ರೈತರು ಅಂದರೆ ಭತ್ತ ಬೆಳೆಯು ಗದ್ದೆಯವರು ನಾಲೆ ನೀರಿನಲ್ಲಿ ಭತ್ತ, ಕಬ್ಬು ಬೆಳೆಗಾರರು ಅಡಿಕೆ ಬೇಸಾಯ ಶುರು ಮಾಡಿದರು. ಆ ಪ್ರದೇಶದಲ್ಲಿ ಅಡಿಕೆ ಬೆಳೆ ಬಂತು, ಆಗಲೂ ದರ ಕುಸಿಯಲಿಲ್ಲ. ಬೆಳೆಗಾರರು ನೆಮ್ಮದಿಯ ಜೀವನ ಸಾಗಿಸಲಾ ರಂಭಿಸಿದರು. ಅದರಲ್ಲಿ ಶಿವಮೊಗ್ಗ ಜಿಲ್ಲೆಯ ತೀರ್ಥಹಳ್ಳಿ ಹೊಸನಗರ, ಚಿಕ್ಕಮಗಳೂರು, ಜಿಲ್ಲೆಯ ಕೊಪ್ಪ, ಶೃಂಗೇರಿ ತಾಲೂಕುಗಳಲ್ಲಿ ಬೆಳೆಯುವ ಅಡಿಕೆ ಉತ್ತಮ ದರ್ಜೆಯದಾಗಿದ್ದು ಅದಕ್ಕೆ ಉತ್ತಮ ಧಾರಣೆಯು ದೊರೆಯುತ್ತಿತ್ತು. ಅವುಗಳು ಮಾತ್ರ ಉತ್ತಮ ಬಣ್ಣದ ಅಡಿಕೆಯಾಗಲು ಸಾಧ್ಯ. ಅದಕ್ಕೆ ಕಾರಣ ಅಲ್ಲಿಯ ಭೂಗುಣ ಮತ್ತು ಬಣ್ಣಕ್ಕೆ ಬೇಕಾಗಿ ಮರದ ತೆಪ್ಪೆ ಮತ್ತು ನೀರು ಇದರಿಂದಲೇ ಉತ್ತಮ ಅಡಿಕೆಯಾಗಿ ಹೊರ ಹೊಮ್ಮುತ್ತದೆ. ಹೀಗೆ ತಯಾರಾದ ಅಡಿಕೆ ಹೆಚ್ಚಿನದಾಗಿ ಶಿವಮೊಗ್ಗ ಮಾರುಕಟ್ಟೆಯಲ್ಲಿ ಮಾರಾಟವಾಗುತ್ತದೆ.

ದಲ್ಲಾಳಿ ಮಂಡಿಗಳ ಕೈಯಲ್ಲಿಂದ ಜಾರ್ಜ್‌ನತ್ತ

ಮಾರುಕಟ್ಟೆ ವ್ಯವಸ್ಥೆ ರೈತರು ತಾವು ಬೆಳೆದ ಕೆಂಪು ಅಡಿಕೆಯನ್ನು ಪರಿಷ್ಕರಣೆ ಮಾಡಿ ಸರಕು, ಬೆಟ್ಟೆ ಗೊರಬಲು, ಬೇರೆ ಬೇರೆ ಮಾಡಿ ಶಿವಮೊಗ್ಗದ ದಲ್ಲಾಳಿ ಮಂಡಿಗೆ ಕಳುಹಿಸುವುದು. ಅಂಥಹ ದಲ್ಲಾಳಿ ಮಂಡಿಗಳು ಶಿವಮೊಗ್ಗ ಆರ್‌ಎಂಸಿ ಯಾರ್ಡಿನಲ್ಲಿ ನೂರಾರು ಮಂದಿಗಳಿವೆ. ರೈತರು ತಮಗೆ ಬೇಕಾದ ಮಂದಿಗಳಲ್ಲಿ ವ್ಯವಹಾರ ಇಟ್ಟುಕೊಂಡಿರುತ್ತಾರೆ. ಆ ಮಂದಿಗೆ ತಮ್ಮ ಅಡಿಕೆ ಕಳುಹಿಸುತ್ತಾರೆ. ಅಲ್ಲಿ ವಾರದಲ್ಲಿ ಮೂರು ದಿನ ವ್ಯವಹಾರ ನಿಗದಿಯಾಗಿರುತ್ತೆ. ರೈತ ಬಯಸಿದ ದಿನ ವ್ಯಾಪಾರಕ್ಕೆ ಹಾಕಿಸುತ್ತಾರೆ. ಆ ದಿನ ಅಲ್ಲಿಗೆ ವ್ಯಾಪಾರಿಗಳು ಬಂದು ಅಡಿಕೆ ನೋಡಿ ಟೆಂಡರ್ ಹಾಕುತ್ತಾರೆ. ಟೆಂಡರ್ ಬಾಕ್ಸ್ ಆರ್‌ಎಂಸಿ ಆಫೀಸಿನಲ್ಲಿ ತೆರೆಯುತ್ತಾರೆ. ವ್ಯಾಪಾರಿಗಳ ಪೈಪೋಟಿಯಲ್ಲಿ ಹೆಚ್ಚಿನ ದರ ಯಾರು ಕೊಟ್ಟಿರುತ್ತಾರೆ, ಎಷ್ಟು ಎಂಬುದನ್ನು ತಿಳಿಸುತ್ತಾರೆ. ರೈತ ಇಚ್ಛಿಸಿದರೆ ಕೊಡಬಹುದು. ಇಲ್ಲವಾದರೆ ಹಾಗೇ ಇಡಬಹುದು. ಇದು ರೈತರಿಂದ ಬೆಳೆದ ಅಡಿಕೆ ಕೈ ತಪ್ಪುವವರೆಗಿನ ವ್ಯವಸ್ಥೆ. ಆನಂತರ ನಮ್ಮ ಅಡಿಕೆ ಎಲ್ಲಿಗೆ ಹೋಗುತ್ತೆ ಏನು ಆಗುತ್ತೆ ಯಾವ ಬೆಲೆ ಇದೆ ಎಂಬುವುದು ಬೆಳೆಗಾರನಿಗೆ ತಿಳಿಯುವುದೇ ಇಲ್ಲ. ಹೀಗಿರುವಾಗ 2002ನೇ ಇಸವಿಯ ಜುಲೈ ತಿಂಗಳಲ್ಲಿ ಇದ್ದಕ್ಕಿದ್ದಂತೆ ಮಹಾರಾಷ್ಟ್ರದಲ್ಲಿ ಗುಟ್ಕಾ ನಿಷೇದ ಆಯ್ತು ಎಂಬ ಸುದ್ದಿ ಬರುತ್ತಿದ್ದಂತೆ ಶಿವಮೊಗ್ಗ ಮಾರುಕಟ್ಟೆಗೆ ದಿಗಿಲು ಬಡಿದಂತೆಯೇ ಆಗಿ ವ್ಯಾಪಾರ ನಿಂತು ಹೋಯಿತು. ದಲ್ಲಾಳಿ ಮಂದಿಗಳು ಹಣಕಾಸಿನ ವ್ಯವಹಾರವನ್ನು ನಿಲ್ಲಿಸಿದರು. ರೈತರು ಕಂಗಾಲಾದರೂ, ಆನಂತರ ಅಡಿಕೆ ವ್ಯಾಪಾರಿಗಳು ರಾಜಕೀಯ ಮುಖಂಡರುಗಳು ದೆಹಲಿಗೆ ನಿಯೋಗ ಹೋದರು. ಅಲ್ಲಿಂದ ಬೆಳೆಗಾರರ ರಕ್ಷಣೆಗೆ ಕೇಂದ್ರದಲ್ಲಿ ಎನ್.ಡಿ.ಎ ಸಂಚಾಲಕರು ಕೇಂದ್ರ ರಕ್ಷಣಾ ಸಚಿವರು ಆದ ಜಾರ್ಜ್ ಫರ್ನಾಂಡೀಸ್ ರವರು ಅಧ್ಯಯನಕ್ಕೆ ಬರುವುದಾಗಿ ಆಶ್ವಾಸನೆ ಪಡೆದು ಬಂದರು.

ಸರ್ವರೂ ಸಮಾವೇಶದಲ್ಲೇ..

ಅವರೊಂದಿಗೆ ನಗರಾಭಿವೃದ್ಧಿ ಸಚಿವ ಅನಂತಕುಮಾರರವರು ಜೊತೆಗೂಡಿದರು. ಅಡಿಕೆ ವ್ಯಾಪಾರಿಗಳೂ, ದಲ್ಲಾಳಿ ಮಂಡಿಯವರೂ ವೇದಿಕೆ ವ್ಯವಸ್ಥೆ, ಜನ ಸಂಗ್ರಹಣೆಯಲ್ಲಿ ತೊಡಗಿದರು. ಬೆಳೆಗಾರ ಕ್ಷೇತ್ರದ ಶಾಸಕರುಗಳು ಬೆಳೆಗಾರರ ಒಕ್ಕೂಟ ಬಳಿಸಿ ಸಭೆಗೆ ಹಾಜರಾಗುವಂತೆ ನೋಡಿ ಕೊಂಡರು. ಶಿವಮೊಗ್ಗ - ಮಂಗಳೂರುಗಳಲ್ಲಿ ಸಭೆ ನಡೆಯಿತು. ದಿನಾಂಕ: 22-8-02ರಂದು ಶಿವಮೊಗ್ಗ ವಿಜ್ಞಾನ ಮೈದಾನದಲ್ಲಿ ಬೃಹತ್ ಸಭೆ ನಡೆಯಿತು. ಅಂದಾಜು 60000 ಜನ ನೆರೆದರು. ಸಭೆಯಲ್ಲಿ ಮ್ಯಾಮ್ಕೋಸ್, ಕ್ಯಾಂಪ್ಕೋ, ಸಂಸ್ಥೆಯವರು ಮತ್ತು ಹಲವಾರು ಮುಖಂಡರುಗಳು ಅಡಿಕೆ ಪರಿಸ್ಥಿತಿಯ ವಿವರ ನೀಡಿದರು. ಹೊರನಾಡ ದೇವಸ್ಥಾನದ ಮುಖ್ಯಸ್ಥರಾದ ಭೀಮೇಶ್ವರ ಜೋಶಿಯವರು **ಅಡಿಕೆ ಪಾವಿತ್ರತೆ** ಬಗ್ಗೆ ಮಾತನಾಡಿದರು.

ಯಾಕೆ ಜಾರ್ಜ್

ಹಲವಾರು ಮಠಾದಿ ಪತಿಗಳಿಂದ ಹೋರಾಟಕ್ಕೆ ಶುಭ ಕೋರಿ ಬೆಂಬಲ ಸೂಚಿಸಿ ಸಂದೇಶಗಳು ಬಂದವು. ನಂತರ ಮುಖ್ಯ ಅಭ್ಯಾಗತರು ಆಗಮಿಸಿದರು. ರಾಜ್ಯ ಸರ್ಕಾರದ ವತಿಯಿಂದ ಆರೋಗ್ಯ ಸಚಿವರೂ, ಶಿವಮೊಗ್ಗ ಜಿಲ್ಲೆ ಉಸ್ತುವಾರಿ ಮಂತ್ರಿ ಕಾಗೋಡು ತಿಮ್ಮಪ್ಪ ಅಧ್ಯಕ್ಷತೆ ವಹಿಸಿದ್ದರು. ಕಾನೂನು ಮಂತ್ರಿ ಡಿ.ಜಿ.ಚಂದ್ರೇಗೌಡರು ಉಪಸ್ಥಿತರಿದ್ದರು. ವಿಧಾನ ಪರಿಷತ್ ಸಭಾಪತಿ ಬಿ.ಎಲ್.ಶಂಕರ್ ಪ್ರಸ್ತಾವನೆ ಮಾಡಿ ಅಡಿಕೆ ಬೆಳೆಗಾರರ ಸಮಸ್ಯೆ ಕುರಿತು ಸವಿಸ್ತಾರವಾಗಿ ವಿವರಿಸಿದರು. ಅದಕ್ಕೆ ಉತ್ತರವಾಗಿ ಜವಾಬ್ದಾರಿ ಹೊತ್ತು ಬಂದಿದ್ದು ಜಾರ್ಜ್ ಫರ್ನಾಂಡೀಸ್‌ರವರು. ಈ ಸಮಸ್ಯೆ ಬಗ್ಗೆ ಪ್ರಧಾನಿಯವರೊಂದಿಗೆ ಚರ್ಚೆ ಮಾಡಿ ಶೀಘ್ರ ಪರಿಹಾರ ನೀಡುವುದಾಗಿ ತಿಳಿಸಿ ಅಡಿಕೆ ವರ್ತಕರಿಗೆ ಮಂಡಿ ಬಾಗಿಲು ತೆರೆಯಲು ಮನವಿ ಮಾಡಿದರು. ಇದು ನಡೆದ ಕ್ರಿಯೆ. ಆದರೆ ಫಲಿತಾಂಶ ಪರಿಣಾಮಕಾರಿ ಆಗಿಲ್ಲ. ಮಂತ್ರಿ ಜಾರ್ಜ್ ಫರ್ನಾಂಡೀಸ್‌ರ ಮನವಿಯನ್ನೇ ಆದೇಶವೆಂದು ಭಾವಿಸಿ ಬೆಳೆಗಾರರು ಹರ್ಷಭರಿತರಾಗಿ ಮರಳಿದರು. ಇದಾಗಿ 15 ದಿನ ಕಳೆದರೂ ಪರಿಸ್ಥಿತಿ ಯಾವುದೇ ಬದಲಾವಣೆ ಆಗಿಲ್ಲ. ರೈತರು ಯಾವುದೇ ನೆಲೆ ಕಾಣದೆ ಅತಂತ್ರ ಸ್ಥಿತಿಯಲ್ಲಿದ್ದಾರೆ. **ಅಡಿಕೆ ಫಸಲಿಗೆ ಒಳ್ಳೆ ಬೆಲೆ ನಿಗದಿ ಮಾಡುವಂಥ ವಿಷಯದಲ್ಲಿ ಕೃಷಿ ಸಚಿವರು, ಅಥವಾ ವಾಣಿಜ್ಯ ಸಚಿವರು ಬರದೇ ಇದಾವುದಕ್ಕೂ ಸಂಬಂಧವೇ ಇಲ್ಲದ ರಕ್ಷಣಾ ಸಚಿವ ಜಾರ್ಜ್ ಫರ್ನಾಂಡೀಸರನ್ನು ಕರೆಸಿದ್ದು ಒಂದು ಸೋಜಿಗವೇ ಸರಿ!**

ಗುಟ್ಕಾ ನಿಷೇಧ ಮತ್ತು ಅಡಿಕೆ

ಇನ್ನು ನನ್ನ ಅನಿಸಿಕೆ. ನಾನು ಒಬ್ಬ ಸಣ್ಣ ಬೆಳೆಗಾರನಾಗಿ ಇನ್ನೂ ಸಂಕಷ್ಟದಲ್ಲಿ ಸಿಕ್ಕಿಕೊಂಡವ ನಾಗಿ ಚಿಂತಿಸುತ್ತಾ ನನಗೆ ಕಾಡು ಪ್ರಶ್ನೆ. ಅಡಿಕೆ ಆಹಾರ ಕಲಬೆರಕೆ ಕಾನೂನಿನಡಿಯಲ್ಲಿ ಕೇಂದ್ರ ನಿಷೇಧ ಮಾಡಿದಾಗ್ಯೂ ವಿದೇಶದಿಂದ ಆಮದು ಮಾಡಿಕೊಳ್ಳುತ್ತಿರುವುದು ಹೇಗೆ ಸಾಧ್ಯ. ಹೀಗೆ ಗುಟ್ಕಾಕ್ಕೆ ಪರವಾನಿಗೆ ಕೊಡುವಾಗ ಈ ಕಾನೂನು ಏನು ಮಾಡುತ್ತಿತ್ತು? ಇಲ್ಲಿ ನಾವು ಬೆಳೆಯುವ ಪೂರ್ತಿ ಅಡಿಕೆ ಗುಟ್ಕಾಕ್ಕೆ ಬಳಕೆಯಾಗುತ್ತಿಲ್ಲ. ಗುಟ್ಕಾ ಬರುವುದಕ್ಕಿಂತ ಮೊದಲು ಸಹ ಅಡಿಕೆ ಬಳಕೆ ಯಾಗುತ್ತಿತ್ತು. ನಮ್ಮ ಅಡಿಕೆಯಲ್ಲಿ ಹೆಚ್ಚಿನ ಬೆಲೆಗೆ ಹೋಗುತ್ತಿದ್ದ ಸರಕು ಗುಟ್ಕಾಕ್ಕೆ ಬಳಕೆ ಆಗುತ್ತಿತ್ತೆ? ನಮ್ಮ ಅಡಿಕೆ ಉತ್ತರದಲ್ಲಿ ಮಾತ್ರ ಬಳಕೆ ಆಗದೆ ದಕ್ಷಿಣದ ಆಂಧ್ರ, ತಮಿಳುನಾಡುಗಳಲ್ಲಿ ಬಳಕೆ ಆಗುತ್ತಿದೆ. ಆದರೆ ಈ ವ್ಯಾಪಾರಸ್ಥರು ಗುಟ್ಕಾ ನಿಷೇಧದಿಂದ ಇಡೀ ಅಡಿಕೆ ವ್ಯಾಪಾರವನ್ನು ಯಾಕೆ ನಿಲ್ಲಿಸಿದರು?

ಅಡಿಕೆ ವಿಷ ವಸ್ತುವೇ?

ಮಹಾರಾಷ್ಟ್ರದಲ್ಲಿರುವ ಗುಟ್ಕಾ ಕಂಪನಿಗಳಿಗೆ ಅಲಹಾಬಾದ್ ಹೈಕೋರ್ಟ್ ನೀಡಿರುವ ನಿಷೇದಾಜ್ಞೆಯಲ್ಲಿ ಗುಟ್ಕಾದಲ್ಲಿರುವ ವಿಷಪೂರಿತ ಅಂಶಗಳು ಜಾಸ್ತಿ ಇದೆ ಅಂತಲೂ, ಅದರಿಂದ ಜೀವಕ್ಕೆ ಹಾನಿಕಾರಕವೆಂದಿದೆಯೇ ಹೊರತು ಅಡಿಕೆಯಿಂದ ಆರೋಗ್ಯಕ್ಕೆ ಹಾನಿ ಎಂದಿಲ್ಲ. ಆದರೂ ಇಲ್ಲಿ ಅಡಿಕೆ ಬೆಳೆಗಾರರಿಗೆ ಶಿಕ್ಷಣ ನೀಡುತ್ತೇವೆ ಎನ್ನುವ ಎಲ್ಲಾ 'ಲಾಬಿಗಳು' ನ್ಯಾಯಾಲಯಕ್ಕೆ ಮೊರೆ ಹೋಗುವುದು ಗುಟ್ಕಾ



ಜಸ್ವಂತ್ ಸಿಂಗ್, ಜಾರ್ಜ್

ನಿಷೇದಾಜ್ಞೆ ಹಿಂತೆಗೆಯುವಂತೆ ಎನ್ನುತ್ತಾರೆ. ಆದರೆ ಇಲ್ಲಿ ಇರುವ ಮುಖ್ಯ ಅಂಶವೆಂದರೆ ಒಟ್ಟಾರೆ ಅಡಿಕೆಯೇ ಆರೋಗ್ಯಕ್ಕೆ ಹಾನಿಕಾರ ಎಂಬ ವಿಷಯ ಅಧ್ಯಯನವಿಲ್ಲದೆ ಕೇಂದ್ರ ಸರ್ಕಾರ ಆಹಾರ ಕಲಬೆರಕೆ ಕಾನೂನಿನಡಿಯಲ್ಲಿ ಸೇರಿಸಿರುವುದು. ಬಹುಷಃ 1993-94ರ ಸಾಲಿನಲ್ಲಿರಬಹುದು. ಆದರೆ ಆ ಸಂದರ್ಭದಲ್ಲಿ ಬೆಳೆಗಾರರ ಕ್ಷೇತ್ರ ಪ್ರತಿನಿಧಿಸುವ ಪ್ರತಿನಿಧಿಗಳು ಕೇಂದ್ರದಲ್ಲಿರಲಿಲ್ಲವೇ? ಅಡಿಕೆಗೆ ಸುಮಾರು 2000 ವರ್ಷದ ಇತಿಹಾಸವಿದೆ. ಅದು ಆಯುರ್ವೇದದಲ್ಲಿ ಮನುಷ್ಯನ ಆರೋಗ್ಯಕ್ಕೆ ಉತ್ತಮ ಔಷಧಿ ಎಂತಲೂ ಊಟದ ನಂತರ ವೀಳ್ಯದ ಎಲೆಯೊಂದಿಗೆ ಸುಣ್ಣ ಬೆರೆಸಿ ತಿನ್ನುವುದರಿಂದ ಜೀರ್ಣಕಾರಕ ಮತ್ತು ಜಂತು ನಾಶಕವೆಂತಲೂ ದೇವ ನೈವೇದ್ಯ ಮತ್ತು ಎಲ್ಲಾ ಮಂಗಳ ಕಾರ್ಯಗಳಿಗೂ ಅವಶ್ಯವೆಂತಲೂ ಶಾಸ್ತ್ರಗಳೂ ಹೇಳುತ್ತವೆ.

ಉದ್ಯಮಿಗಳ ಲಾಭಿಗೆ ಮಣಿದದ್ದೇ?

ಇದನ್ನೆಲ್ಲಾ ಗಮನಿಸುವಾಗ ಯಾವುದೋ ಸಿಗರೇಟು ಉದ್ಯಮಿಗಳ ಲಾಬಿಗೆ ಮಣಿದು ಸುದ್ಧಿಯಿಲ್ಲದೇ ಕಾನೂನು ರಚನೆ ಆಗಿದೆ ಅನಿಸುತ್ತೆ. ಯಾಕೆಂದರೆ ಆಗ ಬೆಳೆ ಅಡಿಕೆ ಉಪಯೋಗಿಸುವ ಜರ್ದಾ ಬೀಡ ಹೆಚ್ಚು ಚಾಲ್ತಿ ಇತ್ತು. ಗುಟ್ಕಾ ಪ್ರಾರಂಭದಲ್ಲಿತ್ತು. ಅದಕ್ಕೆ ಹೆಚ್ಚು ಬಳಕೆ ಆಗುತ್ತಾ



ರಾಶಿ ಬೆಳೆದು ಆಶೆ ಬಿಟ್ಟವರು

...ಳೆಗಾರರು

...ಅತಂತ್ರದತ್ತ

...ದು ಅಡಿಕೆ. ಅದಕ್ಕೆ ನಾನು ಹೇಳುವುದು ಓಟಿನ ...ಿ ಕೋಟಿಯತ್ತ ಅಂತ. ಇನ್ನು ಗುಟ್ಕಾ ನಿಷೇದದ ...ದ್ಧ ಕರ್ನಾಟಕದ ಬೆಳೆಗಾರರು ಮತ್ತು ...ಪಾರಸ್ಥರು ಉಚ್ಚ ನ್ಯಾಯಾಲಯ ಮೊರೆ ...ೀಗುತ್ತಿರುವುದು ನೋಡಿದರೆ ಇಲ್ಲಿನ ಅಡಿಕೆ ...ಪಾರಿಗಳಲ್ಲಿ ದೊಡ್ಡ ದೊಡ್ಡ ವ್ಯಾಪಾರಸ್ಥರ ...ು ಗುಟ್ಕಾಕ್ಕೆ ಕೊಠಾರಿ, ಮಾಣಿಕ್ ಚಂದ್ ...ರಂತಹರಿಗೆ ಅಡಿಕೆ ಮಾರಾಟ ಮಾಡುತ್ತಿದ್ದು, ...ಹಾಬಾದ್ ಹೈಕೋರ್ಟ್ ಅವರ ಗುಟ್ಕಾಕ್ಕೆ ...ದ ಹೇರಿರುವುದರಿಂದ ಇವರ ಖರೀದಿ ಅಡಿಕೆ ...ರಾಟಕ್ಕೆ ತೊಂದರೆ ಆಗಿದ್ದು ಲಾಭದಾಯಕ ಹಣ ...ದಿರುವುದರಿಂದ ಅವರನ್ನು ಅವರ ಗುಟ್ಕಾವನ್ನು ...ರ್ಥಿಸುತ್ತಿರುವುದನ್ನು ನೋಡಿದರೆ 'ನೋಟಿನ ...ಿ ಕೊಠಾರಿಯತ್ತ' ಎಂದು ಕರೆಯಬಹುದು.

ಎಲ್ಲಾ ಬೆಳವಣಿಗೆಗಳು ಅಪ್ರತ್ಯಕ್ಷವಾಗಿ ...ಗಾರನಿಗೆ ಹೊಡೆತ ಆಗುತ್ತಿರುವುದು ...ಬರುತ್ತಿದೆ. ಬೆಳೆಗಾರನಿಗೆ ಆರ್ಥಿಕವಾಗಿ ...ಬಾ ತೊಂದರೆ ಅನುಭವಿಸುತ್ತಿದ್ದು ಬೆಳೆಗೆ ತಕ್ಕ ...ಸಿಗುವ ಭರವಸೆಯೂ ಇಲ್ಲದೇ ಭವಣೆಗೆ ...ಗಾಗಿದ್ದಾನೆ. ಇದಕ್ಕೆ ಬೆಳೆಗಾರರ ಸ್ಥಿತಿ ...ಂತ್ರದತ್ತ ಎನ್ನಬಹುದು. ಯಾವುದೇ ...ರವಿಲ್ಲದೆ ಬೆಳೆಗಾರರ ಪರವಾಗಿ ಸುಪ್ರಿಂ ...ರ್ಟ್‌ಗೆ ಹೋಗಬೇಕೆಂದು ಮುಖಂಡರುಗಳ ...ರ ಗುಟ್ಕಾ ನಿಷೇಧ ಮಾಡುವುದಿಲ್ಲ ಎಂಬ ...ಟಕ ಸರ್ಕಾರದ ಹೇಳಿಕೆ. ಇಲ್ಲಿ ...ಗಾರರಿದ್ದಾರೆ. ನಿಷೇಧಾಜ್ಞೆ ಹೊರಟಿರುವುದು ...ರ ಪ್ರದೇಶ, ಮಹಾರಾಷ್ಟ್ರದಲ್ಲಿ. ಅಲ್ಲಿ ಗುಟ್ಕಾ



...ರಾರಿಕಾ ಕೇಂದ್ರಗಳಿವೆ. ಹೀಗಿರುವಾಗ ಸುಪ್ರಿಂ ...ರ್ಟಿನಲ್ಲಿ ಲಕ್ಷಾಂತರ ರೂಪಾಯಿ ಖರ್ಚು ...ಡಿ ಕೇಸು ನಡೆಸಿದರೆ. ಅಲಹಾಬಾದ್ ...ೋರ್ಟಿನಲ್ಲಿ ಆರ್ಡರಿಗೆ ಸುಪ್ರಿಂ ಕೋರ್ಟ್ ...ಯಾಜ್ಞೆ ಕೊಟ್ಟಿದೆ. ಅದು ಸ್ವಲ್ಪ ದಿನ ...ಂದುವರಿದರೆ ಈಗ ವ್ಯಾಪಾರಿಗಳ ಅಡಿಕೆ ...ಹ್ಯದಲ್ಲಿ ನಿಂತಿರುವುದು ಸಲೀಸಾಗಿ ವ್ಯಾಪಾರ ...ಬಹುದೇ ಹೊರತು ಜಾಗತೀಕರಣ ಆಮದಿನ ...ಕ್ತ ಅವಕಾಶದ ಮುಂದೆ ಬೆಲೆ ಉತ್ತಮ ...ಗಬಹುದೆಂಬ ಯಾವ ಖಾತ್ರಿಯೂ ...ಡುಬರುವುದಿಲ್ಲ. ಯಾಕೆಂದರೆ ಜಾರ್ಜ್ ...ರ್ಣಾಂಡೀಸರನ್ನು ಕರೆಸುವುದರಲ್ಲಿ ಅತೀ ಆಸಕ್ತಿ ...ಸಿದ (ವಡ್ನಾಳ್ ರಾಜಣ್ಣ ಒಳಗೊಂಡು) ...ಲ್ಲಿರುವ ಬಿ.ಜೆ.ಪಿ ಶಾಸಕರು ಕೆಲವರು ...ಗೊಂಡ ಕೆಲವರು ಅತೀ ದೊಡ್ಡ ಅಡಿಕೆ ...ಪಾರಿಗಳು. ಒಬ್ಬರ ವಹಿವಾಟೇ 200 ಕೋಟಿ ...ಅಧಿಕ. ಅವರ ಬಳಿಯಲ್ಲಿ ಈಗ ಅಡಿಕೆ ಹಾಗೇ ...ದಿದೆ. ಹೀಗಾಗಿ ಅವರ ಕೈ ಇರಬಾರದೇಕೆ? ...ಷೇಧ ಒಂದು ಹಂತದಲ್ಲಿ ಬೆಲೆಯ ಮೇಲೆ ...ಾಮ ಬೀರುತ್ತದೆ ನಿಜ ಆದರೆ ಅಡಿಕೆಗೆ ಬೆಲೆ ...ರಲು ಕಾರಣವಾದ ಕೃಷಿ ವಾಣಿಜ್ಯ ನೀತಿ ...ಯಿಸದೇ ಸದ್ಯದ ಸರಕು ಮಾರಿದರೆ ಸಾಕು ...ು ಧೋರಣೆ ಸಾಕೆ?

ಜಾರ್ಜ್ ಫರ್ನಾಂಡಿಸ್, ಜಸ್ವಂತ್ ಸಿಂಗ್ ಭೇಟಿ : ಮುಖ ಉಳಿಸಿಕೊಳ್ಳುವ ಹೊಸ ನಾಟಕ

ಭ್ರಮನಿರಸನ ಹೊಂದುತ್ತಿರುವ ಬೆಳೆಗಾರರನ್ನು ತಮ್ಮ ಹಿಡಿತದಲ್ಲೇ ಇರಿಸಿಕೊಳ್ಳಲು ಬಾ.ಜ.ಪ ಮುಖಂಡತ್ವ ಶತಾಯಗತಾಯ ಯತ್ನಿಸುತ್ತಿದೆ.

ಕಾಫಿ ಬೆಲೆ ಕುಸಿತ ಪ್ರಾರಂಭವಾದಾಗ "ನಾವೇನು ಮಾಡುವುದು? ನರಸಿಂಹ ರಾವ್ ಸರಕಾರ ಗ್ಯಾಟ್ ಒಪ್ಪಂದಕ್ಕೆ ಸಹಿ ಹಾಕಿದ್ದರಿಂದ ಹೀಗಾಗಿದೆ. ನಾವೇನೂ ಮಾಡಲು ಸಾಧ್ಯವಿಲ್ಲ. ನಮ್ಮ ಕೈಕಟ್ಟಿದಂತಾಗಿದೆ." ಎನ್ನುತ್ತಿದ್ದರು ಭಾ.ಜ.ಪ ಮುಖಂಡರು.

ಆದರೆ ಮರಕೇಶ್‌ನಲ್ಲಿ ನರಸಿಂಹರಾವ್ ಸರಕಾರದ ಪ್ರಣಬ್ ಮುಖರ್ಜಿ ಮಾಡಿದ್ದನ್ನೇ ದೋಹದಲ್ಲಿ ವಾಜಪೇಯಿ ಸರಕಾರದ ವಾಣಿಜ್ಯ ಮಂತ್ರಿ ಮುರಸೋಳಿ ಮಾರನ್ ಮಾಡಿದರು.

ಭಾರತೀಯ ಜನತಾ ಪಕ್ಷದ "ಸ್ವದೇಶೀ" ವೇಷ ಮತ್ತು ಘೋಷಣೆಗಳ ನಿಜ ಸ್ವರೂಪ ಬಯಲಾಯಿತು.

ಅನಂತರ ನಮ್ಮ ಜಿಲ್ಲೆಯನ್ನೊಳಗೊಂಡ ಲೋಕಸಭಾಕ್ಷೇತ್ರದ ಪ್ರತಿನಿಧಿಯೂ ಕೇಂದ್ರ ಸಚಿವ ಸಂಪುಟದ ಸದಸ್ಯರೂ ಆದ ಧನಂಜಯ ಕುಮಾರ್ ಕೊಡಗಿಗೆ ಬಂದಾಗಲೆಲ್ಲ ಸುಳ್ಳು ಪೊಳ್ಳು ಭರವಸೆಗಳನ್ನು ನೀಡುತ್ತಾ ಬೆಳೆಗಾರರನ್ನು ವಂಚಿಸುತ್ತಾ ದಿನ ದೂಡಿದರು.

ಇತ್ತೀಚೆಗೆ ಅನಂತಕುಮಾರ್ ತಾನು "ಬೆಳೆಗಾರರ ರಕ್ಷಕ" ಎಂಬಂತೆ ನಟಿಸಿದರು. ಹಿರಿಯರಾದ ಎಂ.ಡಬ್ಲ್ಯು ಐಯಪ್ಪರವರ ನೇತೃತ್ವದಲ್ಲಿ ನಿಯೋಗವೊಂದು ದೆಹಲಿಗೆ ತೆರಳಿ ಪ್ರಧಾನಿಗಳಿಗೆ ಮನವಿ ಅರ್ಪಿಸಿ ಬಂದರು.

ಇಂದು ಕುಮಾರ್‌ದ್ವಯರಿಬ್ಬರೂ ಸವಕಲು ನಾಣ್ಯಗಳಾಗಿದ್ದಾರೆ. ಇವರ ವಂಚಕ ಸ್ವರೂಪ ಬೆಳೆಗಾರರಿಗೆ ಅರ್ಥವಾಗಿದೆ.

ಆದ್ದರಿಂದ ಇಂದು ಇವರ ಬದಲು ಬೆಳೆಗಾರರೆದುರು ಹೊಸ ಮುಖಗಳನ್ನು ಪ್ರದರ್ಶಿಸುವುದು ಭಾರತೀಯ ಜನತಾ ಪಕ್ಷದ ಮುಖಂಡತ್ವಕ್ಕೆ ಅನಿವಾರ್ಯವಾಗಿದೆ. ಈ ಅನಿವಾರ್ಯತೆಯೇ ಅಗಸ್ಟ್ 21ರಂದು ಮಡಿಕೇರಿಗೆ ಫರ್ನಾಂಡಿಸ್‌ರನ್ನು ಕರೆ ತಂದಿದೆ.

ಅಂದು ಕೊಡಗಿನ ಬೆಳೆಗಾರರು ಬೆರಳೆಣಿಕೆಯಲ್ಲಷ್ಟೇ ಸೇರಿದ್ದರು. ಈಗ ಭಾರತೀಯ ಜನತಾ ಪಕ್ಷದ ಸೋಮವಾರಪೇಟೆ ಸಮಿತಿಯವರು ಈ ಗೈರಹಾಜರಿಯನ್ನು ಟೀಕಿಸುತ್ತಿದ್ದಾರೆ. ಬೆಳೆಗಾರರ ಈ ವರ್ತನೆ ಅವರ ನಿರಾಶೆಗೆ ಸಾಕ್ಷಿಯಾಗಿದೆ. ಶ್ರೀ ಜಾರ್ಜ್ ಫರ್ನಾಂಡಿಸ್ ಮಾಡಿದ್ದಾದರೂ ಏನು? ಸಾಧಿಸಿದ್ದಾದರೂ ಏನು?

ಹೆಲಿಕಾಪ್ಟರ್‌ನಲ್ಲಿ ಬಂದರು, ಬೆಳೆಗಾರ ಪ್ರತಿನಿಧಿಗಳೆನ್ನುವವರೊಡನೆ ಸಮಾಲೋಚನೆ ನಡೆಸಿದರು. "ಕಾಫಿ ಬಿಕ್ಕಟ್ಟು ತೀಕ್ಷ್ಣವಾಗಿದೆ" ಎಂದು ತಲೆಯಾಡಿಸಿದರು ಕೊನೆಗೆ "ಈ ಸಮಸ್ಯೆಯನ್ನು ಕೇಂದ್ರ ವಿತ್ತ ಮತ್ತು ವಾಣಿಜ್ಯ ಸಚಿವರುಗಳಿಗೆ ವಿವರಿಸುತ್ತೇನೆ". ಎಂದು ಭರವಸೆ ನೀಡಿ ಬಂದ ಹೆಲಿಕಾಪ್ಟರ್‌ನಲ್ಲೇ ಹಿಂತೆರಳಿದರು.

ಕೇಂದ್ರ ವಿತ್ತ, ವಾಣಿಜ್ಯ ಸಚಿವರುಗಳಿಗೆ ಈ ಬಿಕ್ಕಟ್ಟಿನ ಅರಿವಿಲ್ಲವೆಂದೇ ಇದರ ಅರ್ಥ? ಅದೂ ಒಣಕಾಳಜಿಯೇ?

ಇಷ್ಟೆಲ್ಲಾ ಅದ್ದೂರಿಯಿಂದ ಜಾರ್ಜ್ ಫರ್ನಾಂಡಿಸ್ ಬಂದು ಹೋಗಿ ಸಾಧಿಸಿದ್ದೇನು?

ಅಗಸ್ಟ್ 26 ರಂದು ಚಿಕ್ಕಮಗಳೂರಿನಲ್ಲಿ ಬೆಳೆಗಾರರು ಮತ್ತು ಕಾಫಿ ಹೋರಾಟ ಸಂಘಟನೆಗಳ ಪ್ರತಿನಿಧಿಗಳೊಂದಿಗೆ ಮಾತನಾಡುತ್ತಾ ಕಾಫಿ ಬೆಲೆ ಸ್ಥಿರತೆ ಕ್ರಿಯಾ ಸಮಿತಿಯ ಮುಖ್ಯಸ್ಥ ಹಾಗೂ ಕೇಂದ್ರ ಹಣಕಾಸು ಇಲಾಖೆಯ ತೋಟಗಾರಿಕೆ ವಿಭಾಗದ ಕಾರ್ಯದರ್ಶಿ ಎಲ್.ವಿ. ಸಪ್ತಋಷಿ "ಕಾಫಿಗೆ ಬೆಂಬಲ ಬೆಲೆ ನೀಡಲು ಸಾಧ್ಯವಿಲ್ಲ" ಎಂದಿದ್ದಾರೆ.

ಕೇಂದ್ರ ಸರಕಾರದಿಂದ ಕಾಫಿ ಬೆಳೆಗಾರರಿಗೆ ನೀಡಲಾಗುವುದೆಂದು ಘೋಷಿಸಿರುವ ಸರಳ ಸಾಲ ಸೌಲಭ್ಯವೂ ಕೇವಲ ಕಣ್ಣೊರೆಸುವ ತಂತ್ರವಾಗಿದೆ, ವಂಚನೆಯಾಗಿದೆ.

ಬಹುರಾಷ್ಟ್ರೀಯ ಕಂಪನಿಗಳ ಹಿತಾಸಕ್ತಿಗನುಗುಣವಾದ ಆರ್ಥಿಕ ನೀತಿಯನ್ನನುಸರಿಸುವ ಕೇಂದ್ರ ಸರಕಾರ ಬೆಳೆಗಾರರನ್ನು ರಕ್ಷಿಸಲು ಸಾಧ್ಯವಿಲ್ಲವೆಂದು ಬೆಳೆಗಾರರು ಮನಗಾಣಬೇಕು.

ಬೆಳೆಗಾರರಿಗೆ ಈ ರೀತಿ ಆಶ್ವಾಸನೆಗಳನ್ನು ಕೊಡುತ್ತಿರುವುದು ಹೊಸತೇನೂ ಅಲ್ಲ. ಕಳೆದೆರಡು ವರ್ಷಗಳಿಂದಲೂ ಕೇಂದ್ರ ಮಂತ್ರಿಗಳು, ಭಾರತೀಯ ಜನತಾ ಪಕ್ಷ ಮುಖಂಡರುಗಳು ಆಶ್ವಾಸನೆ ನೀಡುತ್ತಲೇ ಬಂದಿದ್ದಾರೆ. ಅವೆಲ್ಲವೂ ವಂಚನೆಯ ನಾಟಕಗಳೆಂದು ಬೆಳೆಗಾರರಿಗೆ ಅರಿತಿವೆ.

ಧನಂಜಯ ಕುಮಾರ್, ಅನಂತ ಕುಮಾರ್ ಸೋತಲ್ಲಿ ಜಾರ್ಜ್ ಫರ್ನಾಂಡಿಸ್ ಗೆಲ್ಲಲು ಸಾಧ್ಯವಿಲ್ಲ. ಕೇಂದ್ರದಲ್ಲಿ ಓರ್ವ ಹಿರಿಯ ಮಂತ್ರಿಗೆ ಕಾಫಿಯನ್ನೊಳಗೊಂಡು ಕೃಷಿ ಉತ್ಪನ್ನಗಳ ಬೆಲೆ ಕುಸಿತದ ಸಮಸ್ಯೆಯ ಅರಿವಿಲ್ಲವೆಂದರೆ ಅದು ಶುದ್ದ ಸುಳ್ಳು. ಇಲ್ಲವೇ ಈ ಅಜ್ಞಾನ ಅವರ ಯೋಗ್ಯತೆಗೆ ಹಿಡಿದ ಕೈಗನ್ನಡಿ.

ಫರ್ನಾಂಡಿಸ್ ಬಂದಾಗ ಸಾಕಷ್ಟು ಬೆಳೆಗಾರರು ಭಾಗವಹಿಸದೇ ಇದ್ದುದನ್ನು ಭಾರತೀಯ ಜನತಾ ಪಕ್ಷದ ಮಂದಿ ಆಕ್ಷೇಪಿಸಿದ್ದಾರೆ. ಇದು ಹಾಸ್ಯಾಸ್ಪದ. ಪೊಳ್ಳು ಭರವಸೆಗಳನ್ನು ನೀಡಿ ವಂಚಿಸುವ ಕೇಂದ್ರದ ಮಂತ್ರಿಗಳ ಮೇಲೆ ಬೆಳೆಗಾರರಿಗೆ ವಿಶ್ವಾಸವಿಲ್ಲದಾಗಿದೆಯೆಂದು ಭಾರತೀಯ ಜನತಾ ಪಕ್ಷದ ಮಂದಿ ಅರ್ಥ ಮಾಡಿಕೊಳ್ಳಬೇಕು.

ಫರ್ನಾಂಡಿಸ್‌ರಂತಹವರನ್ನು ಭೇಟಿಯಾಗುವುದು ವ್ಯರ್ಥವೆಂದು ಬೆಳೆಗಾರರು ಅರ್ಥ ಮಾಡಿಕೊಂಡದ್ದು ಸರಿಯೆಂದು ಅನಂತರದ ಬೆಳವಣಿಗೆಗಳು ಸಾಬೀತುಪಡಿಸಿವೆ.

ಬೆಳೆಗಾರರ ಬಗ್ಗೆ ಭಾರತೀಯ ಜನತಾ ಪಕ್ಷದ ಮುಖಂಡರು ಆಕ್ಷೇಪಿಸುತ್ತಿರುವುದು ಜಾರ್ಜ್ ಫರ್ನಾಂಡಿಸ್‌ರನ್ನೊಳಗೊಂಡು ತಮ್ಮ ಸರಕಾರದ ವೈಫಲ್ಯವನ್ನು ಮರೆಮಾಚುವ ಉದ್ದೇಶದಿಂದಾಗಿದೆ ಎಂದು ಎಲ್ಲರಿಗೂ ತಿಳಿದಿವೆ.

ಕೇಂದ್ರ ಸರಕಾರದ, ಅದರ ಕೈಗೊಂಬೆಯಾಗಿರುವ ಅಖಿಲ ಭಾರತ ಕಾಫಿ ಉದ್ದಿಮೆ ಕ್ರಿಯಾ ಸಮಿತಿಯ ಮುಖಂಡರ ವಂಚನೆಯ ಸ್ವರೂಪವನ್ನು ಮನವರಿಕೆ ಮಾಡಿಕೊಂಡು, ಕೇಂದ್ರ ಸರಕಾರದ ಆರ್ಥಿಕ ನೀತಿಯ ವಿರುದ್ಧ ಸಂಘಟಿತ ಹೋರಾಟವೊಂದೇ ಬೆಳೆಗಾರರ ಮುಂದಿರುವ ಏಕಮಾತ್ರ ದಾರಿ ಎಂಬುದನ್ನು ಬೆಳೆಗಾರರರು ಮತ್ತೆ ಮತ್ತೆ ಅರಿಯಬೇಕು.

ಪೀಟರ್ ಲೋಬೋ, ವಿರಾಜಪೇಟೆ



ಅನ್ನ ಅಂತ್ಯೋದಯ ಯೋಜನೆಗೆ ಕಾಫಿ ಕಾರ್ಮಿಕರು ಕೇವಲ ಕಣ್ಣೊರೆಸುವ ತಂತ್ರ

ಕಾಫಿ ಕಾರ್ಮಿಕರನ್ನು, ಅನ್ನ ಅಂತ್ಯೋದಯ ಯೋಜನೆ ವ್ಯಾಪ್ತಿಗೆ ತರುವ ಕೇಂದ್ರ ಸರ್ಕಾರದ ಭರವಸೆ ಕೇವಲ ಕಾರ್ಮಿಕರ ಕಣ್ಣೊರೆಸುವ ತಂತ್ರ. ಈ ಯೋಜನೆ ಜಾರಿಗೆ ತರಬೇಕಾದಲ್ಲಿ ಬಿ.ಪಿ.ಎಲ್ ಪಟ್ಟಿ ಸಮೀಕ್ಷೆ ಕಾರ್ಯ ನಡೆಯಬೇಕು. ಇದು ಪ್ರಾಯೋಗಿಕವಾಗಿ ಎಷ್ಟರಮಟ್ಟಿಗೆ ಜಾರಿಗೆ ಬರುತ್ತದೆ ಎಂಬುದನ್ನು ಕಾದು ನೋಡಬೇಕಿದೆ.

ಸರ್ಕಾರಕ್ಕೆ ಬೆಳೆಗಾರರ ಬಗ್ಗೆ ನಿಜವಾಗಲೂ ಕಾಳಜಿ ಇದ್ದಲ್ಲಿ ಕಾಫಿಗೆ ಬೆಂಬಲ ಬೆಲೆ ಘೋಷಿಸಲಿ. ಕಾಫಿ ಮಂಡಳಿಯ ಮೂಲಕ ಕಾಫಿ ಖರೀದಿಸಿ ಅದರ ಮಾರಾಟಕ್ಕೆ ವ್ಯವಸ್ಥೆ ಮಾಡಿ ಕೊರತೆ ತುಂಬಿಕೊಡಲಿ. ಹಾಗಿದ್ದಾಗ ಮಾತ್ರ ತೋಟ ಕೈಗಾರಿಕೆಯನ್ನು ಉಳಿಸಲು ಸಾಧ್ಯ.

ಕಾಫಿ ಬೆಲೆ ಸ್ಥಿರತೆ ನಿಧಿಗೆ 1000 ಕೋಟಿ ರೂಪಾಯಿ ತೆಗೆದಿಟ್ಟಿರುವುದಾಗಿ ಹೇಳಿದ್ದರೂ ಇದರಲ್ಲಿ ಚಹಾ, ರಬ್ಬರ್, ಏಲಕ್ಕಿ ಎಲ್ಲವೂ ಸೇರುವುದರಿಂದ ಕಾಫಿಗೆ ದೊರೆಯುವುದು ಕೇವಲ 200 ಕೋಟಿ . ಜಾಗತೀಕರಣ, ಉದಾರೀಕರಣದಿಂದ ಎದುರಾಗಿರುವ ಬಿಕ್ಕಟ್ಟು ನಿವಾರಣೆಗೆ ಬದಲಾಗಿ ಕಾರ್ಮಿಕರ ಮೇಲೆ ಅದನ್ನು ಹೇರಲಾಗುತ್ತಿದೆ.

ರಬ್ಬರ್ ಖರೀದಿಸುವ ಮೂಲಕ ರಬ್ಬರ್ ಮಂಡಳಿ ಉದ್ಯಮದ ಉಳಿವಿಗೆ ಮುಂದಾಗಿರುವಾಗ ಕಾಫಿ ಮಂಡಳಿಯೂ ಈ ಕ್ರಮಕ್ಕೆ ಮುಂದಾಗಬಾರದೇಕೆ?. ಬೆಳೆಗಾರರು ಮತ್ತು ಕಾರ್ಮಿಕರಿಬ್ಬರೂ ಆತ್ಮಹತ್ಯೆ ಮಾಡಿಕೊಳ್ಳಬೇಕಾದ ಪರಿಸ್ಥಿತಿ ನಿರ್ಮಾಣವಾಗಿದೆ. ಇಂತಹ ಸಂಕಷ್ಟಮಯ ಸ್ಥಿತಿಯಲ್ಲಿ ಕಾಫಿ ಮಂಡಳಿ ಮಧ್ಯ ಪ್ರವೇಶಿಸಿ ಉದ್ಯಮದ ಉಳಿವಿಗೆ ಕ್ರಮ ಕೈಗೊಳ್ಳಬೇಕು.

ಪಿ.ಲಾಲಾಜಿಬಾಬು
ಪ್ರಧಾನಕಾರ್ಯದರ್ಶಿ
ಅಖಿಲ ಭಾರತ ಪ್ಲಾಂಟೇಶನ್ ಕಾರ್ಮಿಕರ ಫೆಡರೇಷನ್





ಆಹಾರ ದಾಸ್ತಾನು ಮತ್ತು ಹಸಿವು

ಜನರಲ್ಲಿ ಹಸಿವು, ಹಾಹಾಕಾರಗಳು ಹೆಚ್ಚುತ್ತಿವೆ: ಆದರೆ ಸರ್ಕಾರದ ಗೋದಾಮುಗಳಲ್ಲಿ ಆಹಾರಧಾನ್ಯ ಕೊಳೆಯುತ್ತಿದೆ. ನಿಜಕ್ಕೂ ಕೇಂದ್ರ ಸರ್ಕಾರ ಏನನ್ನು ಬಯಸುತ್ತಿದೆ?

ಉತ್ಸಾ ಪಟ್ನಾಯಕ್

2001ನೇ ಇಸವಿಯಲ್ಲಿ ಆಹಾರ ಧಾನ್ಯಗಳ ತಲಾ ಲಭ್ಯತೆ 143 ಕೆಜಿಗೂ ಕೆಳಗೆ ಇಳಿದಿದೆ ಇದು ಎಲ್ಲ ಸಮಯದಲ್ಲೂ ಅತ್ಯಂತ ಕಡಿಮೆ ಲಭ್ಯತೆ. ಹಾಗೆಯೇ ದ್ವಿದಳ ಧಾನ್ಯಗಳ ತಲಾ ಲಭ್ಯತೆ 10 ಕೇಜಿಗೂ ಕೆಳಗಿಳಿದಿದೆ. ಹಿಂದೆ ಇಂತಹ ಪರಿಸ್ಥಿತಿ ಉಂಟಾಗಿದ್ದು ಎರಡನೇ ಮಹಾಯುದ್ಧಕ್ಕಿಂತ ಮೊದಲು. ಅಂದರೆ ಸ್ವಾತಂತ್ರ್ಯ ಬರುವ ಮೊದಲು ಅರವತ್ತರ ದಶಕದ ಮಧ್ಯದಲ್ಲಿ ಉಂಟಾದ ಆಹಾರ ಬಿಕ್ಕಟ್ಟಿನ ಸಮಯದಲ್ಲೂ ಇಂತಹ ಇಳಿತ ಉಂಟಾಗಿತ್ತು.

ಹೀಗಿದ್ದರೂ ಬುದ್ಧಿಜೀವಿಗಳೆನಿಸಿಕೊಂಡವರು ಈ ವಿಷಯದ ಪರಿವೆಯೇ ಇಲ್ಲವೊ ಎಂಬಂತಿದ್ದಾರೆ.


ಹಿಂದಿನ ಪರಿಸ್ಥಿತಿಗೂ ಇಂದಿನ ಪರಿಸ್ಥಿತಿಗೂ ಒಂದು ಮುಖ್ಯ ವ್ಯತ್ಯಾಸವಿದೆ. ಅದೇನೆಂದರೆ ಅಂದು ಉತ್ಪಾದನೆಯೇ ಕಡಿಮೆಯಿತ್ತು. ಇಂದು ಉತ್ಪಾದನೆಯಿದ್ದೂ ಲಭ್ಯತೆ ಕಡಿಮೆ ಯಾಗಿದೆ ಎನ್ನುವುದು. ಅರವತ್ತೈದು ದಶಲಕ್ಷ ಟನ್ನುಗಳ ಆಹಾರ ಧಾನ್ಯಗಳ ದಾಸ್ತಾನು ಭರತದಲ್ಲಿರುವಾಗ ಎಷ್ಟು ಹಸಿದ ಜನಗಳಿದ್ದಾರೆ ಎನ್ನುವುದು ಅವರ ಗ್ರಹಿಕೆಯ ಹೊರಗಿನದು.

ಜುಲೈ 2002ರ ಹೊತ್ತಿಗೆ 43 ದಶಲಕ್ಷ ಟನ್ನುಗಳ ಆಹಾರ ಧಾನ್ಯಗಳ ದಾಸ್ತಾನಿದೆ. ಇದು ಪುನರ್ವಿಮರ್ಶಿತ ದಾಸ್ತಾನು ಅವಶ್ಯಕತೆಗಿಂತ ಹೆಚ್ಚು. ಇದು ಹೇಗೆ ಸಾಧ್ಯವಾಯಿತು. 2000-2001ನೇ ಸಾಲಿನಲ್ಲಿ ಕನಿಷ್ಠ ಬೆಂಬಲ ಬೆಲೆ ಹೆಚ್ಚಿಸಿದ್ದರಿಂದ ಇದು ಆಗಿದೆ ಎಂಬುದು ಒಂದುವಾದ. ಇನ್ನೊಂದು ವಾದವೆಂದರೆ ಜನ ತಮ್ಮ ಬಳಕೆಗೂ ಉಪಯೋಗಿಸಿದ ಮೇಲೆ ಮಿಕ್ಕ ದಾಸ್ತಾನು ಇದು ಎಂಬುದು. ಇದು ಬಹುಳದ ಸಮಸ್ಯೆ ಎಂದು ಇದರ ಅರ್ಥ ಇದೇ ವಾದ ಹಾಲು ಮೊಟ್ಟೆ,

ಕೋಷ್ಟಕ 1 ಭಾರದಲ್ಲಿ ಆಹಾರ ಧಾನ್ಯಗಳ ತಲಾ ಲಭ್ಯತೆ. (ಮೂರು ವರ್ಷಗಳ ವಾರ್ಷಿಕ ಸರಾಸರಿ)				
ಮೂರು ವರ್ಷಗಳ ಅವಧಿ ಕೊನೆಯಾಗುವ ವರ್ಷ	ಸರಾಸರಿ ಜನಸಂಖೆ ದಶಲಕ್ಷಗಳಲ್ಲಿ ಕ್ಕಿ	ತಲಾ ಲಭ್ಯತೆ ಧಾನ್ಯಗಳು	ದ್ವಿದಳ ಧಾನ್ಯಗಳು	ಒಟ್ಟು
1992	50.70	162.83	12.1	174.9
1995	901.02	160.06	12.2	172.26
1998	953.04	162.08	12.0	174.08
2001	1008.14	151.80	11.6	163.40
2001ನೇ ಸಾಲಿಗೆ	1027.00	142.55	9.6	152.15

ಕೋಳಿಗಳ ಬಳಕೆ ಹೆಚ್ಚಾಗಿದೆ ಎನ್ನುತ್ತದೆ. ಅಂದರೆ ಈ ಹೆಚ್ಚಳಕ್ಕೆ ತಕ್ಕಂತೆ ಆಹಾರ ಧಾನ್ಯಗಳ ಬಳಕೆ ಕಡಿಮೆ ಆಗುತ್ತದೆ ಎಂಬುದು ಅವರ ವಾದ. ಇನ್ನೊಂದು ವಾದವೆಂದರೆ ಜನರ ಆಹಾರ ಅವಶ್ಯಕತೆಯೇ ಇಳಿದಿದೆ ಎಂಬುದು ಈ ವಾದದ ಮುಂದಿನ ಭಾಗ ಇದು. ಎರಡು ಸತತ ವರ್ಷಗಳ ಬರಗಾಲ ಉಂಟಾದರೆ ಇದು ಸರಿಹೋಗುತ್ತದೆ ಎಂದು.

ಈ ಯಾವ ವಾದಗಳಲ್ಲೂ ಹುರುಳಿಲ್ಲ. ಯಾಕೆಂದರೆ ಕನಿಷ್ಠ ಬೆಂಬಲ ಬೆಲೆ ಹೆಚ್ಚಾಗುವುದಕ್ಕಿಂತ ಎರಡು ವರ್ಷಗಳ ಮೊದಲೇ ದಾಸ್ತಾನು ಹೆಚ್ಚಾಗತೊಡಗಿತ್ತು. ಜನ ಬೇರೆ ಆಹಾರಗಳಾದ ಹಾಲು ಮೊಟ್ಟೆ ಮಾಂಸ ಇತ್ಯಾದಿಗಳ ಬಳಕೆ ಹೆಚ್ಚಿಸಿರುವುದೂ ವಾಸ್ತವವಲ್ಲ. ಮೂರನೇ ವಾದವೂ ಅಷ್ಟೇ ರೈತಾಪಿ ವರ್ಗ ಮತ್ತು ಕೂಲಿಕಾರ ವರ್ಗದ ಆದಾಯವೇ ಕಡಿಮೆಯಾಗಿರುವುದನ್ನು ಅದು ನಿರ್ಲಕ್ಷಿಸುತ್ತದೆ.



ಆಹಾರ ದಾಸ್ತಾನಿನಲ್ಲಿನ ಹೆಚ್ಚಳ ಭಾರತದ ಸಮಾಜದಲ್ಲಿನ ಅಸಮಾನತೆ ತೀವ್ರವಾಗಿ ಹೆಚ್ಚಾಗಿರುವುದರಿಂದ ಆದದ್ದು ಎಂಬುದನ್ನು ಈ ಮೂರು ವಾದಗಳು ಗಮನಿಸುವುದಿಲ್ಲ ಈ ಅಸಮಾನತೆ ಎರಡು ಪ್ರಕ್ರಿಯೆಗಳಿಂದ ಉಂಟಾದದ್ದು ಜನಸಾಮಾನ್ಯನ ಖರೀದಿ ಸಾಮರ್ಥ್ಯಕ್ಕೆ ಕೊಡಲಿಯೇಟು ಹಾಕಿದ್ದು ಒಂದು ಪ್ರಕ್ರಿಯೆ -ಇದು ಆದದ್ದು ಸಾರ್ವಜನಿಕ ಖರ್ಚಿನಲ್ಲಿ ಕಡಿತ ಮಾಡುವ ಮೂಲಕ ಮತ್ತು ಕೃಷಿ ಉತ್ಪನ್ನಗಳ ಮಾರುಕಟ್ಟೆ ಬೆಲೆಗಳಲ್ಲಿ ತೀವ್ರ ಕುಸಿತದಿಂದಾಗಿ.

ಎರಡನೇ ಪ್ರಕ್ರಿಯೆ ಯಾವುದೆಂದರೆ ಆಹಾರ ಸಹಾಯಧನ ನೀತಿಯಲ್ಲಿನ ಬದಲಾವಣೆ ಎಲ್ಲರಿಗೂ ರೇಷನ್ ನೀಡುವ ಪದ್ಧತಿಯನ್ನು ಕೈಬಿಡುವ ಮೂಲಕ ಇದನ್ನು ಸಾಧಿಸಲಾಯಿತು. ಬಡತನ ರೇಖೆಗಿಂತ ಕೆಳಗಿರುವವರು ಮತ್ತು ಮೇಲೆ ಇರುವವರು ಎಂಬ ಬೇದ ಮಾಡಲಾಯಿತು.

ಇಲ್ಲಿನ ವಿಪರ್ಯಾಸವನ್ನು ನೋಡಿ. ಆರ್ಥಿಕ ಸುಧಾರಣೆಗಳ ಮೂಲಕ ಬೇರೆಲ್ಲ ವಲಯಗಳಲ್ಲಿ ಲೈಸನ್ಸ್ ಪರ್ಮಿಟ್ ವ್ಯವಸ್ಥೆಯನ್ನು ಕೈಬಿಡಲಾಯಿತು. ಆದರೆ ಸಾರ್ವಜನಿಕ ವಿತರಣಾ ಪದ್ಧತಿಯಲ್ಲಿ ಇದು ಜಾರಿಗೆ ಬಂತು. ಬಡವರ ಹೊಟ್ಟೆಯ ಮೇಲೆ ಹೊಡೆಯಲು.

ಕೆಲವು ನಂಬಲರ್ಹ ಅಂಕಿ - ಸಂಖ್ಯೆಗಳನ್ನು ಗಮನದಲ್ಲಿಟ್ಟುಕೊಂಡು ಮೂಲಭೂತ ವಿಷಯಗಳನ್ನು ಗಮನಿಸಿದರೆ ಈ ಪರಿಸ್ಥಿತಿಯ ಸರಿಯಾದ ವಿಶ್ಲೇಷಣೆ ಸಾಧ್ಯವಾಗುತ್ತದೆ. ತೊಂಬತ್ತರ ದಶಕದಲ್ಲಿ ಆಹಾರ ಧಾನ್ಯಗಳ ಉತ್ಪಾದನೆಯ ಬೆಳವಣಿಗೆ ಪ್ರಮಾಣ ವಾರ್ಷಿಕ ಶೇ. 1.7ಕ್ಕೆ ಇಳಿದಿದೆ. ಇದೇ ಸಮಯದಲ್ಲಿ ಜನ ಸಂಖ್ಯೆಯ ಬೆಳವಣಿಗೆಯ ಪ್ರಮಾಣ ಶೇ. 1.9ರಷ್ಟು ಅಂದರೆ ವಾರ್ಷಿಕ ತಲಾ ನಿವ್ವಳ ಆಹಾರ ಧಾನ್ಯ ಉತ್ಪಾದನೆ 3.5 ಕೆ.ಜಿಯಷ್ಟು ಇಳಿದಿದೆ. 1994-95ರಲ್ಲಿ ಇದು 180 ಕೆಜಿಯಿದ್ದದ್ದು 2000-2001ರಲ್ಲಿ 1765 ಕೆ.ಜಿ ಗಿಳಿಯಿತು.

ಎರಡನೇಯದಾಗಿ ದೇಶದಲ್ಲಿನ ತಲಾ ಆದಾಯ ಶೇ. 3 ರ ಪ್ರಮಾಣದಲ್ಲಿ ಬೆಳೆಯುತ್ತಿರುವುದರಿಂದ ಅವರ ಹೆಚ್ಚಿದ ಅವಶ್ಯಕತೆಗಳನ್ನು ಪೂರೈಸಲು ಆಹಾರದ ಆಮದು ಮಾಡಿಕೊಳ್ಳುವ ಅವಶ್ಯಕತೆಯು ಬೇಕಾಗಿತ್ತು. ಆದಾಯ ಹೆಚ್ಚದಂತೆ ಆಹಾರ ಧಾನ್ಯಗಳ ಅವಶ್ಯಕತೆ ಇಳಿಯುತ್ತದೆ ಎಂಬುದು ಸರಿಯಾದ ವಾದವಲ್ಲ.

ಈ ಹೋಲಿಕೆಯನ್ನು ನೋಡಿ. ಭಾರತದಲ್ಲಿ ತಲಾ ಆಹಾರಧಾನ್ಯ 190 ಕೆ.ಜಿಯಾದರೆ ನಮ್ಮ ಎರಡರಷ್ಟು ತಲಾ ಆದಾಯವಿರುವ ಚೀನಾದಲ್ಲಿ ಆಹಾರ ಧಾನ್ಯ ಅವಶ್ಯಕತೆ ತಲಾ 320 ಕೆಜಿ ಮೆಕ್ಸಿಕೋದಲ್ಲಿ ಇದು 375 ಕೆಜಿಯಿತ್ತು ಅಮೇರಿಕದಲ್ಲಿ 850 ಕೆ ಜಿ.

ಒಟ್ಟಾರೆಯಾಗಿ ಹೇಳುವುದಾದರೆ ಅಭಿವೃದ್ಧಿಯಾದಂತೆ ತಲಾ ಆಹಾರ ಧಾನ್ಯಗಳ ಬಳಕೆ ಹೆಚ್ಚಾಗುತ್ತಾ ಹೋಗುತ್ತದೆ. ಈ ಮೂಲಕ ಒಟ್ಟು ಕ್ಯಾಲೋರಿ ಸೇವನೆ ಹೆಚ್ಚಾಗುತ್ತದೆ.. ಆದಾಯದಲ್ಲಿ ಕುಸಿತ ಉಂಟಾದರೆ ಇದಕ್ಕೆ ವಿರುದ್ಧವಾದದ್ದು ಆಗುತ್ತದೆ.

ಕೋಷ್ಟಕಗಳು ಅಂಕೆ-ಸಂಖ್ಯೆಗಳನ್ನು ನೀಡುತ್ತವೆ ಆದರೆ ಅವುಗಳ ಸರಿಯಾದ ಅರ್ಥೈಸುವಿಕೆ ಅಗತ್ಯ.. ನಿಜವಾಗಿ ಆಗುತ್ತಿರುವುದೇನು?

ತಲಾ ಆದಾಯ ಹೆಚ್ಚುತ್ತಿರುವಾಗಲೂ ಆದಾಯದ ಅಸಮಾನ ವಿತರಣೆಯೂ ಆಗುತ್ತಿದೆ- ಬಡತನ ರೇಖೆಯ ಜಾರಿಯಿಂದಾಗಿ ಸಾಂಖ್ಯಿಕ ವಾಗಿಯೂ ಬಡವರಿಗೆ ಆಹಾರ ನಿಲುಕದಂತೆ ಮಾಡಲಾಗಿದೆ. ಇದೆಲ್ಲದರ ಪರಿಣಾಮವಾಗಿ ಶೇ. 15 ರಷ್ಟು ಜನ ಬಳಕೆ ಖರ್ಚಿನ ಅರ್ಧದಷ್ಟನ್ನು ಖರ್ಚು ಮಾಡುತ್ತಿದ್ದಾರೆ. ಅವರು ನಿಜವಾಗಿಯೂ ಉತ್ತಮ ಗುಣಮಟ್ಟದ ಆಹಾರ ಬಳಸುತ್ತಿದ್ದಾರೆ- ಆದರೆ ಸಮಾಜದ ಕೆಳಸ್ತರದ ಶೇ. 60ರಷ್ಟು ಜನ ಆಹಾರ ನಿಲುಕದೆ ಪೌಷ್ಟಿಕತೆಯ ಕೊರತೆ ಅನುಭವಿಸುತ್ತಿದ್ದಾರೆ. ಈ ಕೊರತೆ ಹೆಚ್ಚುತ್ತಾ ಹೋಗುತ್ತಿದೆ.

ಕೋಷ್ಟಕ 1 ಅನ್ನು ನೋಡಿದರೆ ದಶಕದ ಕೊನೆಗೆ ತಲಾ ಆಹಾರ ಧಾನ್ಯದ ಲಭ್ಯತೆ 11.5 ಕೆಜಿಯಷ್ಟು ಇಳಿದಿರುವುದು ಗೊತ್ತಾಗುತ್ತದೆ. ಇದರಲ್ಲಿ 1997ರ ನಂತರದ ನಾಲ್ಕು ವರ್ಷದ ಅವಧಿಯಲ್ಲೇ 10.7 ಕೆ.ಜಿ. ಕುಸಿತ ಆಗಿದೆ. ಐದು ಜನರ ಒಂದು ಕುಟುಂಬ 58 ಕೆಜಿಗಳಷ್ಟು ಕಡಿಮೆ ಆಹಾರ ಧಾನ್ಯದ ಬಳಕೆ ಮಾಡುತ್ತಿದೆ ಎಂದು ಇದರ ಅರ್ಥ.

ಪರಿಸ್ಥಿತಿಯನ್ನು ಸರಿಪಡಿಸಲು ಏನ ಮಾಡಬಹುದು?

ಎಲ್ಲರಿಗೂ ಪಡಿತರ ವಿತರಣೆ ಮಾಡುವ ಹಿಂದಿನ ವ್ಯವಸ್ಥೆಯನ್ನು ಪುನಃ ಜಾರಿಗೆ ತರುವಂತಹದ್ದು ಒಂದು ಕ್ರಮ. ಆಹಾರ ಧಾನ್ಯಗಳಲ್ಲಿ ಒಂದು ಭಾಗವನ್ನು ಬರಗಾಲ ಪೀಡಿತ ಪ್ರದೇಶಗಳಲ್ಲಿ ವಿತರಿಸಬಹುದು.

ಜನರ ಖರೀದಿ ಸಾಮರ್ಥ್ಯವನ್ನು ಹೆಚ್ಚಿಸುವ ದೀರ್ಘಕಾಲಿನ ಕ್ರಮಗಳನ್ನು ಕೈಗೊಳ್ಳಬಹುದು ಇದಲ್ಲದೆ ಕೆಲಸಕ್ಕಾಗಿ ಆಹಾರ ಕಾರ್ಯಕ್ರಮದ ಸೌಕರ್ಯಗಳನ್ನು ಹೆಚ್ಚಿಸುವ ಹಲವು ಯೋಜನೆಗಳನ್ನು ಹಮ್ಮಿಕೊಳ್ಳ ಬಹುದು. ಈ ಮೂಲಕ ಏನಿಲ್ಲವೆಂದರೂ 16000 ಕೋಟಿ ರೂಪಾಯಿಗಳ ಕೆಲಸ ಮೂಡಿಸುವುದು ಸಾಧ್ಯ. ಆದರೆ ಈ ಕೆಲಸವನ್ನು ಎನ್.ಡಿ.ಎ ಸರ್ಕಾರ ಮಾಡುವುದಿಲ್ಲ.

ಎಡ ಮತ್ತು ಪ್ರಗತಿಪರ ಪಕ್ಷಗಳು ಈ ದಿಸೆಯಲ್ಲಿ ಒತ್ತಡ ಹೇರಿ ಜನರನ್ನು ಸಂಘಟಿಸುವ ಕೆಲಸ ಮಾಡುವಂತಾದರೆ ಒಂದು ಚಳುವಳಿ ಮೂಡಿಬರಲು ಸಾಧ್ಯ.

ಕೋಷ್ಟಕ 2 ಭಾರತದ ಗ್ರಾಮೀಣ ಮತ್ತು ಪಟ್ಟಣ ಪ್ರದೇಶಗಳಲ್ಲಿ ಸರಾಸರಿ ಕ್ಯಾಲೊರಿ ಸೇವನೆಯಲ್ಲಿನ ಕುಸಿತ.				
ಸಾಲು	ಗ್ರಾಮೀಣ ಪ್ರದೇಶ		ಪಟ್ಟಣ ಪ್ರದೇಶ	
1972-73	2266	100	2107	100
1983	2221	98	2089	99.1
1993-94	2.153	95	2071	98.3
1972-73ರಿಂದ 1983 ಕ್ಕೆ ಕುಸಿತ	45	18		
1983-1993-94	68	18		
ಒಟ್ಟು	113	36		

ಟಿಪ್ಪಣಿ : ಗ್ರಾಮೀಣ ಪ್ರದೇಶದಲ್ಲಿ ಆರಂಬಿಕ ಕ್ಯಾಲೋರಿ ಸೇವನೆ ಬಡತನ ರೇಖೆಗಿಂತ (ಅಂದರೆ 24009 ಕ್ಯಾಲೋರಿಗಳು) ಕೆಳಗಿತ್ತು ಇನ್ನೂ ಕುಸಿಯಿತು. ಪಟ್ಟಣ ಪ್ರದೇಶದಲ್ಲಿ ಅದು ಬಡತನ ರೇಖೆಗಿಂತ ಮೇಲೆ ಇದದ್ದು (2100 ಕಿ.ಕ್ಯಾ.) ಕುಸಿಯಿತು.

ಸಂಗ್ರಹಾನುವಾದ
ಜಿ.ಎಸ್. ಮಣಿ

ಉಗ್ರಗಾಮಿ ಚಟುವಟಿಕೆಗಳಿಂದ ಉರಿಯುತ್ತಿರುವ ತ್ರಿಪುರ-ಕೈ ಜೋಡಿಸುತ್ತಿರುವ ಕಾಂಗ್ರೆಸ್

ಜನತೆಯ ಸೌಹಾರ್ದ ಬೆಂಬಲಕ್ಕೆ ಕರೆ

ಮುಂದಿನ ವರುಷದ ಆರಂಭದಲ್ಲಿ ವಿಧಾನಸಭಾ ಚುನಾವಣೆಗಳು ನಡೆಯಲಿವೆ. ಎಡರಂಗವನ್ನೇ ಮತ್ತೆ ಜನ ಅಧಿಕಾರಕ್ಕೆ ತರುವ ಸೂಚನೆ ಅರಿತ ಕಾಂಗ್ರೆಸ್, ಉಗ್ರಗಾಮಿಗಳ ಜೊತೆಗೂಡಿ ಪಿತೂರಿ ಹೆಣೆಯುತ್ತಿದೆ. ಇದಕ್ಕೆ ಅಮೆರಿಕಾದ ಕುಮ್ಮಕ್ಕು ಬೇರೆ. ಕೇಂದ್ರ ಸರ್ಕಾರವೂ ರಾಜ್ಯದ ನೆರವಿಗೆ ಬಾರದೇ ಕುತಂತ್ರಗಳು ಫಲಿಸಲು ಬಿಟ್ಟಿದೆ. ತ್ರಿಪುರಾದಲ್ಲಿನ ಇಂದಿನ ಸ್ಥಿತಿ ಬಗ್ಗೆ...

2003 ಫೆಬ್ರುವರಿಯಲ್ಲಿ ಅಸೆಂಬ್ಲಿ ಚುನಾವಣೆ ಸಮೀಪಿಸುತ್ತಿದ್ದಂತೆ, ಉಗ್ರಗಾಮಿ ಚಟುವಟಿಕೆಗಳು ತ್ರಿಪುರದಲ್ಲಿ ತೀವ್ರಗೊಂಡಿವೆ. ಕಳೆದ 3 ತಿಂಗಳಲ್ಲಿ ಅಧಿಕಾರ ರೂಢ ಸಿ.ಪಿಐ(ಎಂ)ಗೆ ಸೇರಿದ 20ಕ್ಕೂ ಹೆಚ್ಚು ಮುಖಂಡರು, ಕಾರ್ಯಕರ್ತರನ್ನು ಹತ್ಯೆಗೈಯ್ಯಲಾಗಿದೆ. ಇದೂ ಸಾಲದೆಂಬಂತೆ ಉಗ್ರಗಾಮಿ ಸಂಘಟನೆ 'ನ್ಯಾಶನಲ್ ಲಿಬರೇಶನ್ ಫ್ರಂಟ್ ಆಫ್ ತ್ರಿಪುರ, (NLFT) ಯ ಮುಖಂಡ ಬಿಜಯ್ ಕುಮಾರ್ ಹರಂಗ್‌ಕಾಲ್ ಜುಲೈ 22 ರಿಂದ 26ರ ವರೆಗೆ ಜಿನೇವಾದಲ್ಲಿ ಸಿಐಎ ಪ್ರಾಯೋಜಿತ 'ಬುಡಕಟ್ಟು ಜನಾಂಗ ಕುರಿತ ಕಾರ್ಯನಿರತ ಗುಂಪಿನ' ನ ಸಭೆಯಲ್ಲಿ "ತ್ರಿಪುರದ ಬುಡಕಟ್ಟು ಜನರು ಭಾರತದಿಂದ ಪ್ರತ್ಯೇಕವಾಗಲು ಬಯಸುತ್ತಾರೆ. ಇದಕ್ಕೆ ವಿಶ್ವ ಸಂಸ್ಥೆ ಮತ್ತು ಇತರ ಅಂತರರಾಷ್ಟ್ರೀಯ ಸಂಸ್ಥೆಗಳ ಸಹಾಯ ಬೇಕು" ಎಂದು ಯಾಚಿಸಿದ್ದಾನೆ.

ಇದರಿಂದ ಉತ್ತೇಜಿತರಾದ, ಈಶಾನ್ಯ ಭಾರತದಲ್ಲಿ ಕಾರ್ಯ ನಿರ್ವಹಿಸುತ್ತಿರುವ 8 ಉಗ್ರಗಾಮಿ ಸಂಘಟನೆಗಳು ಆಗಸ್ಟ್ 15ರ ಸ್ವಾತಂತ್ರ ದಿನಾಚರಣೆಯನ್ನು ಬಹಿಷ್ಕರಿಸಲು ಕರೆ ನೀಡಿದವು. ಅದರಲ್ಲಿ ತ್ರಿಪುರಾದ ಉಗ್ರಗಾಮಿ ಸಂಘಟನೆಯೂ ಸೇರಿದೆ.

ಇಂತಹ ಸಂದಿಗ್ಧ ಪರಿಸ್ಥಿತಿಯಲ್ಲಿರುವ ತ್ರಿಪುರಾದ ಜನತೆಗೆ ಸೆಪ್ಟೆಂಬರ್ 30 ರಂದು ದೇಶದಾದ್ಯಂತ ಸೌಹಾರ್ದ ಬೆಂಬಲವನ್ನು ಸೂಚಿಸಬೇಕೆಂದು ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷ (ಸಿಪಿಐ(ಎಂ)ದ ಕೇಂದ್ರ ಸಮಿತಿ ಕರೆ ನೀಡಿದೆ.

ಉಗ್ರರ ಧಾಳಿ

ಉಗ್ರಗಾಮಿ ಚಟುವಟಿಕೆಗಳು ತಾರಕಕ್ಕೇರಿರುವುದು ಇದು ಮೊದಲ ಬಾರಿಯೇನಲ್ಲ. ಹಿಂದೆಯೂ ಹಲವು ಬಾರಿ ಈ ಧಾಳಿಗಳು ನಡೆದಿವೆ. ಗಡಿಯಾಚೆಯ ಬಾಂಗ್ಲಾದೇಶದಿಂದ ಕಾರ್ಯನಿರ್ವಹಿಸುತ್ತಿರುವ ಈ ಸಂಘಟನೆಯ ಮುಖ್ಯಗುರಿ, ಬುಡಕಟ್ಟು ಜನಾಂಗ ಮತ್ತು ಇತರರ ನಡುವೆ ಇರುವ ಐಕ್ಯತೆಯನ್ನು ಒಡೆಯುವುದು. ಆ ಮೂಲಕ ಎಡ ಚಳುವಳಿ ಬಲಿಷ್ಠವಾಗದಂತೆ ನೋಡಿಕೊಳ್ಳುವುದು. ಆದ್ದರಿಂದ ಐಕ್ಯತೆಯನ್ನು ಸಾಧಿಸಲು ಹೋಗುತ್ತಿರುವ ಎಡ ಚಳುವಳಿಯ, ಅದರಲ್ಲೂ ಮುಖ್ಯವಾಗಿ ಸಿಪಿಐ(ಎಂ) ಮುಖಂಡರು, ಕಾರ್ಯಕರ್ತರು ಇದಕ್ಕೆ ಬಲಿ.

ಸ್ವಾತಂತ್ರ ಪೂರ್ವದಲ್ಲಿ, ರಾಜರ ಆಡಳಿತದಲ್ಲಿ, ಬುಡಕಟ್ಟು ಜನರ ಭೂಮಿ ಹಕ್ಕುಗಳಿಗಾಗಿ ಹೋರಾಟ ನಡೆಸಿದ ಕಮ್ಯುನಿಸ್ಟ್ ಪಕ್ಷಕ್ಕೆ ಅವರ ಮಧ್ಯೆ ಭದ್ರವಾದ ನೆಲೆ ಇದೆ. 1977 ಡಿಸೆಂಬರ್‌ನಲ್ಲಿ ನಡೆದ ಚುನಾವಣೆಯ ಮೂಲಕ ಅಧಿಕಾರಕ್ಕೆ ಬಂದಾಕ್ಷಣವೇ, ಎಡರಂಗ ಸರಕಾರವು ಗಿರಿಜನರ ಭಾಷೆಯಾದ 'ಕೋಕ್ ಬೊರೊಕ್' ಭಾಷೆಗೆ ಮನ್ನಣೆ ಕೊಟ್ಟು ಪ್ರಾಥಮಿಕ ಶಾಲೆಗಳಲ್ಲಿ ಆ ಭಾಷೆಯಲ್ಲಿ ಶಿಕ್ಷಣ ನೀಡಲು ಪ್ರಾರಂಭಿಸಿತು. ಪ್ರತ್ಯೇಕ ಸ್ವಾಯತ್ತ ಜಿಲ್ಲಾ ಮಂಡಳಿಗಳನ್ನು ರಚಿಸಿ, (autonomous district council) ವಿಶೇಷ ಸ್ಥಾನ ಮಾನಗಳನ್ನು ನೀಡಿದುದಲ್ಲದೆ, ಅಲ್ಲಿ ಚುನಾವಣೆ ನಡೆಸಿದ ಕೀರ್ತಿ ಎಡರಂಗ ಸರಕಾರಕ್ಕೇ ಸಲ್ಲಬೇಕು. ಅಂತೆಯೇ ಪ್ರತಿ ಎ.ಡಿ.ಸಿ. ಚುನಾವಣೆಯಲ್ಲೂ ಸಿಪಿಐ(ಎಂ) ನೇತೃತ್ವದ ಎಡರಂಗವೇ ಭರ್ಜರಿ ಜಯ ಗಳಿಸುತ್ತಲಿತ್ತು. ಇತ್ತೀಚೆಗೆ ನಡೆದ ಚುನಾವಣೆಯಲ್ಲಿ ಮಾತ್ರ ಉಗ್ರಗಾಮಿಗಳ ಅವ್ಯಾಹತ ದಾಳಿ ಮತ್ತು ಬೆದರಿಕೆಯಿಂದಾಗಿ, ಸ್ವಾಯತ್ತ ಜಿಲ್ಲಾ ಮಂಡಳಿಗಳಲ್ಲಿ ಅಧಿಕಾರ ಕಳೆದುಕೊಳ್ಳಬೇಕಾಯ್ತು. ಇದರಿಂದ ಉತ್ತೇಜಿತರಾದ ಉಗ್ರಗಾಮಿ ಸಂಘಟನೆಗಳು ಅಸೆಂಬ್ಲಿ ಚುನಾವಣೆಯ ಮೇಲೆ ಕಣ್ಣಿಟ್ಟು ತಮ್ಮ ಚಟುವಟಿಕೆಗಳನ್ನು ತೀವ್ರಗೊಳಿಸಿವೆ.

ಹತ್ಯೆಗೊಳಗಾದ ಸಿಪಿಐ(ಎಂ) ಕಾರ್ಯಕರ್ತರಲ್ಲಿ ಬುಡಕಟ್ಟು ಜನಾಂಗದವರೇ ಹೆಚ್ಚು. ಜನರಲ್ಲಿ ಐಕ್ಯತೆಯನ್ನು ಮೂಡಿಸುವ ಇವರ ಪ್ರಯತ್ನವನ್ನು ಭಗ್ನಗೊಳಿಸುವುದೇ ಉಗ್ರಗಾಮಿಗಳ ಸಂಚು.

ಆಶ್ಚರ್ಯದ ಸಂಗತಿ ಎಂದರೆ ದೇಶದ ಸ್ವಾತಂತ್ರ್ಯಕ್ಕಾಗಿ ಹೋರಾಡಿದ ಕಾಂಗ್ರೆಸ್ ಪಕ್ಷ ಈ ಪ್ರತ್ಯೇಕತಾವಾದಿ ಉಗ್ರಗಾಮಿ ಚಟುವಟಿಕೆಗಳಿಗೆ ಬೆಂಬಲ ನೀಡುತ್ತಿದೆ. ಕಾಂಗ್ರೆಸ್ಸಿನ ಉದ್ದೇಶ ಸ್ಪಷ್ಟ. ಹೇಗಾದರೂ ಮಾಡಿ ಮುಂದಿನ ಅಸೆಂಬ್ಲಿ ಚುನಾವಣೆಯಲ್ಲಿ ಅಧಿಕಾರಕ್ಕೆ ಬರುವುದು. ಹಿಂದಿನ ಟಿ.ಯು.ಜೆ.ಎಸ್.ನ ಹೊಸರೂಪವಾದ ಐ.ಎನ್.ಪಿ.ಟಿ. (ಉಗ್ರಗಾಮಿ ಸಂಘಟನೆಯ ರಾಜಕೀಯ ಮುಖವಾಡದ ಪಕ್ಷ) ನ ಬೆಂಬಲ ಪಡೆಯುವುದು. ಅದಕ್ಕಾಗಿ ಜನತೆಯ ಮಾರಣ ಹೋಮ ನಡೆದರೂ ಲೆಕ್ಕಕ್ಕಿಲ್ಲ. ಇಂತಹ ಸಂದರ್ಭಸಾಧಕತನ ತ್ರಿಪುರಾದ ಕಾಂಗ್ರೆಸ್ ಪಕ್ಷದ್ದು. ಇದಕ್ಕೆ ಅಖಿಲ ಭಾರತ ಮುಖಂಡರ ಬೆಂಬಲವೂ ಇದೆ ಎಂದು ತಿಳಿದುಬಂದಿದೆ.

ಬಿಜೆಪಿ ಕುತಂತ್ರ

ಜತೆಯಲ್ಲಿ ಬಿಜೆಪಿ ನೇತೃತ್ವದ ಎನ್.ಡಿ.ಎ ಸರ್ಕಾರದ ಕುತಂತ್ರವೂ ಇದರಲ್ಲಿ ಸೇರಿದೆ. 1996-97ರಲ್ಲಿ ಸಂಯುಕ್ತ ರಂಗ ಸರಕಾರ ಅಧಿಕಾರದಲ್ಲಿದ್ದಾಗ ಉಗ್ರಗಾಮಿ, ಪ್ರತ್ಯೇಕತಾವಾದಿ ಚಟುವಟಿಕೆಗಳನ್ನು ಹತ್ತಿಕ್ಕಲು ಮಿಲಿಟರಿ ಪಡೆಗಳನ್ನು ಕಳಿಸಿತ್ತು. ಆದರೆ ಎನ್.ಡಿ.ಎ ಸರಕಾರ ಅಧಿಕಾರಕ್ಕೆ ಬಂದಾಕ್ಷಣ, ಗೃಹಮಂತ್ರಿ ಅಡ್ವಾನಿಯವರು ಮಿಲಿಟರಿ ಪಡೆಗಳನ್ನು ವಾಪಾಸು ಪಡೆದರು. ತ್ರಿಪುರ ಸರಕಾರ ಪಡೆಗಳನ್ನು ಕಳಿಸಲು ಆಗಿಂದಾಗ್ಗೆ ಒತ್ತಾಯಿಸುತ್ತಿದ್ದರೂ ಫಲಕಾರಿಯಾಗಲಿಲ್ಲ.

ಕಾಂಗ್ರೆಸ್ ಪಕ್ಷಕ್ಕೆ ಅಧಿಕಾರಕ್ಕೆ ಬರುವ ಆಸೆಯಾದರೆ, ಬಿಜೆಪಿಗೆ ಎಡರಂಗವನ್ನು ಅಧಿಕಾರದಿಂದ ಕಿತ್ತೆಸೆಯುವ ದುರಾಸೆ. ಪರಸ್ಪರ ಅಧಿಕಾರಕ್ಕಾಗಿ, ಕಚ್ಚಾಡುವ ಭ್ರಷ್ಟ ಬಿಜೆಪಿ ಮತ್ತು ಕಾಂಗ್ರೆಸ್ ಪಕ್ಷಗಳ ಉದ್ದೇಶ ಒಂದೇ - ಎಡರಂಗ ಮತ್ತು ಸಿಪಿಐ(ಎಂ)ನ್ನು ಅಧಿಕಾರದಿಂದ ದೂರವಿರಿಸುವುದು.

ಜುಲೈ 22 ರಿಂದ 26ರ ವರೆಗೆ ಜಿನೇವಾದಲ್ಲಿ ಜರುಗಿದ ಸಭೆಯಲ್ಲಿ ಪ್ರತ್ಯೇಕತಾವಾದಿ ಘೋಷಣೆಯನ್ನು ನೀಡಿದ ಬಿಜಯ್ ಕುಮಾರ್ ಹರಂಗ್‌ಕಾಲ್ ವಿರುದ್ಧ ಯಾವುದೇ ಹೇಳಿಕೆಯನ್ನು ಕಾಂಗ್ರೆಸ್ ಪಕ್ಷವಾಗಲೀ, ಬಿಜೆಪಿಯಾಗಲೀ ನೀಡಿಲ್ಲ.


ಉಗ್ರರಿಂದ ಹತರಾದವರು

ಬಿಜೋಯ್‌ಕುಮಾರ್ ಯಾರು? 1977ರ ಡಿಸೆಂಬರ್‌ನಲ್ಲಿ ನಡೆದ ತ್ರಿಪುರದ ಚುನಾವಣೆಯಲ್ಲಿ ಕಾಂಗ್ರೆಸ್ ಪಕ್ಷ ಒಂದು ಸ್ಥಾನವನ್ನೂ ಗಳಿಸಲಿಲ್ಲ. 4 ಸ್ಥಾನಗಳಿಸಿದ ತ್ರಿಪುರ ಉಪಜಾತಿ ಸಮಿತಿ (ಟಿ.ಯು.ಜೆ.ಎಸ್) ಪ್ರಮುಖ ವಿರೋಧ ಪಕ್ಷವಾಗಿತ್ತು. 60 ಸ್ಥಾನಗಳ ಪೈಕಿ ಉಳಿದ 56 ಸ್ಥಾನಗಳು ಎಡರಂಗದ ವಶವಾಗಿತ್ತು. ಇಂತಹ ಸಂದರ್ಭದಲ್ಲಿ ಬುಡಕಟ್ಟು ಜನಾಂಗದ ಉಗ್ರಗಾಮಿಗಳಿಗೆ ಕಾಂಗ್ರೆಸ್ ಬೆಂಬಲ ನೀಡಿತು. ಟಿ.ಯು.ಜೆ.ಎಸ್.ಗೆ ಸೇರಿದ ಉಗ್ರಗಾಮಿ ಸಂಘಟನೆ 'ತ್ರಿಪುರ ಸೇನೆ'ಯ ಮುಖಂಡನೇ ಬಿಜೋಯ್ ಕುಮಾರ್ ಹರಂಗ್‌ಕಾಲ್. ನಂತರ 1980ರಲ್ಲಿ ತ್ರಿಪುರ ರಾಷ್ಟ್ರೀಯ ಸ್ವಯಂ ಸೇವಕ (Tripura National Volunters - TNV) ಎಂಬ ಸಂಘಟನೆಯ ಮುಖಂಡನಾದ ಈತ. ಈ ಸಂಘಟನೆಯ ಕೆಲಸವೆಂದರೆ, ಬುಡಕಟ್ಟು ಜನರ ಮತ್ತು ಇತರರ ನಡುವೆ ವಿಷಬೀಜ ಬಿತ್ತುವುದು ಹಾಗೂ ಎಡ ಪಕ್ಷಗಳಿಗೆ ಸೇರಿದ ಕಾರ್ಯಕರ್ತರ ಮೇಲೆ ಧಾಳಿನಡೆಸುವುದು.

ಕಾಂಗ್ರೆಸ್ ಪಾತ್ರ


1980ರಿಂದ 1987ರ ವರೆಗೆ ಸತತವಾಗಿ ನಡೆದ ದಾಳಿಯಲ್ಲಿ 500ಕ್ಕೂ ಹೆಚ್ಚು ಎಡ ಚಳುವಳಿಯ ಕಾರ್ಯಕರ್ತರು, ಮುಖಂಡರು ಹತರಾದರು. 1987ರಲ್ಲಿ ಈತ, ಅಂದಿನ ಪ್ರಧಾನ ಮಂತ್ರಿ ರಾಜೀವ್ ಗಾಂಧಿಯೊಂದಿಗೆ ತೆರೆಯಮರೆಯ ಒಪ್ಪಂದಕ್ಕೆ ಬಂದ. ಬಾಂಗ್ಲಾದೇಶದಿಂದ ಕಾರ್ಯ ನಿರ್ವಯಿಸುತ್ತಿದ್ದ ಈತ ಅಕ್ಟೋಬರ್ 27,1987ರಲ್ಲಿ ರಾಜೀವ್ ಗಾಂಧಿಗೆ ಬರೆದ ಪತ್ರದಲ್ಲಿ ಟಿ.ಎನ್.ವಿ.ಯೊಂದಿಗೆ ಮಾತುಕತೆ ನಡೆಸಬೇಕೆಂದೂ, ಅದಕ್ಕೆ ಮುಂಚಿತವಾಗಿ ಸಿಪಿಐ(ಎಂ) ನೇತೃತ್ವದ ತ್ರಿಪುರ ಸರಕಾರವನ್ನು ವಜಾಗೊಳಿಸಬೇಕೆಂದೂ ಕೋರಿದ.

ಮಿಜೋರಾಂನ ಅಂದಿನ ಮುಖ್ಯಮಂತ್ರಿ ಹಾಗೂ ಕಾಂಗ್ರೆಸ್ ಮುಖಂಡರಾಗಿದ್ದ ಲಲ್ತಾನ್ ವಾಲಾ ಮಧ್ಯವರ್ತಿಯಾಗಿ ಕಾರ್ಯನಿರ್ವಹಿಸಿದ್ದು, ರಾಜೀವ್ ಗಾಂಧಿಯ ಜತೆ ಮಾತುಕತೆ ನಡೆಸಿದ ನಂತರ, 'ತ್ರಿಪುರದಲ್ಲಿ ತಾವು ಅಧಿಕಾರದಲ್ಲಿ ಇಲ್ಲದೆ ಇರುವುದರಿಂದ ಸದ್ಯಕ್ಕೆ ಮಾತುಕತೆ ಸಾಧ್ಯವಿಲ್ಲವೆಂದೂ, ಏನಿದ್ದರೂ ಫೆಬ್ರುವರಿ 1988ರಲ್ಲಿ ನಡೆಯುವ ಚುನಾವಣೆಯ ನಂತರವೇ ಮಾತುಕತೆ ನಡೆಸಲು ಸಾಧ್ಯವೆಂದೂ' ಉತ್ತರಿಸಲಾಯಿತು. ಅಂದರೆ 1988ರಲ್ಲಿ ನಡೆಯುವ ಚುನಾವಣೆಯಲ್ಲಿ ತಮಗೆ ಸಹಾಯ ನೀಡಬೇಕೆಂದು ಪರೋಕ್ಷವಾಗಿ ಸೂಚನೆ ನೀಡಲಾಯ್ತು.

ಅಂತೆಯೇ 1988ರ ಫೆಬ್ರುವರಿಯಲ್ಲಿ ನಡೆದ ಅಸೆಂಬ್ಲಿ ಚುನಾವಣೆಯ ಒಂದು ವಾರದ ಮೊದಲು, ಬೆಂಗಾಲಿ ಮಾತನಾಡುವ ಮಹಿಳೆಯರು, ಮಕ್ಕಳು ಸೇರಿದಂತೆ, ನೂರಾರು ಮಂದಿಯನ್ನು ವಿವಿಧ ಹಳ್ಳಿಗಳಲ್ಲಿ ಹತ್ಯೆಗೈಯ್ಯಲಾಯ್ತು. ಇದೊಂದು ಪೂರ್ವನಿಯೋಜಿತ ಕೃತ್ಯವಾಗಿದ್ದು, ಇದರಿಂದ ಬೆಂಗಾಲಿ ಮಾತನಾಡುವ ಜನರು ಎಡರಂಗದ ವಿರುದ್ಧ ಮತ ಚಲಾಯಿಸುವಂತೆ ಎತ್ತಿ ಕಟ್ಟಲಾಯಿತು. ಅಲ್ಲದೇ ಮುಖ್ಯವಾಗಿ ಕೇಂದ್ರದ ಪಡೆಗಳನ್ನು ಬಳಸಿ ಚುನಾವಣಾ ಅಕ್ರಮಗಳನ್ನು ವ್ಯಾಪಕವಾಗಿ ನಡೆಸಲಾಯಿತು. ಪರಿಣಾಮವಾಗಿ ಕಾಂಗ್ರೆಸ್, ಟಿಯುಜೆಎಸ್ ಕೂಟವು ಅಧಿಕಾರಕ್ಕೆ ಬರುವಂತಾಯಿತು. ಈ ನಾಟಕದ ಸೂತ್ರದಾರ, ಬಿಜೋಯ್ ಕುಮಾರ್ ಹರಂಗ್‌ಕಾಲ್ ಆಗಸ್ಟ್ 12, 1988ರಂದು ರಾಜೀವ್ ಗಾಂಧಿಯೊಂದಿಗೆ 'ಶರಣಾಗತಿಯ ಒಪ್ಪಂದ' ನಡೆಸಿ, ಸರಕಾರದ ನಿಗಮವೊಂದರ ಅಧ್ಯಕ್ಷನಾದ!

ಚರಿತ್ರೆಯ ಪುನರಾವರ್ತನೆ?


1993ರಲ್ಲಿ ನಡೆದ ಚುನಾವಣೆಯಲ್ಲಿ ಸಿಪಿಐ(ಎಂ) ನೇತೃತ್ವದ ಎಡರಂಗ ಸರಕಾರವು ಪುನಃ ಅಧಿಕಾರಕ್ಕೆ ಬಂದಿತು. 10 ವರ್ಷಗಳಿಂದೀಚೆಗೆ ಜನರ ಪರವಾದ ಆಡಳಿತ ನೀಡುತ್ತಿದೆ. ಬುಡಕಟ್ಟು ಜನಾಂಗ ಮತ್ತು ಇತರೆ ಭಾಷೆ ಮಾತನಾಡುವ ಜನರ ಐಕ್ಯತೆಗಾಗಿ ಹೋರಾಟ ನಡೆಸುತ್ತಿದೆ. ಭೌಗೋಳಿಕವಾಗಿ ತೀರಾ ಹಿಂದುಳಿದಿರುವ ತ್ರಿಪುರ ರಾಜ್ಯವು, ಸತತವಾಗಿ ಕೇಂದ್ರ ಸರಕಾರದಿಂದಲೂ ನಿರ್ಲಕ್ಷ್ಯಕ್ಕೆ ಒಳಗಾಗಿದೆ. ರಾಜ್ಯದ 3 ದಿಕ್ಕುಗಳ ಗಡಿಯು ಬಾಂಗ್ಲಾ ದೇಶಕ್ಕೆ ಹೊಂದಿಕೊಂಡಿದ್ದು, ಭಾರತದ ವಿವಿಧ ಮೂಲೆಗಳಿಂದ ಯಾವುದೇ ಪ್ರಮುಖ ರಾಷ್ಟ್ರೀಯ ಹೆದ್ದಾರಿಯಿಲ್ಲ. ತೀರಾ ಸವಕಲಾಗಿರುವ ಏಕೈಕ ಹೆದ್ದಾರಿಯಲ್ಲಿ ಸಂಚರಿಸಲು ಸಾಧ್ಯವಿಲ್ಲ. ರೈಲು ಸಂಪರ್ಕ ಇರುವುದು ಕೇವಲ 45 ಕಿ.ಮಿ. ಮಾತ್ರ, ಅದೂ ಬ್ರಾಡ್‌ಗೇಜ್ ಅಲ್ಲ - ಮೀಟರ್ ಗೇಜ್. ಇನ್ನುಳಿದ ಸಂಪರ್ಕ ಎಂದರೆ ಕಲ್ಕತ್ತದಿಂದ ವಿಮಾನ ಯಾನ. ಹೀಗಾದರೆ ಈ ರಾಜ್ಯದ ಬೆಳವಣಿಗೆ ಹೇಗೆ ಸಾಧ್ಯ.


ಜನಬಲದ ಹೋರಾಟ
ಮುಖ್ಯಮಂತ್ರಿ ಮಾಣಿಕ್ ಸರ್ಕಾರ್

ಆದರೂ ಎಡರಂಗ ಸರಕಾರವು ತನ್ನ ಇತಿಮಿತಿಯಲ್ಲಿ ಜನಪರ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುತ್ತಾ ಜನ ಬೆಂಬಲಗಳಿಸಿದೆ. ಇಂತಹ ಸರಕಾರವನ್ನು ಉರುಳಿಸಲು ಇನ್ನೊಂದು ಕುತಂತ್ರ ಜರುಗುತ್ತಲಿದೆ.

ತ್ರಿಪುರದ ಜನತೆಗೆ ದೇಶದ ಎಲ್ಲೆಡೆಯ, ಪ್ರಜಾಪ್ರಭುತ್ವ ಶಕ್ತಿಗಳ ಸೌಹಾರ್ದ ಬೆಂಬಲ ಅಗತ್ಯ. ಅಂತೆಯೇ ಸೆಪ್ಟೆಂಬರ್ 30 ರಂದು ರಾಜ್ಯ ವಿವಿಧ ಭಾಗಗಳಲ್ಲಿ ಸಭೆ, ಮೆರವಣಿಗೆ, ವಿಚಾರ ಸಂಕಿರಣ, ಸಭೆಗಳನ್ನು ನಡೆಸಿ ತ್ರಿಪುರ ಜನತೆಗೆ, ಅಲ್ಲಿನ ಎಡರಂಗ ಸರಕಾರಕ್ಕೆ ಸೌಹಾರ್ದಬೆಂಬಲ ಸೂಚಿಸಬೇಕು. ಉಗ್ರಗಾಮಿ ಚಟುವಟಿಕೆಗಳನ್ನು ಹಿಮ್ಮೆಟ್ಟಿಸಲು, ಶಾಂತಿಯುತ ಚುನಾವಣೆಗಳನ್ನು ನಡೆಸಲು, ಮಿಲಿಟರಿ ತುಕಡಿಗಳನ್ನು ತ್ರಿಪುರಕ್ಕೆ ಕಳುಹಿಸಬೇಕೆಂದು ಕೇಂದ್ರ ಸರಕಾರವನ್ನು ಒತ್ತಾಯಿಸಬೇಕು.

ಅಂತರರಾಷ್ಟ್ರೀಯ ವೇದಿಕೆಯಲ್ಲಿ ಭಾರತ ವಿರೋಧಿ, ಪ್ರತ್ಯೇಕತಾವಾದಿ ಘೋಷಣೆಗಳನ್ನು ನೀಡಿದ ಉಗ್ರಗಾಮಿ ಸಂಘಟನೆಯ ಮುಖಂಡ ಬಿಜೋಯ್‌ಕುಮಾರ್ ಹರಂಗ್‌ವಾಲ್ ನನ್ನು ಬಂಧಿಸಿ, ಅವನ ಸಂಘಟನೆ ಐಎನ್‌ಪಿಟಿ ಮತ್ತು ಕಾಂಗ್ರೆಸ್ ನಡುವಣ ಸಂಬಂಧವನ್ನು ಬಯಲಿಗೆಳೆಯಬೇಕು. ಆ ಮೂಲಕ ದೇಶ ಪ್ರೇಮಿ [illegible]ದಲ್ಲಿ ಜನರನ್ನು ಅಣಿನೆರಸಬೇಕಿದೆ.



ಕಥೆ

ಒಂದು ಮಂಚದ ಕಥೆ

ಡಾ.ಆರ್.ವಿ.ಭಂಡಾರಿ

ನಾಗೇಶ ಬಂಡಾರಿಯ ಬದುಕಿನೊಂದಿಗೆ ಬಸೆದುಕೊಂಡು ಬಿಟ್ಟ ಕನಸಿನ ಮಂಚ ಅನಾವರಣಗೊಳಿಸುವ ಸಂಗತಿಗಳು ಅನೇಕ. ಸರಳ ವಸ್ತುವಿನಿಂದ ಆರಂಭಗೊಳ್ಳುವ ಕಥೆ ಬೆಳೆಯುತ್ತಾ ಸಾಮಾಜಿಕ ಸಂಬಂಧಗಳನ್ನು ತೆರೆದುಕೊಳ್ಳುತ್ತಾ ಹೋಗುವುದು ವಿಶಿಷ್ಟ. ಹಾಗೇ ಮಂಚ ಸಿಕ್ಕ ಮೇಲೂ ಆತ ಅನುಭವಿಸುವ ಸ್ಥಿತಿ, ಕಂಡುಕೊಳ್ಳುವ ವಿಚಿತ್ರ ತಿರುವು ಕುತೂಹಲಕಾರಿ.

ನಾಗೇಶ ಭಂಡಾರಿ ಮಂಚದ ಮೇಲೆ ಮಲಗಿದ್ದ. ಅವನಿಗೆ ಕೊನೆಗೂ ಮಂಚ ಸಿಕ್ಕಿಬಿಟ್ಟಿತ್ತು. ನಮ ನಿಮಗೆ ಅದು ಕೇವಲ ಮಂಚ. ಆದರೆ ನಾಗೇಶನಿಗೆ? ಅದೊಂದು ಅದ್ಭುತ! ಅದೊಂದು ಪರಮ ಆಶಾಪೂರ್ತಿ ಎಂತಲೇ ಅವನಿಗದು ಮರದ ತುಂಡಲ್ಲ, 'ಸಿಂಹಾಸನ' ಎಂದರೆ ಸರಿ. ಅದಕ್ಕಾಗಿ ಆತ ಹಂಬಲಿಸಿದ್ದೆಷ್ಟು, ನೊಂದದೆಷ್ಟು! ಅದನ್ನು ಕೊನೆಗೂ ಅವನ ಮಗಳು ಒದಗಿಸಿಕೊಟ್ಟಳು. ಅವಳ ಬಗ್ಗೆ ಆತನಿಗೆ ಎಷ್ಟೊಂದು ಪ್ರೀತಿ ತುಂಬಿಕೊಂಡುಬಿಟ್ಟಿತೆಂದರೆ, ಅವಳೊಂದು ದೇವತೆಯಂತೆ ಕಾಣುತ್ತಿದ್ದಳು. ಅವಳು ನಡೆಯಲು ಹೆಜ್ಜೆ ಎತ್ತಿಟ್ಟರೆ, ಎಲ್ಲಿ ಪಾದಕ್ಕೆ ನೋವು ಆಗಿಬಿಡುತ್ತದೋ ಎಂಬ ಕಳಕಳಿ. ಅವಳ ಬಗೆಗೆ ಆತನಲ್ಲಿ ಮೂಡಿದ ಕೃತಜ್ಞತೆ ಎಷ್ಟೆಂದರೆ, ಅವಳನ್ನು ನೋಡಿದರೆ ಮಾತೇ ಹೊರಡದು. ನೋಡುತ್ತ ಇದ್ದುಬಿಡಬೇಕು, ಕಣ್ಣಲ್ಲಿ ನೀರು ಕಾಣಿಸಿಕೊಳ್ಳಬೇಕು. ಅಂಥ ಕನಸು ಪೂರೈಸಿಬಿಟ್ಟಿತ್ತು. ಆ ಕನಸಿಗೆ ಎಷ್ಟೊಂದು ವರ್ಷ ಅದನ್ನೊಮ್ಮೆ ಮಗಳೊಡನೆ ಹೇಳಿದ್ದ.

ನಾಗೇಶ ಭಂಡಾರಿಯ ಅಪ್ಪ ಲಿಂಗಪ್ಪ; ಅವ್ವ ಸಾವಿತ್ರಿ. ಅವರಿಗೆ ಸ್ವಂತ ಜಮೀನು ಎನ್ನುವದು ಇರಲಿಲ್ಲ. ಊರಲ್ಲಿ ಕೂಲಿ-ಕಂಬಳಿ ಮಾಡಿ ಹೊಟ್ಟೆ ಹೊರೆದುಕೊಳ್ಳಬೇಕಿತ್ತು. ಬಡವರಿಗೆ ಮಕ್ಕಳು ಜಾಸ್ತಿ ಎಂಬಂತೆ ಅವರಿಗೆ ನಾಲ್ಕು ಜನ ಮಕ್ಕಳು. ಅವುಗಳಲ್ಲಿ ನಾಗೇಶ ಕಿರಿಯುವ, ಹಿರಿಯ ಮೂವರು ಹೆಣ್ಣುಮಕ್ಕಳು. ಅವರಲ್ಲಿ ಹಿರಿಯಳು ಮಲೇರಿಯಾ ರೋಗದಿಂದ ಸತ್ತುಹೋಗಿದ್ದಳು. ಎರಡನೇಯುವಳಿಗೆ ಅಪ್ಪ ಇರುವಾಗಲೇ ಮದುವೆಯಾಗಿತ್ತು. ಮೂರನೆಯುವಳು ನಾಗೇಶನಿಂದ ಒಂದೂವರೆ-ಎರಡು ವರ್ಷ ಹಿರಿಯಳು. ಅವಳು ಮನೆಯಲ್ಲಿಯೇ ಇರುತ್ತಿದ್ದಳು. ಯಾಕೆಂದರೆ ಅಪ್ಪ, ಅವ್ವ ಕೆಲಸಕ್ಕೆಂದು ಹೋದಾಗ ಮನೆ ಕಾಯಬೇಕಿತ್ತು. ಮನೆಗೆ ಗೋಡೆಯಿರಲಿಲ್ಲ. ತಟ್ಟಿಗುಬ್ಬಿ ಮನೆ; ಕುನ್ನಿ ಹೊಕ್ಕಿದ್ದರೂ ಕೇಳುವವರಿರಲಿಲ್ಲ. ಆದ್ದರಿಂದ ಅವಳು ಶಾಲೆಗೆ ಹೋಗುತ್ತಿರಲಿಲ್ಲ. ಆದರೆ ನಾಗೇಶ ಶಾಲೆಗೆ ಹೋಗುತ್ತಿದ್ದ. ಒಂದು ದಿನ ಅಪ್ಪ, ಕೊನೆ ಕೊಯ್ಯಲು (ಅಡಿಕೆ ಕೊನೆಯನ್ನು 20-50 ಅಡಿ ಎತ್ತರದ ಮರ ಹತ್ತಿ, ಕೊನೆ ಕೊಯ್ದು, ಹಗ್ಗದ ಮುಖಾಂತರ ಕೆಳಗೆ ಇಳಿಸುವುದು) ಹೋದವನು ಹತ್ತಿರ ಮರ ಮುರಿದು, ಕೆಳಗೆ ಬಿದ್ದು ಸೆತ್ತ.

ಎಲ್ಲವೂ ಹೂದೇಹೂಬ ಕಣ್ಣ ಮುಂದೆ ಹಾದುಹೋಗುತ್ತದೆ ನಾಗೇಶನಿಗೆ. ಅವ್ವ ಒಡೆಯರ ಮನೆಗೆ ಕೆಲಸಕ್ಕೆ ಹೋಗುತ್ತಿದ್ದಳು. ಆ ಮೇಲಾಮೇಲೆ ಸಣ್ಣಕ್ಕನನ್ನು ತನ್ನ ಸಂಗಡ ಕೆಲಸಕ್ಕೆ ಕರೆದುಕೊಂಡು ಹೋಗುತ್ತಿದ್ದಳು. ಅವಳು ಒಡೆಯರ ಮನೆಯಲ್ಲಿ ಅಕ್ಕಿ ಹೆಕ್ಕುವುದು, ಅವ್ವ ಹಿಟ್ಟು ಬೀಸುವಾಗ ಜೋಡಿ ಕೊಡುವುದು, ಅವ್ವ ತೋಟಕ್ಕೆ ನೀರು ತೋರುತ್ತಿದ್ದರೆ ಅದು ಮುಗಿದೊಡನೆ ಬೆಲಗು ಮುರಿಯುವುದು, ತೋಟದಲ್ಲಿಯ ಸೋಗೆ ಹೆಕ್ಕುವುದು. ಅವ್ವ ವಸ್ತ್ರ ತೊಳೆಯುವಾಗ ತಾನು ಮುಸುರೆ ಪಾತ್ರೆ ತೊಳೆಯುವುದು ಇತ್ಯಾದಿ ಮಾಡುತ್ತಿದ್ದಳು. ಶಾಲೆಗೆ ರಜೆ ಇದ್ದಾಗ, ಒಮ್ಮೊಮ್ಮೆ ಅವನ ಸಂಗಡ ನಾನೂ ಹೋಗುತ್ತಿದ್ದೆ. ಆದರೆ ನನ್ನ ಕೆಲಸ ಹೆಚ್ಚಾಗಿ ಅಲ್ಲಿ ಆಟವಾಡುವುದಾಗುತ್ತಿತ್ತು.

ಆ ಶನಿವಾರ, ಶನಿವಾರವೂ, ಆದಿತ್ಯ ವಾರವೋ? ಅಲ್ಲ, ಶನಿವಾರವೇ, ಆ ದಿನವನ್ನು ಮರೆಯುವುದು ಹೇಗೆ? ಮಧ್ಯಾಹ್ನ ಶಾಲೆಗೆ ರಜೆ. ಅವ್ವ ಸಮೀಪದಲ್ಲೇ ಒಡೆಯರ ಮನೆಯ ಕೆಲಸಕ್ಕೆ ಹೋಗಿದ್ದಾಳೆಂದು ತಿಳಿದು ನಾನು ಹೋಗಿದ್ದೆ. ಅಲ್ಲಿ ಹುಡುಗರು ನನ್ನ ಜೋಡಿಯವರು ಇದ್ದಿರಲಿಲ್ಲ. ಹಾಗಾಗಿ ಹಿಂದೆ ಮುಂದೆ ಅವ್ವನ ಸಂಗಡ ಸುಳಿದಾಡುತ್ತಿದ್ದೆ. ಅವ್ವ ಹೊಳ್ಳಿ ಒರಸುತ್ತಿದ್ದಳು. ನಾನು ಕೆಳ ಹೊಳ್ಳಿಯ ಮೇಲೆ ಕುಳಿತು, ಗೋಡೆಗೆ ನೇತುಹಾಕಿದ ದೇವರ ಫೋಟೋಗಳ ಸಾಲನ್ನು ನೋಡುತ್ತಿದ್ದೆ. ವಿವಿಧ ಭಂಗಿಯಲ್ಲಿ ವಿವಿಧ ದೇವರುಗಳಿದ್ದವು. ಮೇಲೆ ಕೆಳಗೆ ರೀಪಿನ ಕಟ್ಟನ್ನು ಮಾಡಿ, ಒಂದೇ ಅಳತೆಯ ಫೋಟೋಗಳನ್ನು ಕೂಡ್ರಿಸಿದ್ದರು. ಕೆಳಗಡೆ ಕೆಲವು ಕೆಲೆಂಡರುಗಳೂ ಇದ್ದವು. ಹಾಗೆ ನೋಡುತ್ತಿದ್ದಾಗ ನನ್ನ ಕಣ್ಣಿಗೆ ಬಿದ್ದದು ಹೊಳ್ಳಿಯ ಮೇಲೆ ಇದ್ದ ಮಂಚ. ಯಾಕೋ ನನಗೆ ಆ ಮಂಚ ಬಹಳ ಆಕರ್ಷಕವಾಗಿ ಕಂಡಿತು. ನಾಸಿಕ ಪುಡಿ ಬಣ್ಣ, ಮಂಚದ ಕಾಲುಗಳನ್ನು ಚಕ್ರ ಚಕ್ರಾಕಾರವಾಗಿ ಕೊರೆದಿದ್ದರು. ಹಲಗೆಯ ಅಂಚಿನಲ್ಲಿ ಸುಳುವಿನ ಚಿತ್ರವಿತ್ತು. ನನಗೆ ಆ ಮಂಚದ ಮೇಲೆ ಮೋಹವಾಗಿಬಿಟ್ಟಿತು. ಈಗ ನೆನೆಸಿದರೆ ನಗೆ ಬರುತ್ತದೆ. ಪ್ರೀತಿಸಿದ ಹುಡುಗಿಯ ಮೇಲೆ ಉಂಟಾಗುವ ಮೋಹದಂತೆ. ಬಹುಶಃ ನಾನು ನನ್ನ ಹೆಂಡತಿಯನ್ನು ಸಹ ಅಷ್ಟೊಂದು ಮೋಹಿಸಿರಲಿಕ್ಕಿಲ್ಲ.

ಅವ್ವ ಹೆಚ್ಚಾಗಿ ಅವರ ಮನೆಗೇ ಹೋಗುತ್ತಿದ್ದಳು. ಅವಳ ಕೆಲಸ ಚೊಕ್ಕ ಎಂದು ಒಡತಿ ಅವಳನ್ನೇ ಕರೆಯುತ್ತಿದ್ದರು. ಕೆಲಸದ ಸಂಬಳವಲ್ಲದೆ ತಮಗೆ ಹೆಚ್ಚಾದ ಅನ್ನ, ಸಾರು, ಗೊಜ್ಜನ್ನು ಒಡತಿ, 'ತಕೊ ಮಗ್ವೆ' ಎಂದು ಬಡಿಸಿಕೊಡುತ್ತಿದ್ದರು. ಹೀಗಾಗಿ ಅವ್ವನೂ ಅವರ ಕೆಲಸ ಮಾಡುವುದರಲ್ಲಿ ಮುತುವರ್ಜಿ ವಹಿಸುತ್ತಿದ್ದಳು.

ನಾನು ಪ್ರತಿ ಶನಿವಾರವೂ, ಆದಿತ್ಯವಾರವೂ ಅವ್ವನ ಸಂಗಡ ಹೋಗುತ್ತಿದ್ದ. ಅವರು ಹೇಳುವ ಚಿಕ್ಕ-ಪುಟ್ಟ ಕೆಲಸವನ್ನು ಮಾಡುತ್ತಿದ್ದೆ. ಅದೇನೆ ಇದ್ದರೂ, ಅಲ್ಲಿ-ಇಲ್ಲಿ ಸುಳಿಯುತ್ತ ಮಂಚವನ್ನೇ ನೋಡುತ್ತ ನಿಲ್ಲುತ್ತಿದ್ದೆ.

ಒಂದು ಸಲ ಹೀಗಾಯಿತು. ಹೊಳ್ಳಿಯ ಮೇಲೆ ಯಾರೂ ಇದ್ದಿರಲಿಲ್ಲ. ಅವ್ವ, ಒಡ್ತಿ ಎಲ್ಲಾ ಹಿಂದುಗಡೆ ಜಗಲಿಯಲ್ಲಿ ಇದ್ದರು. ಒಡೆಯರ ಮಕ್ಕಳೂ ಇದ್ದಿರಲಿಲ್ಲ. ನಾನು ಮಂಚ ನೋಡುತ್ತಿದ್ದೆ. ಹಾಗೇ ಹೊಳ್ಳಿ ಹತ್ತಿದೆ. ಮಂಚವನ್ನೂ ಹತ್ತಿದೆ. ಒಡೆಯ ಮಲಗುವ ಹಾಗೇ, ಅಲ್ಲೇ ಇದ್ದ ತಲೆಮೊಟ್ಟೆಗೆ ತಲೆ ಆನಿಸಿ ಅಂಗಾತ ಮಲಗಿ, ಎಡಗಾಲನ್ನು ಎತ್ತರ ಮಾಡಿ ಮಡಿಸಿ, ಬಲಗಾಲನ್ನು ಅದರ ಮೇಲೆ ಹೇರಿಕೊಂಡು, ಗೋಡೆಯ ಮೇಲಿನ ಚಿತ್ರದಲ್ಲಿ ರುಕ್ಮಿಣಿ, ಸತ್ಯಭಾಮೆಯರಿಂದ ಕಾಲೊತ್ತಿಸಿಕೊಳ್ಳುತ್ತ ಮಲಗಿದ ಕೃಷ್ಣನ ಚಿತ್ರವನ್ನು ನೋಡುತ್ತ ಕನಸಿನಲ್ಲೇ ಮುಳುಗಿದ್ದೆ. ಒಡೆಯರು ಬಂದಿದ್ದನ್ನು ಕಾಣಲೇ ಇಲ್ಲ. ಅವರು ಹತ್ತಿರ ಬಂದು, 'ಬೋಸುಡಿ ಮಗ್ನೆ' ಎಂದು ಕಿವಿ ಹಿಡಿದು ತಿರುಗಿಸಿ ತಿರುಗಿಸಿ ಹಿಂಡಿದ್ದಕ್ಕೆ ಉಚ್ಚೆ ಹೊಯ್ಕಂಡದನ್ನು ನೋಡಿ, 'ಕೋಳಿ ಗೂಡಿನಲ್ಲಿರುವವರಿಗೆ ದೇವಲೋಕದ ಕನಸು, ದರಿದ್ರದವರು' ಎಂದು ನೂಕಿಬಿಟ್ಟಿದ್ದರು. ಅದರ ನಂತರ ನಾನು ಆ ಕಡೆ ಸುಳಿಯಲಿಲ್ಲ.

ಆದರೆ ಮಂಚ ಮಾತ್ರ ಮನಸ್ಸಿನಿಂದ ಮರೆಯಾಗಲೇ ಇಲ್ಲ. ಆಗಾಗ ಮಂಚದ ಕನಸು. ಶಾಲೆಯಲ್ಲಿ ನಮಗೆ ಕೂಡ್ರಲು ಹಲಗೆಗಳಿದ್ದವು ಬೆಂಚುಗಳು ಇದ್ದಿರಲಿಲ್ಲ. ಆ ಹಲಗೆಯ ಮೇಲೆ ಕುಳಿತೇ ಎಷ್ಟೋ ಸಲ ಮಂಚದ ಕನಸು ಕಾಣುತ್ತಿದ್ದೆ. ಹಲಗೆಯ ಮೇಲೆ ಹಲಗೆ ಕೂಡಿ ಎತ್ತರವಾಗುತ್ತಿತ್ತು. ನಾನು ಕೂತಿರುತ್ತಿದ್ದೆ. ಒಮ್ಮೆ ಮಾಸ್ತರರು, 'ನಾನು ಕಂಡ ಕನಸು' ಎಂದು ನಿಬಂಧ ಬರೆಯಲು ಕೊಟ್ಟಿದ್ದರು. ನಾನು ಮಲಗಿದ್ದೆ. ಕನಸಿನಲ್ಲಿ ದೇವರು ಪ್ರತ್ಯಕ್ಷವಾಗಿ, ನಿನಗೆ ಏನು ವರಬೇಕು ಕೇಳು ಎಂದ. ನಾನು, ನನಗೆ ಒಂದು ಮಂಚ ಬೇಕು ಎಂದೆ. ಒಂದು ಚೆಂದದ ಮಂಚ ಬಂತು. ಅದು ಥೇಟ್ ನಾಸಿಕಪುಡಿ ಬಣ್ಣದ್ದು. ಬದಿಯಲ್ಲಿ ಸುಳುವಿನ ಚಿತ್ರ; ಕಾಲಿಗೆ ಚಕ್ರ ಚಕ್ರಾಕಾರದ ಕೆತ್ತನೆ ಇತ್ತು. ನಾನು ಮಲಗಿಕೊಂಡೆ. ಅಂಗಾತ ಮಲಗಿ, ಕಾಲಿನ ಮೇಲೆ ಕಾಲು ಇಟ್ಟು, ಹೊರಡಲಿ ಎಂದೆ. ಅದು ಎತ್ತರ ಎತ್ತರ ಏರಿತು. ಆಕಾಶಕ್ಕೆ ಹೋಯಿತು.... ಎಂದೆಲ್ಲ ಬರೆದಿದ್ದೆ. ಅದನ್ನು ಓದಿದ ಮಾಸ್ತರರು ನಕ್ಕಿದ್ದೇ ನಕ್ಕಿದ್ದು. ತರಗತಿಯವರಿಗೆಲ್ಲ ಓದಿ ಹೇಳಿದರು. ನನಗೆ 'ಮಂಚಪ್ಪ' ಎಂದೇ ಹೆಸರಿಟ್ಟುಬಿಟ್ಟಿದ್ದರು.

ನಾಲ್ಕನೇ ತರಗತಿ ಪಾಸಾದೊಡನೇ ನಾನು ಶಾಲೆ ಬಿಡಬೇಕಾಯಿತು. ಇದು ನನಗೆ ಸಂತೋಷದ ವಿಷಯವಾಗಿರಲಿಲ್ಲ. ಮಾಸ್ತರರು ನನ್ನನ್ನು ತುಂಬಾ ಪ್ರೀತಿಸುತ್ತಿದ್ದರು. ನಾನು ಶಾಲೆಯಲ್ಲಿ ದಡ್ಡನಾಗಿರಲಿಲ್ಲ. ನಮ್ಮ ಮಾಸ್ತರರು ನಮ್ಮ ಮಾಸ್ತರರು ತಾವು ಮಾಡಿದ ಪಾಠದ ಮುಖ್ಯ ಮುದ್ದೆಯನ್ನು ಬೋರ್ಡಿನ ಮೇಲೆ ಬರೆಸಿಡುತ್ತಿದ್ದರು. ಅದು ಕೆಲ ಹೊತ್ತು ಹಾಗೇ ಇರುತ್ತಿತ್ತು. ಅವರು ಬೇರೆ ತರಗತಿಗೆ ಕಲಿಸುತ್ತಿದ್ದರು. ಅದನ್ನೆಲ್ಲ ಬರೆದುಕೊಳ್ಳಲು ನನ್ನ ಹತ್ತಿರ ಪಟ್ಟಿ ಇರುತ್ತಿರಲಿಲ್ಲ. ನಾನು ಹಾಗೆಯೇ ಓದಿ ಗಟ್ಟುಮಾಡಿಬಿಡುತ್ತಿದ್ದೆ. ಮಾಸ್ತರ ಉಜಳಣಿ ಮಾಡುವಾಗ ನಾನು ತಪ್ಪದೇ ಉತ್ತರಿಸುತ್ತಿದ್ದೆ. ಮಾಸ್ತರಿಗೆ ಬಹಳ ಮೆಚ್ಚಿಗೆಯಾಗುತ್ತಿತ್ತು.

ನಾನು ಶಾಲೆಯಲ್ಲಿ ತಂಟೆಕೋರ ವಿದ್ಯಾರ್ಥಿ ಆಗಿರಲಿಲ್ಲ. 'ಕಳಬೇಡ, ಕೊಲಬೇಡ ಹುಸಿಯ ನುಡಿಯಲು ಬೇಡ' ಎಂಬ ವಚನವನ್ನು ಮಾಸ್ತರು ಚಂದವಾಗಿ ಕಲಿಸಿದ್ದರು. ಶಾಲೆಯ ಗೋಡೆಯ ಮೇಲೆ ಬರೆದಿದ್ದರು. ನನಗೆ ದೇವರ ಮೇಲೆ ಯಾಕೊ ತುಸು ಅಸಮಾಧಾನವಿತ್ತು. ಆದರೆ ಹೇಳಲು ಹೆದರುತ್ತಿದ್ದೆ. ಆ ಕಾರಣಕ್ಕೆ ಹೆಚ್ಚಿಗೆ ಕೈಮುಗಿಯುತ್ತಿದ್ದೆ. ಅದಕ್ಕೆ ಕಾರಣ ಇಷ್ಟೆ. ದೇವರನ್ನು ಒಲಿಸಿಕೊಳ್ಳಲು ಒಡೆಯರ ಮನೆಯಲ್ಲಿ ಪಡುವ ಪಡಿಪಾಟಲನ್ನು ನೋಡಿದ್ದೆ. ಏನೋ ಮಡಿ, ಮಂತ್ರ, ನೇವೇದ್ಯ, ಭಟ್ಟರು, ಜನಿವಾರ ಇತ್ಯಾದಿ. ಇಷ್ಟೆಲ್ಲ ಇದ್ದ ಮೇಲೆ ಇದು ನಮ್ಮಂಥವರಿಗೆ ಹೇಳಿಸಿದ್ದಲ್ಲ ಎಂದೆನಿಸಿತ್ತು. ಆದರೆ ಮಾಸ್ತರು ಹೇಳಿದ ಈ ಪದ್ಯದ ಕೊನೆಗೆ, 'ಇದೇ ಕೂಡಲಸಂಗಮನ ಒಲಿಸುವ ಪರಿ' ಎಂದಿತ್ತು. ದೇವರನ್ನು ಒಲಿಸಿಕೊಳ್ಳುವ ಸುಲಭದ ದಾರಿ ನನಗೆ ಸಿಕ್ಕಿಬಿಟ್ಟಿತ್ತು! ಹೀಗಾಗಿ ನಾನು, ಬೇರೆಯವರ ಪಾಟಿ ಚೀಲದಿಂದ ಬಳಕಡ್ಡಿ, ಪೆನ್ಸಿಲು ತುಂಡು, ನವಿಲುಗರಿ, ಪತ್ರಿಕೆಯಿಂದ ಕತ್ತರಿಸಿಟ್ಟುಕೊಂಡ ಬಣ್ಣದ ಚಿತ್ರ, ಬಣ್ಣದ ಖಡು ಏನನ್ನೂ ಕಳುತ್ತಿರಲಿಲ್ಲ. ಮಳೆಗಾಲದಲ್ಲಿ ನಮ್ಮ ಕೈತೋಟದಲ್ಲಿ ಬೆಳೆದ ಸೌತೆಕಾಯಿಯನ್ನು ಕಳುತ್ತಿರಲಿಲ್ಲ. ಇದೂ ನನಗೆ ಮಾಸ್ತರರ ಪ್ರೀತಿಯನ್ನು ಹೆಚ್ಚಿಸಿತು.

ಇನ್ನೂ ಒಂದು ಕಾರಣ ಇತ್ತು. ನಾನು ನನ್ನ ಶಾಲೆಯಲ್ಲಿ ಭಾಷಣಕಾರನಾಗಿದ್ದೆ. ಶಾಲೆಯ ಕಾರ್ಯಕ್ರಮದಲ್ಲೆಲ್ಲ ನನ್ನದೊಂದು ಭಾಷಣ ಇರುತ್ತಿತ್ತು. ಮಾಸ್ತರು ಬರೆದುಕೊಡುತ್ತಿದ್ದರು. ನಾನು ಬಾಯ್ಪಾಟ ಮಾಡುತ್ತಿದ್ದೆ. ಒಂದು ಸಲ ಸಂತೆಗುಳಿ ಕೇಂದ್ರಕ್ಕೆ ಸೇರಿದ ಹತ್ತು ಶಾಲೆಗಳ ಒಂದು ಕಾರ್ಯಕ್ರಮವಿತ್ತು. ಕಿರಿಯವರ ಗುಂಪಿನವರದೇ ಬೇರೆ. ನಮ್ಮ ಶಾಲೆಯಿಂದ ನಾನೇ ಭಾಷಣಕಾರ. ನನ್ನದು ಕಿರಿಯ ಗುಂಪು. 'ವನಮಹೋತ್ಸವದ ಮಹತ್ವ' ಎಂಬುದು ವಿಷಯ. ಮರಗಳು ಆಮ್ಲಜನಕವನ್ನು ಕೊಡುವುದನ್ನು, ನೆರಳು, ಆಹಾರ ಇತ್ಯಾದಿಗಳನ್ನು ಕೊಡುವುದನ್ನು ಹೇಳಿದ ನಂತರ, ನಮ್ಮ ಜನಕ್ಕೆ ದೇಶಪ್ರೇಮವಿಲ್ಲ, ಈ ಜನಗಳು ಎಲ್ಲರ ಸಂಪತ್ತಾದ ಅರಣ್ಯವನ್ನೂ ಲೂಟಿ ಹೊಡೆಯುತ್ತಾರೆ. ನಮ್ಮಲ್ಲಿ ಅರಣ್ಯಗಳ್ಳರೇ ಹೆಚ್ಚು. ಬೇರೆಯವರಿಗೆ ಉಪದೇಶ ಮಾಡುತ್ತಾರೆ, ತಾವು ಮಾತ್ರ ಕಳ್ಳ ನಾಟು ಕಡಿಯುತ್ತಾರೆ, ಮೀನು ತಿಂದರೆ ಮಹಾಪಾಪ ಎಂಬ ಹಕ್ಕಿಯ ಹಾಗೆ ಎಂದೆಲ್ಲ ಹೇಳಿ ಚಪ್ಪಾಳೆ ಗಿಟ್ಟಿಸಿಕೊಂಡಿದ್ದೆ. ಮಾಸ್ತರು ಬರೆದುಕೊಟ್ಟಿದ್ದರು. ನನಗೆ ಬಹುಮಾನ, ಪ್ರಥಮ ಬಹುಮಾನ ಎಲ್ಲರೂ ಹೊಗಳುವವರೇ, ಅಂದಿನಿಂದಂತೂ ಮಾಸ್ತರರಿಗೆ ಬಲು ಪ್ರೀತಿ.

ಹೀಗಿದ್ದರೂ ನಾನು ಶಾಲೆ ಬಿಡಬೇಕಾಯಿತು. ನನ್ನ ಸಣ್ಣಕ್ಕ ದೊಡ್ಡವಳಾಗುತ್ತಿದ್ದಳು. ಅವಳ ಮದುವೆ ಮಾಡಬೇಕು. ಮದುವೆ ಎಂದರೆ ಎಲ್ಲವನ್ನೂ 'ಬರೀ ಕೈಲಿ ಗಾಳಾ ಹಾಕೂಕಾಗೂದಿಲ್ಲ' ಎಂದುಕೊಂಡಳು ಅವ್ವ. 'ಮಗಾ ಹಣೇಲಿ ಬರ್ದ್ದಾಂಗಾಗ್ತದೆ. ಪಡದ್ದುಂಬ್ಯಾ ದುಡದ್ದುಂಬ್ಯಾ ಅಂತೇಳಿ ನಾವು ಪಡೆದದ್ದೇ ಅಷ್ಟು' ಎಂದು ಮುಂತಾಗಿ ಹೇಳುತ್ತ, ನನ್ನ ತಲೆಯ ಮೇಲೆ, ಬೆನ್ನ ಮೇಲೆ ಕೈ ಆಡಿಸುತ್ತ ಕಣ್ಣೀರು ಹಾಕಿದಳು.

ಶಾಲೆ ಬಿಟ್ಟೆ, ಮಾಸ್ತರರು ದಾರಿಯಲ್ಲಿ ಸಿಕ್ಕಿದರೆ ಬರಲು ಒತ್ತಾಯಿಸುತ್ತಾರೆಂದು ಅವ್ವನಾಗಲೀ, ನಾನಾಗಲೀ ಅವರನ್ನು ತಪ್ಪಿಸಿಕೊಂಡೇ ತಿರುಗಾಡುತ್ತಿದ್ದೆವು. ಆದರೂ ಮಾಸ್ತರರು ಒಡೆಯರೊಡನೇ ಒತ್ತಾಯಿಸಿದ್ದರು. 'ನೋಡು ಮಗ್ವೆ, ಹುಡ್ಗನ ಶಾಲೆ ಕಳ್ಸೂದಾದರೆ ಕಳ್ಸು' ಎಂದು ಹೇಳಿಸಿದ್ದರು.


ಮುಂದುವರಿಯುವುದು

ಕೃಪೆ: ಭಾವನಾ

ಪರಿಸರ ಮತ್ತು ಬೆಳವಣಿಗೆ ವಿಶ್ವಶೃಂಗ ಸಭೆ 2002 ಪಯಣ

ರಿಯೋದಿಂದ ಜೋಹಾನ್ಸ್‌ಬರ್ಗ್‌ವರೆಗೆ ಉತ್ಸಾಹಪೂರ್ಣ ನಿರೀಕ್ಷೆಯಿಂದ ಸಿನಿಕತನದತ್ತ ಪಯಣ

ಶರತ್‌ಚಂದ್ರ



ಜೋಹಾನ್ಸ್‌ಬರ್ಗ್‌ನಲ್ಲಿ ಇತ್ತೀಚೆಗೆ ಪರಿಸರ ಮತ್ತು ಬೆಳವಣಿಗೆ ಮೇಲಿನ ವಿಶ್ವಶೃಂಗಸಭೆ ನಡೆಯಿತು. ಈ ಶೃಂಗಸಭೆ ಪರಿಸರ ತಾಳಿಕೊಳ್ಳಬಹುದಾದ ಬೆಳವಣಿಗೆಯತ್ತ ದೊಡ್ಡ ಹೆಜ್ಜೆ ಆಗುತ್ತದೆ ಎಂಬ ಉತ್ಸಾಹಪೂರ್ಣ ನಿರೀಕ್ಷೆ ಹುಟ್ಟಿಸಿತ್ತು. ಹತ್ತು ದಿನಗಳ ಕಾಲ (ಆಗಸ್ಟ್ 26 ರಿಂದ ಸೆಪ್ಟೆಂಬರ್ 4) ನಡೆದ ಈ ಶೃಂಗಸಭೆಯಲ್ಲಿ ನೂರು ದೇಶಗಳ ಪ್ರಧಾನಮಂತ್ರಿ ಅಧ್ಯಕ್ಷರುಗಳು, 15 ಸಾವಿರಕ್ಕೂ ಹೆಚ್ಚು ಪ್ರತಿನಿಧಿಗಳು ಭಾಗವಹಿಸಿದ ದೊಡ್ಡ ಪರಿಸರ ಮೇಳ ವಾಗಿತ್ತು. ಆದರೆ ಶೃಂಗಸಭೆ ಬಹಳ ನಿರಾಶಾದಾಯಕವಾಗಿ ಕೊನೆಗೊಂಡಿತು. ಪರಿಸರ ಚಳುವಳಿಗಳು ಇದನ್ನು ಮೋಸ, 'ನಾಚಿಕೆಗೇಡು' ದೈತ್ಯ ಬಹುರಾಷ್ಟ್ರೀಯ ಕಂಪನಿಗಳಿಗೆ ಮಾರಾಟ ಎಂದೆಲ್ಲಾ ಶೃಂಗಸಭೆಯ ಒಟ್ಟಾರೆ ವೈಫಲ್ಯವನ್ನು ಖಂಡಿಸಿದವು.ರೋಷದಿಂದ ಈ ಶೃಂಗಸಭೆ ವಿಫಲವಾಯಿತು. ಮನುಕುಲಕ್ಕೆ ನಿರಾಶಾದಾಯಕವಾಗಿ ಕೊನೆಗೊಂಡಿತು ಎಂಬುದು ಸಾಮಾನ್ಯ ಅಭಿಪ್ರಾಯ. ವಿಶ್ವದ ಬಡ ದೇಶಗಳಿಗೆ, ಎಲ್ಲಾ ದೇಶಗಳ ಬಡಜನರಿಗೆ ಯಾವುದೇ ಪರಿಹಾರ ಒದಗಿಸುವ ಬದಲು ಹೆಚ್ಚಿನ ನೋವುಂಟುಮಾಡಿದೆ. ದೈತ್ಯ ಬಹುರಾಷ್ಟ್ರೀಯ ಕಂಪನಿಗಳ ಬಲ ಮುರಿಯುವ ಬದಲು ಈ ಶೃಂಗಸಭೆಯನ್ನೇ ಅವು ಅಪಹರಿಸಿದವು.

ಹತ್ತು ವರ್ಷದ ಹಿಂದೆ (1992ರಲ್ಲಿ) ಬ್ರೆಜಿಲ್‌ನ ರಿಯೋಡಿ ಜನೇರಿಯೋ ವಿಶ್ವಸಂಸ್ಥೆ ಏರ್ಪಡಿಸಿದ್ದ ಪರಿಸರ ಮತ್ತು ಬೆಳವಣಿಗೆಯ ಶೃಂಗಸಭೆಯ ಮುಂದುವರಿಕೆಯಾಗಿತ್ತು ಜೋಹಾನ್ಸ್ ಬರ್ಗ್‌ನ ಶೃಂಗಸಭೆ. ಪರಿಸರ ತಾಳಿಕೊಳ್ಳಬಹುದಾದ ಬೆಳವಣಿಗೆ'ಯ ಪರಿಕಲ್ಪನೆಯನ್ನು ಇಡೀ ಜಗತ್ತಿನ ಮುಂದೆ ಇಟ್ಟ ಹೆಗ್ಗಳಿಕೆ ರಿಯೋ ಸಭೆಯದ್ದು, ಪರಿಸರ ತಾಳಿಕೊಳ್ಳಬಹುದಾದ ಬೆಳವಣಿಗೆ' ರಿಯೋದಲ್ಲಿ ಹುಟ್ಟಿದ್ದಲ್ಲ. ಈ ಪರಿಕಲ್ಪನೆಯ ಎಲ್ಲಾ ಮಗ್ಗುಲುಗಳನ್ನು ಅದರೆಲ್ಲಾ ಸಂಕೀರ್ಣತೆಯೊಂದಿಗೆ ರಿಯೋ ಸಭೆ ಶೋಧಿಸಲಿಲ್ಲ. ಆದರೂ ಜನಮನದಲ್ಲಿ ರಿಯೋ ಪರಿಸರ ತಾಳಿಕೊಳ್ಳಬಹುದುದಾದ ಬೆಳವಣಿಗೆಯೊಂದಿಗೆ ತಳುಕು ಹಾಕಿಕೊಂಡಿದೆ.

ಪರಿಸರ ತಾಳಿಕೊಳ್ಳಬಹುದಾದ ಬೆಳವಣಿಗೆ.

ಏನಿದು 'ಪರಿಸರ ತಾಳಿಕೊಳ್ಳಬಹುದಾದ ಬೆಳವಣಿಗೆ'? ಮನುಕುಲದ ಇಂದಿನ ಎಲ್ಲರ ಅಗತ್ಯಗಳನ್ನು ಪೂರೈಸಬಹುದಾದ ಅದೇ ಸಮಯದಲ್ಲಿ ಮುಂಬರುವ ಎಲ್ಲಾ ಪೀಳಿಗೆ ಎಲ್ಲರ ಅಗತ್ಯಗಳನ್ನು ಪೂರೈಸುವ ವಿಶ್ವ ಪರಿಸರದ ಸಾಮರ್ಥ್ಯವನ್ನು (ನಾಶಮಾಡದೆ) ಕಾಪಾಡಿಕೊಳ್ಳುವ ಬೆಳವಣಿಗೆ ವಿಧಾನ. ಈ ಪರಿಕಲ್ಪನೆ-70ರ 80ರ ದಶಕಗಳಲ್ಲಿ ಬಂಡವಾಳಶಾಹಿ ಬೆಳವಣಿಗೆ ತಂದ ಪರಿಸರ ಸಮಸ್ಯೆಗಳ ಮಹತ್ವದ ಬಗ್ಗೆ ಪ್ರಜ್ಞೆ, ಹೋರಾಟಗಳು, ಪರಿಸರ ಸಮಸ್ಯೆ ಬೆಳವಣಿಗೆ ಮತ್ತು ಅಸಮಾನತೆ ನಡುವಿನ ಸಂಕೀರ್ಣ ಸಂಬಂಧಗಳ ಬಗ್ಗೆ ಅಧ್ಯಯನ ಇವೆಲ್ಲದರ ಫಲ. ಉದಾಹರಣೆಗೆ ಓಜೋನ್ ಪದರದಲ್ಲಿ ರಂಧ್ರದ ಬಗ್ಗೆ ಸಮಸ್ಯೆ ಯತ್ತಿ ತೆಗೆದುಕೊಳ್ಳೋಣ. ಈ ಸಮಸ್ಯೆಗೆ ತೈಲ (ಪೆಟ್ರೋಲ್, ಡೀಸೆಲ್, ಪ್ರಾಕೃತಿಕ ಗ್ಯಾಸ್)ವನ್ನು ಉರುವಲು ಆಗಿ ಬಳಕೆ, ಏರ್ ಕಂಡೀಶನ್‌ರುಗಳು ಬಳಸುವ ರಾಸಾಯನಿಕಗಳು ಮುಖ್ಯ ಕಾರಣ ಎಂದು ರುಜುವಾತಾಗಿದೆ. ಓಜೋನ್ ಪದರದಲ್ಲಿ ರಂಧ್ರ ತೀವ್ರ ಆರೋಗ್ಯ ಸಮಸ್ಯೆಗಳು, ತೀವ್ರ ಹವಾಮಾನ ಏರುಪೇರುಗಳನ್ನು ತರಬಲ್ಲವು. ಇಡೀ ಜೀವಸಂಕಟ ಬದುಕಲು ಸಾಧ್ಯವೇ ಇಲ್ಲದಷ್ಟು ಹವಾಮಾನದಲ್ಲಿ ಬದಲಾವಣೆ ಅದರ ದೂರಗಾಮಿ ಪರಿಣಾಮ. ಇದು ವಿಶ್ವವ್ಯಾಪಿ ಸಮಸ್ಯೆ. ಆದರೆ ಇದಕ್ಕೆ ಕಾರಣ ಅಭಿವೃದ್ಧ ಪಾಶ್ಚಿಮಾತ್ಯ ದೇಶಗಳಲ್ಲಿನ ಜೀವನ ವಿಧಾನ ಕಾರು, ಏರ್‌ಕಂಡಿ ಶನ್‌ಗಳು ಇಲ್ಲದೆ ಬದುಕಲು ಸಾಧ್ಯವೇ ಇಲ್ಲ ಎನ್ನುವ ಧೋರಣೆ. ಇದಕ್ಕೆ ಪರಿಹಾರ ತೈಲೇತರ ಉರುವಲುಗಳ ಬಳಕೆಯಲ್ಲಿ ತೀವ್ರಹೆಚ್ಚಳ, ಸಾರ್ವಜನಿಕ ಸಾಗಾಣಿಕೆ ಮತ್ತು ಅಗತ್ಯ ಏರ್‌ಕಂಡೀಶನ್‌ಗಳಲ್ಲಿ ಬದಲಿ ರಾಸಾಯನಿಕಗಳ ಬಳಕೆ. ಹೀಗೆ ಪ್ರತಿಯೊಂದು ಸಮಸ್ಯೆಗೆ ಪರಿಹಾರವಿದೆ. ಆದರೆ ಇದು ದೈತ್ಯ ತೈಲ, ಕಾರು, ರಾಸಾಯನಿಕ ಕಂಪನಿಗಳ ಹಿತಾಸಕ್ತಿಗೆ ಪರಿಹಾರವಿದೆ. ಆದರೆ ಇದು ದೈತ್ಯ ತೈಲ, ಕಾಳು ರಾಸಾಯನಿಕ ಕಂಪನಿಗಳ ಹಿತಾಸಕ್ತಿಗೆ ಸೂಪರ್ ಲಾಭಕ್ಕೆ ಧಕ್ಕೆ ತರುವಂತವರು ಕಾನೂನು ರೀತ್ಯಾ ಜಾರಿಗೆ ತರುವುದನ್ನು ವಿರೋಧಿಸುತತಿದೆ. ಇದೇ ರೀತಿ ಆಹಾರ, ನೀರು, ಆರೋಗ್ಯ ಸೇವೆಯ ಬಗ್ಗಿನ ಎಲ್ಲರ ಅವಶ್ಯತೆಗಳನ್ನು ಪೂರೈಸಬೇಕು. ಅದೇ ಅದನ್ನು ಮುಂದಿನ ಪೀಳಿಗೆಗಳು ಈ ಅವಶ್ಯಕತೆಗಳನ್ನು ಸತತವಾಗಿ ಪೂರೈಸಲು ಸಾಧ್ಯವಾಗುವ ರೀತಿಯಲ್ಲಿ ಮಾಡಬೇಕು.

ಇಂತಹ ಬೆಳವಣಿಗೆ ಬಗ್ಗೆ ರಿಯೋ ನಿರ್ದಿಷ್ಟ ಗುರಿ ಇರುವ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದ್ದು ಉತ್ಸಾಹಪೂರ್ಣ ನಿರೀಕ್ಷೆಗೆ ಕಾರಣವಾಗಿತ್ತು.

ಇದರಲ್ಲಿ ಇತಿಮುಖ್ಯವಾದರೂ ಓಜೋನ್ ಪದರದಲ್ಲಿ ರಂಧ್ರದ ಸಮಸ್ಯೆ ಪರಿಹಾರಕ್ಕೆ ಮಾರಕ ಅನಿಲಗಳನ್ನು ತಡೆಗಟ್ಟುವ ಕ್ರಮಗಳ ಬಗ್ಗೆ ಆದ ಒಪ್ಪಂದ. ಇದನ್ನು ಕ್ಯೋಟೋ ಒಪ್ಪಂದ ಎಂತಲೂ ವೈವಿಧ್ಯತೆ ಕಾಪಾಡುವ ಒಪ್ಪಂದ, ಅರಣ್ಯ ನಿರ್ವಹಣೆ ಬಗ್ಗೆ ಒಪ್ಪಂದ ಇವೆಲ್ಲಾ ಸೇರಿದ್ದವು. ಇವೆಲ್ಲವೂ ಸರ್ಕಾರಗಳಿಗೆ ನಿರ್ದಿಷ್ಟ ಸಮಯದೊಳಗೆ ನಿರ್ದಿಷ್ಟ ಗುರಿಗಳನ್ನು ವಿದಿಸಿತ್ತು.

ಇವೆಲ್ಲ ಗುರಿಗಳನ್ನು ನಿರ್ಧರಿಸುವಲ್ಲಿ ರಿಯೋ ಸಭೆ ಒಂದು ನಿರ್ಧಿಷ್ಟ ಸಾಮಾನ್ಯ ನೀತಿ ಅನುಸರಿಸಿತ್ತು. ಪರಿಸರ ಮಾಲಿನ್ಯಕ್ಕೆ ಸಂಬಂಧಿಸಿದಂತೆ ಅತ್ಯಂತ ಹೆಚ್ಚಿನ ಪರಿಸರ ಮಾಲಿನ್ಯಕ್ಕೆ ಕಾರಣವಾಗುವ ದೇಶ ಅದರ ಪರಿಹಾರಕ್ಕೂ ಅದೇ ಪ್ರಮಾಣದ ಕ್ರಮ ಕೈಗೊಳ್ಳಬೇಕು ಇತರ ಸಮಸ್ಯೆಗಳ ಪರಿಹಾರದಲ್ಲೂ ಶ್ರೀಮಂತ ದೇಶಗಳು ಹೆಚ್ಚಿನ ಭಾರ ಹೊರಬೇಕು ಎಂಬುದು ಸಾಮಾನ್ಯ ಒಪ್ಪಿತ ನೀತಿಯಾಗಿತ್ತು.

ರಿಯೋದಿಂದ ಜೋಹಾನ್ಸ್‌ಬರ್ಗ್ - ಕತ್ತಲಿನತ್ತ ಪಯಣ

ಆದರೆ ರಿಯೋದಿಂದ ಇತ್ತೀಚಿನ 10 ವರ್ಷಗಳಲ್ಲಿ ರಿಯೋ ಸಭೆ ತಂದ ಉತ್ಸಾಹಪೂರ್ಣ ನಿರೀಕ್ಷೆ ಕರಗಿ ಹೋಗಿದೆ. ಕ್ಯೋಟೋ ಒಪ್ಪಂದವನ್ನು ಧೃಢ ಪಡಿಸಲು ಅಮೇರಿಕನ್ ಸರ್ಕಾರ ನಿರಾಕರಿಸಿದೆ. ಅಮೇರಿಕಾದ ನಿಕಟ ಸಹಚರರಾದ ಯುರೋಪಿಯನ್ ಒಕ್ಕೂಟ ಸೇರಿದಂತೆ ಇಡೀ ಜಗತ್ತೇ ಅಮೇರಿಕಾದ ಮೇಲೆ ಒತ್ತಡ ಹೇರಿದರೂ ತನ್ನ ಹಟಮಾರಿತನ ಮುಂದುವರೆಸಿದೆ. ಇದು ಮಾತ್ರ ರಿಯೋ ಒಪ್ಪಂದಗಳಲ್ಲಿ ಕನಸುಗಳು ಮಾತ್ರವಲ್ಲದೆ ನಿರ್ದಿಷ್ಟ ಗುರಿ ತಲುಪಲು ನಿರ್ದಿಷ್ಟ ವೇಳಾಪಟ್ಟಿ ಇದ್ದಲ್ಲೆಲ್ಲಾ ಅವನ್ನು ಶ್ರೀಮಂತ ದೇಶಗಳು ನಿರಾಕರಿಸಿವೆ. ಆ ಬಗ್ಗೆ ವಿಳಂಬ ನೀತಿ ಅನುಸರಿಸುತ್ತಿವೆ. ಮುಖ್ಯವಾಗಿ ಎರಡು ಧೋರಣೆಗಳನ್ನು ಅನುಸರಿಸಿವೆ. ಒಂದನೆಯದು ಇಂತಹ ಗುರಿಗಳು ದೇಶದ ಜನಸಂಖ್ಯೆಗೆ ಅನುಗುಣವಾಗಿ ಇರಬೇಕು. ಬಡದೇಶಗಳ ಜನಸಂಖ್ಯಾ ಹೆಚ್ಚಳ ಜಗತ್ತಿನ ಸೀಮಿತ ಸಂಪನ್ಮೂಲಗಳ ಮೇಲೆ ಒತ್ತಡ ಹೇರುತ್ತಿದೆ. ಶ್ರೀಮಂತ ದೇಶಗಳ ಜೀವನ ಶೈಲಿ ಇಂತಹ ಒತ್ತಡ ಹೇರುತ್ತಿವೆ ಎಂಬ ಸತ್ಯವನ್ನು ನಿರಾಕರಿಸುತ್ತಿವೆ. ಒಬ್ಬ ತಲಾ ಅಮೇರಿಕನ್ 19.0 ಮಾರಕ ಅನಿಲಗಳು ಉತ್ಪಾದನೆಯಲ್ಲಿ (ಓಜೋನ್ ಪದರದಲ್ಲಿ ರಂಧ್ರಕ್ಕೆ ಕಾರಣವಾಗುವ) 30 ಪಾಕಿಸ್ತಾನಿ-ಭಾರತೀಯರು, 107 ಬಾಂಗ್ಲಾದೇಶಿಗಳು, ಭೂತಾನ್ 134, ನೇಪಾಳಿ 269 ಇದು ಜಗಜ್ಜಾಹೀರಾಗಿರುವ ಸತ್ಯ. ಆದರೆ ಇದನ್ನು ಒಪ್ಪಲು ಶ್ರೀಮಂತ ದೇಶಗಳು ತಯಾರಿಲ್ಲ. ಎರಡನೆಯದಾಗಿ ಕೆಲವು ಸಮಸ್ಯೆಗಳನ್ನೆ ನಿರಾಕರಿಸುವ ಧೋರಣೆ ಅನುಸರಿಸಿವೆ. ಉದಾಹರಣೆಗೆ ಓಜೋನ್ ರಂಧ್ರಕ್ಕೆ ಮಾರಕ ಅನಿಲಗಳ ಉತ್ಪಾದನೆ ಕಾರಣವೇ ಎಂಬುದನ್ನು ಪರಿಶೀಲಿಸಲು ಅಧ್ಯಕ್ಷ ಬುಶ್ ಒಂದು ಕಮೀಶನ್ ನೇಮಿಸಿದರು. ಆದರೆ ಆತನ ದುರದೃಷ್ಟಕ್ಕೆ ಆ ಕಮಿಶನ್, ಇದು ನಿಜ ಎಂಬುದಕ್ಕೆ ಸ್ಪಷ್ಟ ವೈಜ್ಞಾನಿಕ ಪುರಾವೆಗಳು.ಇವೆ ಎಂದು ವರದಿ ಮಾಡಿತು.

ಶ್ರೀಮಂತ ದೇಶಗಳು ಮಾತ್ರವಲ್ಲ, ಬಡ ದೇಶಗಳ ಸರ್ಕಾರಗಳು ಅವುಗಳ ಅಳವಿನಲ್ಲಿರುವ ಸಮಸ್ಯೆ ಪರಿಹಾರ ಕ್ರಮಗಳನ್ನು ಪ್ರಾಯೋಗಿಕತೆಯಿಂದ ಜಾರಿ ಮಾಡಲು ಪ್ರಯತ್ನಿಸಿಲ್ಲ. ಉದಾಹರಣೆಗೆ ಆಹಾರ, ನೀರು ಜೀವ ವೈವಿಧ್ಯತೆ, ಆರೋಗ್ಯ, ಅರಣ್ಯ ನಿರ್ವಹಣೆ ಬಗೆಗಿನ ಹಲವು ಕ್ರಿಯೆಗಳು ಕನಸುಗಳಾಗಿಯೇ ಉಳಿದಿವೆ.

ಬೆಳವಣಿಗೆಯ ಮೇಲೆ ವ್ಯಾಪಾರದ ಮೇಲುಗೈ

ಇದಕ್ಕೆ ಮುಖ್ಯ ಕಾರಣ ಅದೇ ಅವಧಿಯಲ್ಲಿ ಬೆಳೆದ ಜಾಗತೀಕರಣದ ಆರ್ಥಿಕ ನೀತಿ. ರೀಯೋಸಭೆ ನಿರ್ದೇಶಿಸಿದ 'ಪರಿಸರ ತಾಳಿಕೊಳ್ಳುವ ಬೆಳವಣಿಗೆ' ನೀತಿಗೂ ಜಾಗತೀಕರಣದ ನೀತಿಗೂ ತೀವ್ರ ವೈರುಧ್ಯಗಳಿವೆ. ಜಾಗತೀಕರಣದ ನೀತಿಯಲ್ಲಿ ಬಹುರಾಷ್ಟ್ರೀಯ ಕಂಪನಿಗಳ ಲಾಭದ ಬೆಳವಣಿಗೆ ಬಿಟ್ಟರೆ ಬೇರೆ ಯಾವುದೇ ಉದ್ದೇಶಗಳಿಗೂ ಜಾಗವಿಲ್ಲ. ಅದು ಮಾತ್ರವಲ್ಲ ಜಾಗತೀಕರಣ ನೀತಿ ವಿವಿಧ ದೇಶಗಳ ಸರ್ಕಾರಗಳ ಸಾರ್ವಭೌಮತ್ವಕ್ಕೆ ತೀವ್ರ ಧಕ್ಕೆ ತಂದಿದ್ದು, ಅವು ಯಾವುದನ್ನೂ ಜಾರಿ ಮಾಡುವ ಸ್ಥಿತಿಯಲಿಲ್ಲ. ಸರ್ಕಾರಗಳು ನಿಯಂತ್ರಿಸುವ ಸಂಪನ್ಮೂಲಗಳಲ್ಲಿ ತೀವ್ರಕಡಿತವಾಗಿದೆ. ಹೆಚ್ಚೆಚ್ಚಾಗಿ ಸಂಪನ್ಮೂಲಗಳನ್ನೂ ಪ್ರಮುಖ ನೀತಿ ನಿರ್ದೇಶನಗಳನ್ನು ಖಾಸಗಿ ಕಂಪನಿಗಳೇ ನಿಯಂತ್ರಿಸುತ್ತವೆ. ಸ್ವಾಭಾವಿಕವಾಗಿಯೇ ತಮ್ಮದೇ ಹಿತಾಸಕ್ತಿಗಳಿಗಾಗಿ. ರಿಯೋ ಒಪ್ಪಂದಗಳಿಗೆ ಈ ಕಂಪನಿಗಳು ಸಹಿ ಹಾಕಿಲ್ಲತಾನೆ! ಆದ್ದರಿಂದ ಕಳೆದ ಹತ್ತು ವರ್ಷದಲ್ಲಿಯೂ ಮುಂದಿಟ್ಟ ಬೆಳವಣಿಗೆ ವಿಧಾನ ಜಾರಿಯಲ್ಲಿ ಗಮನಾರ್ಹ ಪ್ರಗತಿ ಆಗಿಲ್ಲ ಮಾತ್ರವಲ್ಲ. ಗಮನಾರ್ಹ ಹಿನ್ನಡೆ ಆಗಿದೆ. ಇದು ಮಾರಕ ಅನಿಲಗಳ ಉತ್ಪಾದನೆ, ನೀರು- ಗಾಳಿಗಳ ಮಾಲಿನ್ಯದ ಮಟ್ಟ, ಆಹಾರ - ಆರೋಗ್ಯ ಸೇವೆಗಳ ಲಭ್ಯತೆ, ಜೀವ ವೈವಿಧ್ಯತೆಯ ಕಾಪಾಡುವಿಕೆ ಇವೆಲ್ಲದರ ಮಟ್ಟಿಗೂ ನಿಜ.

ಇದರಿಂದಾಗಿ ಜಗತ್ತಿನ್ನೇ ಆಳುತ್ತಿರುವ ಈ ಬಹುರಾಷ್ಟ್ರೀಯ ಕಂಪನಿಗಳ ಯಮಬಲದ ಮೇಲೆ ಕಡಿವಾಣ ಹಾಕುವ ನಿರ್ದೇಶನಗಳ ಬಗೆಗೇನೇ ಪ್ರಸ್ತಾವಗಳು ಆ ಬಗ್ಗೆ ಯಾವುದೇ ನಿರ್ಧಾರ ಹೊಮ್ಮಲಿಲ್ಲ ಮಾತ್ರವಲ್ಲ, ಈ ವಿಷಯ ಗಂಭೀರ ಚರ್ಚೆಗೂ ಒಳಗಾಗಲಿಲ್ಲ. ಬದಲಾಗಿ ಶೃಂಗಸಭೆ ಅಂಗೀಕರಿಸಿದ ನಿರ್ಣಯದಲ್ಲಿ ಕಂಪನಿಗಳು ಸಂಪನ್ಮೂಲಗಳ ನಿಯಂತ್ರಣದಲ್ಲಿ ಮತ್ತು ನೀತಿ ನಿರ್ದೇಶನದಲ್ಲಿ ಮಹತ್ವದ ಪಾತ್ರ ವಹಿಸುತ್ತಿರುವುದರಿಂದ ಅವುಗಳನ್ನು ಶೃಂಗಸಭೆಗೆ ವಿಶೇಷ ಅಹ್ವಾನಿತರಾಗಿ ಕರೆಯಲಾಗಿತ್ತು. ಈ ಕಂಪನಿಗಳ ಪ್ರತಿನಿಧಿಗಳು ಎಲ್ಲಾ ಮಹತ್ವದ ನಿರ್ಣಯಗಳ (ಅಥವಾ ನಿರ್ಣಯಗಳನ್ನು ಕೆಡವುದರ) ಹಿಂದೆ ನಿರ್ಣಾಯಕ ಪಾತ್ರ ವಹಿಸಿದವು. ಮಾತ್ರವಲ್ಲದೆ ತಮ್ಮದೇ ವಾಣಿಜ್ಯ ಸಂಬಂಧಿ ಅಜೆಂಡಾ ಮುಂದೆ ಮಾಡುವುದರಲ್ಲಿ ಯಶಸ್ವಿಯಾದವು. ವಿಶ್ವಸಂಸ್ಥೆ ಮಹಾಕಾರ್ಯದರ್ಶಿಗಳಲ್ಲಿ ಈ ಕಂಪನಿಗಳನ್ನು ಆಹ್ವಾನಿಸಿದ್ದು, ವೀರಪ್ಪನ್‌ನನ್ನು ಅರಣ್ಯ ಮಂತ್ರಿ ಮನವಿಯಷ್ಟೆ ಹಾಸ್ಯಾಸ್ಪದವಾಗಿತ್ತು.

ಒಟ್ಟಾರೆಯಾಗಿ ಶೃಂಗಸಭೆಯಲ್ಲಿ ಏನೂ ಪ್ರಗತಿ ಆಗಲಿಲ್ಲವೆಂದಲ್ಲ. ಹಲವು ಒಪ್ಪಂದಗಳು, ಒಳ್ಳೆಯ ಮಾತುಗಳ, ಕನಸುಗಳು, ಅಲ್ಲೊಂದು ಇಲ್ಲೊಂದು ನಿರ್ದಿಷ್ಟ ಗುರಿಗಳನ್ನು ಒಪ್ಪಲಾಯಿತು. ಆದರೆ ಕಂಪನಿಗಳ ಯಮಬಲ, ಶ್ರೀಮಂತ ದೇಶಗಳ ಬೇಜವಾಬ್ದಾರಿಯಿಂದ ಇದು ಜಾರಿಯಾಗುವ ಲಕ್ಷಣಗಳೂ ಸುತಾರಾಂ ಇಲ್ಲ.

ಜೋಹಾನ್ಸ್‌ಬರ್ಗ್ ಶೃಂಗಸಭೆಗೆ ಅಮೇರಿಕಾದ ಅಧ್ಯಕ್ಷ ಬುಶ್ ಹೋಗದಿದ್ದ ದೊಡ್ಡ ಸುದ್ದಿಯಾಯಿತು. ಅಮೇರಿಕನ್ ಸರ್ಕಾರದ ಪರವಾಗಿ ವಿದೇಶಾಂಗ ಕಾರ್ಯದರ್ಶಿ ಕೊಲಿನ್ ಪೊವೆಲ್ ಹಾಜರಾಗಿದ್ದರು. ಅಮೇರಿಕಾದ ಮತ್ತು ಬುಶ್ ಉದ್ದಟತನದ ವಿರುದ್ಧ ಶೃಂಗಸಭೆಯಲ್ಲಿ ಆಕ್ರೋಶ ವಿತ್ತೆಂದರೆ ಫೈನೆಲ್ ಉದ್ಧಟತನದ ಮಾತುಗಳನ್ನು ಪ್ರತಿಭಟಿಸಿ ಹಲವು ಪ್ರತಿನಿಧಿಗಳು ಹೊರನಡೆದರು. ಇತರರು ಆತನನ್ನು ವಿರುದ್ಧ ಘೋಷಣೆ ಕೂಗಿದರು.

ಬುಶ್‌ನ ಗೈರುಹಾಜರಿ ಪ್ರತಿಭಟಿಸಿ ಪ್ರಮುಖ ಪರಿಸರ ಗುಂಪುಗಳು ಒಂದು ಖಾಲಿ ಕುರ್ಚಿ (ಜಾರ್ಜ್ ಬುಶ್ ಬೋರ್ಡಿನೊಂದಿಗೆ) ಇಟ್ಟಿದ್ದರು. ಆದರೆ ಅತ್ಯಂತ ಪರಿಣಾಮಕಾರಿ ಪ್ರತಿಭಟನೆ ಸ್ಥಳೀಯ ಪರಿಸರವಾದಿ ಗುಂಪೊಂದು ಹಮ್ಮಿಕೊಂಡಿತ್ತು. ಬುಶ್ ಗೈರುಹಾಜರಿಯನ್ನು ಹಳಿದು ಬರೆದಿರುವ ಕವನಗಳ ಸ್ಪರ್ಧೆಯನ್ನು, ಅದು ಏರ್ಪಡಿಸಿತ್ತು. ಇದರಲ್ಲಿ ಪಾಲ್ಗೊಳ್ಳಲು ಭಾರಿ ನೂಕುನುಗ್ಗಲಿತ್ತಂತೆ.

ಭೂಮಿಯ ವಿಪ್ರರು (friends earith) ಎಂಬ ವಿಶ್ವವ್ಯಾಪಿ ಪರಿಸರವಾದಿ ಗುಂಪು ಸಂಘಟಿತ ಸಮಾಜ ಶಿಲ್ಪ. ಇದರಲ್ಲಿ ದಕ್ಷಿಣ ಆಫ್ರಿಕಾದ ದಟ್ಟದರಿಂದ್ರ ಆರು ಸಾವಿರ ಮೂರ್ತಿಗಳ ನಡುವೆ ಆರು. ಮೋಟರ್ ಎತ್ತರದ ರೋಬೋಟ್ ಇಡಲಾಗಿತ್ತು. ಈ ರೋಬೋಟ್ ದೈತ್ಯ ಕಂಪನಿಗಳನ್ನು ಪ್ರತಿನಿಧಿಸುತ್ತಿತ್ತು. ದೈತ್ಯ ಕಂಪನಿಗಳನ್ನು ಆಳಲು ಬಿಡಬೇಡಿ ಎಂದು ದೊಡ್ಡ ಬ್ಯಾನರ್ ಹಿನ್ನೆಲೆಯಲ್ಲಿದೆ.


ಜೋಹಾನ್ಸ್ ಬರ್ಗ್‌ನ ಉಬುಂತು ಗ್ರಾಮದಲ್ಲಿ ನಡೆದ ಶೃಂಗಸಮ್ಮೇಳನದ ಉದ್ಘಾಟನಾ ಸಮಾರಂಭದಲ್ಲಿ ನಿರ್ಮಿಸಿದ್ದ ಪೃಥ್ವಿಯ ಬೃಹತ್ ಪ್ರತಿಕೃತಿ ಸಮ್ಮುಖದಲ್ಲಿ ಮಕ್ಕಳು ಹಾಡು ಹೇಳುತ್ತಿರುವುದು

ಸಿನಿಮಾ

ಸಿನಿಕತನ-ಪಲಾಯನವಾದ ಸಾರುವ 'ಧ್ರುವ'

ವಿದ್ಯಾರ್ಥಿಗಳು ರಾಜಕೀಯದಿಂದ ದೂರವಿರಬೇಕು ಎಂಬುದು ಅನೇಕ ದಶಕಗಳಿಂದ ಭೋದಿಸುತ್ತಾ ಬಂದ ಹಳಸಲು ಉಪದೇಶ. ಆಳುವವರ ಅಧಿಕಾರದ ಗದ್ದುಗೆಯನ್ನು ಕಾಪಾಡುತ್ತಾ, ಕೊಳೆತು ನಾರುವ ಸುಲಿಗೆಖೋರ ವ್ಯವಸ್ಥೆಯನ್ನೇ ಸಮರ್ಥಿಸುವ ಈ ದುಬೋಧೆ, ಈ ಸಿನಿಮಾದಲ್ಲಿಯೂ ಬಡಬಡಿಸಿದೆ. ಅತೀ ನಾಜೂಕಿನಿಂದಲೇ ಹಾದಿತಪ್ಪಿಸುವ, ಜನಪ್ರತಿನಿಧಿಗಳು, ಪ್ರಜಾಪ್ರಭುತ್ವವನ್ನೇ ಬುಡಮೇಲೆ ಮಾಡಿ ಸರ್ವಾಧಿಕಾರ ಹೇರುವ ಅಪಾಯಕಾರಿ ಸಿದ್ಧಾಂತ ಅಂತರ್ಗತವಾಗಿರುವುದನ್ನು ಬಯಲಿಗೆಳೆದಿದ್ದಾರೆ ರಾಜ್ಯದ ವಿದ್ಯಾರ್ಥಿ ನಾಯಕ ಆರ್.ರಾಮಕೃಷ್ಣರವರು.

ಗಂಭಿರ ಮುಖಭಾವದ, ಇರಿಯುವ ಕಂಗಳ, ತಲೆ ಎತ್ತಿ ಮಲಗಿರುವ ಸಿಂಹವೊಂದು "No potitics pleser ಎಂದು ಸಾರುವ ಪೋಸ್ಟರ್‌ಗಳನ್ನು ಕಛೇರಿ, ಮನೆ, ಮುಂತಾದ ಕಡೆ ನೋಡುವೆವಲ್ಲವೇ. ಇದೇ ಸಂದೇಶವನ್ನು ಹೇಳಲು 3 ಗಂಟೆಯ ಒಂದು ಸಿನಿಮಾ ಮಾಡಿದ್ದಾರೆ ನಿರ್ದೇಶಕ ಎಂ.ಎಸ್. ರಮೇಶ್. ರಾಜಕೀಯ ಎಂದರೆ ರಾಜಕಾರಣಿಗಳ ಮೋಸ, ವಂಚನೆ, ಭ್ರಷ್ಟಾಚಾರ, ಅಪರಾಧಗಳು ಹೀಗಾಗಿ ಇಂತಹ ಅಧಿಕಾರಸ್ಥ ರಾಜಕಾರಣಿಗಳ ಸಮೂಹವನ್ನು ಗುಂಡಿಕ್ಕಿ 'ಢಮಾರ್, ಢಮಾರ್' ಎಂದು ಸಾಮೂಹಿಕ ಕಗ್ಗೊಲೆ ಮಾಡಿದರೂ ಏನೂ ತಪ್ಪಿಲ್ಲ. (ಮತ್ತು ಅದಕ್ಕೆ ಏನೂ ಶಿಕ್ಷೆಯೂ ಇಲ್ಲ) ಮತ್ತು ಈ ಕೆಲಸ ಮಾಡಿ ಬರುವ ಹೀರೋ ಮತ್ತೆ ಕಾಲೇಜಿಗೆ ಬಂದು ಹಾಯಾಗಿ 'ಡ್ಯೂಯಟ್' ಹಾಡಬಹುದು.

ರಾಜಕೀಯ ಇಷ್ಟು ಕೆಟ್ಟದಾಗಿರುವ ಕಾರಣ ವಿದ್ಯಾರ್ಥಿಗಳಿಗೆ ರಾಜಕೀಯದ ಸೊಂಕು ಸೋಕಲೇಬಾರದು. ಕಾಲೇಜಿಗೆ ಒಂದೊಮ್ಮೆ 'ರಾಜಕೀಯ' ಪ್ರವೇಶಿಸಿದರೆ ಅದನ್ನು 'ಅಟ್ಟಾಡಿಸಿ ಕೊಂಡು ಬಡಿದು' ಹೊರಗೆ ಓಡಿಸಬೇಕು. ಜನರಿಗೆ ವಿಶೇಷವಾಗಿ ವಿದ್ಯಾರ್ಥಿ ಸಮುದಾಯಕ್ಕೆ ಈ ಚಿತ್ರ ಕೊಡುತ್ತಿರುವ ಸಂದೇಶ ಇದು.

'ವಿದ್ಯಾರ್ಥಿಗಳು ಕಾಲೇಜಿನ ಬರುವುದು ಓದುವುದಕ್ಕೆ" "ವಿದ್ಯಾರ್ಥಿಗಳು ಕಾಲೇಜು ಆಡಳಿತ ಮಂಡಳಿಗಳ ನಡುವೆ ವಿದ್ಯಾರ್ಥಿ ಮುಖಂಡರು ಎಂಬ ಏಜೆಂಟರು ಏಕೆ' ಎನ್ನುವ ಮನೋಭಾವದ ದ್ರುವ (ದರ್ಶನ್) 'ಸಭ್ಯ' ಆದರೆ ದಿಟ್ಟತನದ ವಿದ್ಯಾರ್ಥಿ. ರಾಜಕೀಯ ಪಕ್ಷಗಳು ತನ್ನ ದುಷ್ಟ ರಾಜಕೀಯ ಆಟಗಳಿಗೆ ಕಾಲೇಜು ವಿದ್ಯಾರ್ಥಿ ಸಂಘಗಳನ್ನು ಒಂದು ವೇದಿಕೆ ಮಾಡಿಕೊಂಡಿರುವುದರಿಂದ ಕಾಲೇಜುಗಳಲ್ಲಿ ಚುನಾವಣೆಯನ್ನು ವಿಶ್ವ ವಿದ್ಯಾಲಯ ರದ್ದು ಪಡಿಸುತ್ತದೆ. ಈ ನಿರ್ಧಾರದಿಂದ ಕೆರಳಿದ ಆಡಳಿತ ಪಕ್ಷ ಸರ್ಕಾರದ ಅಧಿಕಾರಸ್ಥರು ವಿದ್ಯಾರ್ಥಿ ಚಳುವಳಿ ಹೆಸರಿನ ದೊಂಬಿ, ಗಲಭೆ, ಹಿಂಸಾಚಾರ ನಡೆಸುತ್ತಾರೆ. (ಆಳುವ ಪಕ್ಷ ಸರ್ಕಾರಗಳ ಸಮ್ಮತಿ ಇಲ್ಲದೆ, ವಿಶ್ವ ವಿದ್ಯಾಲಯಗಳಿಗೆ, ಚುನಾವಣೆ ರದ್ದು ಪಡಿಸುವಷ್ಟು ಸ್ವಾತಂತ್ರ್ಯವೂ ಇಲ್ಲ ಎಂಬುದು ಪಾಪ ನಿರ್ದೇಶಕರಿಗೆ ಅರಿವಿಲ್ಲ ವೇನೋ?) ಕ್ರಿಮಿನಲ್ ಗೂಂಡಾಗಳು ನಡೆಸುವ ಈ ಗಲಭೆಯಲ್ಲಿ ತೊಂದರೆಗೊಳಗಾದ ವಿದ್ಯಾರ್ಥಿಗಳು ಮತ್ತು ಕುಟುಂಬದವರಿಗೆ ಪರಿಹಾರ ನೀಡಬೇಕೆಂದು ವಿದ್ಯಾರ್ಥಿಗಳು ಪ್ರತಿಭಟನೆಗೆ ಇಳಿಯುತ್ತಾರೆ. ಈ 'ರಾಜಕೀಯ ರಹಿತ ಸಂಘರಹಿತ' ಹೋರಾಟಕ್ಕೆ ಧ್ರುವನೇ ನಾಯಕನಾಗುತ್ತಾನೆ.

ಧ್ರುವನ ಜನಪ್ರಿಯತೆ - ವಿದ್ಯಾರ್ಥಿ ಚಳುವಳಿಯ ತೀವ್ರತೆ ಮನಗಂಡ ಆಡಳಿತ ಪಕ್ಷವು ತಂತ್ರ ಹೂಡಿ ದ್ರುವವನ್ನು ತನ್ನ ಪಕ್ಷಕ್ಕೆ ಸೆಳೆದುಕೊಳ್ಳುತ್ತದೆ. ಆಡಳಿತ, ಪಕ್ಷದಲ್ಲಿದ್ದೂ ಸಹ ಧ್ರುವ ವಿದ್ಯಾರ್ಥಿಗಳ ಹಾಗೂ ಜನರ ಪರವಾದ ನಿಲುವನ್ನೇ ತಳೆಯುತ್ತಾನೆ. ಧ್ರುವನ ಈ ನಿಷ್ಠೆ ಅಪಥನಾವಾದದ್ದರಿಂದ ಧ್ರುವನನ್ನು ಬ್ಲಾಕ್ ಮೇಲ್ ಮಾಡುವ ತಂತ್ರವೊಂದು ಸಿದ್ಧವಾಗುತ್ತದೆ.

ಭೂಗತ ಲೋಕದ ಪಾತಕಿಯೊಬ್ಬನ ಜೊತೆ ಧ್ರುವನ ತಂಗಿಯ ಮದುವೆ ನಿಗದಿಗೊಳಿಸಲಾಗುತ್ತದೆ. ವಿಷಯ ತಿಳಿದ ಧ್ರುವ ಮತ್ತು ಈ ಪಾತಕಿಗೂ ಮಾರಾಮಾರಿ ನಡೆಯುವಾಗ ಕೊಲೆ ಪಾತಕ 'ಹತನಾಗುತ್ತಾನೆ'. ಕೊಲೆ ಅಪಾದನೆ ಮೇಲೆ ಧ್ರುವ ಜೀವಾವಧಿ ಶಿಕ್ಷೆಗೆ ಗುರಿಯಾಗಿ ಜೈಲು ಸೇರುತ್ತಾನೆ.

ಆರ್.ರಾಮಕೃಷ್ಣ

ರಾಜಕೀಯದ ಉಗ್ರ ವಿರೋಧಿ, ಕಠೋರ ಪೋಲಿಸ್ ಅಧಿಕಾರಿ ಐ.ಪಿ.ಎಸ್. ಪ್ರತಾಪ್ ಈ ಹಂತದಲ್ಲಿ ಧ್ರುವನ ನೆರವಿಗೆ ನಿಲ್ಲುತ್ತಾನೆ. ಧ್ರುವನ ಪ್ರೇಯಸಿಯ ಪ್ರೇಮ ಪ್ರಲಾಪವನ್ನು ಕೋರ್ಟ್‌ನಲ್ಲಿ ಮಂಡಿಸಿ, ಆಕೆಯೊಂದಿಗೆ ಮದುವೆಯಾಗಲು ಕೋರ್ಟ್ ಅನುಮತಿ ಪಡೆದು ಧ್ರುವನನ್ನು ಜೈಲಿನಿಂದ ಹೊರತರಲಾಗುತ್ತದೆ. ಈ ಸಂದರ್ಭ ಬಳಸಿ ಧ್ರುವ ನಿರಪರಾಧಿ ಎಂದು ಐ.ಪಿ.ಎಸ್. ಅಧಿಕಾರಿ ನಿರೂಪಿಸಿ, ಧ್ರುವನಿಗೆ ಶಿಕ್ಷೆ ರದ್ದಾಗುತ್ತದೆ.

ನಂತರ ದುಷ್ಟ ಸಂಹಾರ ಭಲೇ ರಾಜಕಾರಣ ! ಜೈಲಿನಿಂದ ಹೊರ ಬಂದ ಧ್ರುವ ಕ್ರಿಮಿನಲ್ ರಾಜಕಾರಣಿಗಳ ಹಿಂಡಿಗೆ ಏಕಾಂಗಿ ಯಾಗಿ ಲಗ್ಗೆ ಇಟ್ಟು ಸಾಮೂಹಿಕ ಕಗ್ಗೊಲೆ ನಡೆಸಿ ತನ್ನ 'ರಾಜಕೀಯ' ಸಂಬಂಧಗಳನ್ನು ಕಳೆದುಕೊಂಡು ಹೊರ ಬರುತ್ತಾನೆ. ಇದು ಸಿನಿಮಾದ ಕತೆ. ರಾಜಕೀಯವನ್ನು ಭ್ರಷ್ಟ ಮೋಸ, ಅನ್ಯಾಯ ಎಂದು ಸಾರಾಸಗಟಾಗಿ ನಿರ್ಧರಿಸುವ ಸಿನಿಮಾ ಈ ಅನ್ಯಾಯ, ಭ್ರಷ್ಟತೆಯ ಬೇರುಗಳು ಎಲ್ಲಿವೆ ಎಂದು ಗುರುತಿಸುವ ಯಾವ ಗಂಭೀರ ಯತ್ನವನ್ನು ಮಾಡುವುದಿಲ್ಲ. ಅಂಥ ಉದ್ದೇಶವೂ ಚಿತ್ರಕ್ಕೆ ಇದ್ದಂತಿಲ್ಲ. ರಾಜಕೀಯ ವ್ಯವಸ್ಥೆಯ ಒಂದು ಮುಖವಾದ 'ರಾಜಕೀಯ ಅಪರಾಧೀಕರಣವನ್ನು ಮಾತ್ರ, ಬಹುತೇಕ ಇದೇ ರಾಜಕಾರಣ ಎಂದು ಬಿಂಬಿಸಲಾಗಿದೆ.

ಈ ವಂಚಕ ರಾಜಕೀಯ ವ್ಯವಸ್ಥೆಯನ್ನು ಬುಡ ಸಮೇತ ಕಿತ್ತುಬಿಸಾಡುವುದಾಗಿ ಈ ನಡುವೆ ಗುಡುಗುತ್ತಾನೆ ನಾಯಕ. ಆದರೆ ಈ ವ್ಯವಸ್ಥೆಯ ಬೇರುಗಳು ಕೇವಲ ಯುವತಿಯರ ಮೇಲೆ ಅತ್ಯಾಚಾರ ಮಾಡುವ ಗೂಂಡಾಗಳು, ಸಿಕ್ಕಷ್ಟು ಲಂಚ ಮುಕ್ಕುವ ಕೆಲವು ರಾಜಕಾರಣಿಗಳು ಮಾತ್ರವಲ್ಲ, ಲಕ್ಷಾಂತರ, ಕೋಟ್ಯಾಂತರ ರೈತರ-ಕಾರ್ಮಿಕರ ದುಡಿಮೆಯ ಫಲವನ್ನು ಸಂಪೂರ್ಣ ಅವರಿಗೆ ದಕ್ಕದಂತೆ ವಂಚಿಸಿ ಕಿತ್ತುಕೊಳ್ಳುವ, ಜನಸಾಮಾನ್ಯನಿಂದ ತೆರಿಗೆ



ಸುಲಿಯುವ, ಮಹಿಳೆಯರನ್ನು ತುಳಿಯುವ ಸಾಮಾಜಿಕ, ಆರ್ಥಿಕ ವ್ಯವಸ್ಥೆಯಲ್ಲಿ ಈ ಬೇರುಗಳು ತಳವೂರಿವೆ ಎಂದು ಯೋಚಿಸುವ ಗೊಡವೆಗೆ ಹೋಗುವುದಿಲ್ಲ.

ಅರ್ಥಹೀನ ತರ್ಕಗಳು

ವಂಚಕ ರಾಜಕೀಯ ವ್ಯವಸ್ಥೆಯನ್ನು 'ಪುಡಿಗುಟ್ಟುವುದು' ಎಂದರೆ, ನಾಯಕ ಗೂಂಡಾಗಳ ಜೊತೆ ಬಡಿದಾಡುವಾಗ, ಮೊದಲೇ ಮುರಿದು ಜೋಡಿಸಿಟ್ಟ ಮರದ ಟೇಬಲ್, ಕುರ್ಚಿ, ಮಂಚಗಳನ್ನು ಪುಡಿಗುಟ್ಟಿದಷ್ಟೇ ಸರಳ ಎಂದು ಭಾವಿಸಿದಂತಿದೆ. ಏಕೆಂದರೆ ಇವನು ಕೊಲ್ಲಬೇಕಾದ ನೀಚ, ಭ್ರಷ್ಟ ಕ್ರಿಮಿನಲ್ ರಾಜಕಾರಣಿಗಳೆಲ್ಲ ಸರಾಸಗಟಾಗಿ ಒಟ್ಟಿಗೆ ಸಿಕ್ಕಿ ಈತನ ಒಂದೇ ರಿವಾಲ್ವರ್‌ನಿಂದ ಎಲ್ಲರೂ ಹತರಾಗಿ ಬಿಡುತ್ತಾರೆ.

ಧ್ರುವನನ್ನು ವಿದ್ಯಾರ್ಥಿ ನೇತಾರನನ್ನಾಗಿ ಮಾಡುವಾಗ 'ಒಳ್ಳೆಯ ರಾಜಕೀಯದಿಂದ ಮಾತ್ರವೇ ತಾನೇ ಕೆಟ್ಟ ರಾಜಕೀಯವನ್ನು ಮಟ್ಟ ಹಾಕುವುದು ಸಾಧ್ಯ" ಎಂದೇ ಅವನ ಸ್ನೇಹಿತರು ಧ್ರುವನನ್ನು ರಾಜಕೀಯಕ್ಕೆ ಧುಮುಕಲು ಪ್ರೇರೇಪಿಸುತ್ತಾರೆ. ಆದರೆ ಅಂತಿಮವಾಗಿ ಐಪಿಎಸ್ ಪ್ರತಾಪ್ ಮತ್ತು ಧ್ರುವ ಸೇರಿ ಘೋಷಿಸುವುದೇನೆಂದರೆ 'ಸಮಾಜ ಸೇವೆ' ಮಾಡಬೇಕೆಂದಿದ್ದರೆ ರಾಜಕಾರಣವೇ ಬೇಕೆಂದೇನಿಲ್ಲ. ಉತ್ತಮ ವೈದ್ಯರಾಗಿ, ಇಂಜನಿಯರ್ ಆಗಿಯೋ ಸಮಾಜ ಸೇವೆ ಮಾಡಬಹುದು. ಮದರ್ ಥೆರೆಸಾ ಏನೂ ರಾಜಕಾರಣಿಯಾಗಿರಲಿಲ್ಲವಲ್ಲಾ'

ವಿದ್ಯಾರ್ಥಿಗಳು-ಜನಸಾಮಾನ್ಯರು ಮದರ್ ಥೆರೆಸಾರಂತೆ ಹೆಚ್ಚೆಚ್ಚು ಸಮಾಜ ಸೇವೆಗೆ ಸಿದ್ದರಾಗಬೇಕು. ಬಣ್ಣಿಸುತ್ತಿರುವ ಇತರೆ ಭ್ರಷ್ಟ, ವಂಚಕ ರಾಜಕೀಯ ವ್ಯವಸ್ಥೆ ಈ ಸಮಾಜಸೇವಕರ ಸೇವೆಗೆ ಅನುಕೂಲವಾಗುವಂತೆ ಬಡವರು, ರೋಗಿಗಳು, ಪಾಪಿಗಳನ್ನು ವಿಪುಲವಾಗಿ ಸೃಷ್ಟಿಸುತ್ತಾ ಇರಬೇಕು!!

ವಿದ್ಯಾರ್ಥಿಗಳು, ಪ್ರಜಾಪ್ರಭುತ್ವದ ಕುರಿತ ಗಿಳಿ ಪಾಠವನ್ನು ಉರು ಹೊಡೆದು ಶೇ 90, 95 ಅಂಕಗಳನ್ನು ಪಡೆಯಲು ಪೈಪೋಟಿ ನಡೆಸಿ ತೃಪ್ತಿ ಪಡೆಬೇಕೆ ಹೊರತು, ಈ 'ಪ್ರಜಾಪ್ರಭುತ್ವ' ವ್ಯವಸ್ಥೆಯಲ್ಲಿ ಮತದಾರರೂ ಆಗಿ ಮತ ಚಲಾಯಿಸುತ್ತಿರುವ ಯುವ ವಿದ್ಯಾರ್ಥಿಗಳು ರಾಜಕೀಯ ಚಿಂತನೆ,ರಾಜಕೀಯ ಪ್ರಕ್ರಿಯೆಯಲ್ಲಿ ಪಾಲ್ಗೊಳ್ಳಬಾರದು!! ಹೇಗಿದೆ ವಾದ?

ವಿದ್ಯಾರ್ಥಿ ಸಂಘದ ಚುನಾವಣೆ ರದ್ದು ಪಡಿಸುವುದರಿಂದ ರಾಜಕಾರಣಿಗಳನ್ನು ಕಾಲೇಜು ಗೇಟಿನ ಆಚೆಗೆ ಅಟ್ಟುವುದರಿಂದ ನಿಜವಾಗಿಯೂ ಶಿಕ್ಷಣದಿಂದ ರಾಜಕೀಯವನ್ನು ದೂರವಿಡಬಹುದೇ? ಪಠ್ಯಕ್ರಮದ ತಿರುಳನ್ನು ನಿರ್ಧರಿಸುವವರುಯಾರು? ಶುಲ್ಕ ಸ್ವರೂಪ ನಿಗದಿ ಪಡಿಸುವವರು ಯಾರು? ಶಿಕ್ಷಕರು ಕಟ್ಟಡ, ಗ್ರಂಥಾಲಯ, ಪ್ರಯೋಗಶಾಲೆ ಕೊಡುವವರು ಇಲ್ಲವೇ ಕೊಡದೇ ನಿರಾಕರಿಸುವವರು ಯಾರು? ಈ ವಿಷಯಗಳಲ್ಲಿ ರಾಜಕೀಯ ನೀತಿಯ ಪ್ರಭಾವ-ರಾಜಕೀಯ ಹಿಡಿತ ಇಲ್ಲವೇ? ಈ ರೀತಿಯ ಯಾವ ತರ್ಕಗಳಿಗೂ ಇಲ್ಲಿ ಉತ್ತರವಿಲ್ಲ.

ಸಮಾಜಿಕ ನ್ಯಾಯದ ವಿರುದ್ಧ

ಒಂದು ಹಂತದಲ್ಲಿ ಶಿಕ್ಷಕರ ವ್ಯವಸ್ಥೆಯಲ್ಲಿನ ವಂತಿಗೆ ಲಾಬಿಯ ವಿರುದ್ಧ ನಾಯಕ ಗುಡುಗುತ್ತಾನೆ. ಆದರೆ ಕೊನೆಗೆ ರಾಜಕೀಯವೇ ಬೇಡ ಎಂದು ಮರಳಿ ಕಾಲೇಜಿಗೆ ಬಂದು ಸೇರುವ ನಾಯಕ ಪ್ರತಿಪಾದಿಸುವುದು ಪಲಾಯನವಾದವಲ್ಲವೇ? ಪ್ರೇಕ್ಷಕರ ಶಿಳ್ಳೆ ಗಿಟ್ಟಿಸುವ ಹರಿತವಾದ ಚಿತ್ರದ ಸಂಭಾಷಣೆಗೆ ಅದೇ ವೇಗದಲ್ಲಿ ಪರ ರಾಜ್ಯದ ವಿದ್ಯಾರ್ಥಿಗಳ ವಿರುದ್ಧ ಹಾಗೂ ದಲಿತ ವಿಭಾಗಕ್ಕೆ ಕಲ್ಪಿಸಲಾದ ಶೈಕ್ಷಣಿಕ ಮೀಸಲಾತಿಯ ವಿರುದ್ಧವೂ ಹರಿಹಾಯುತ್ತದೆ.

ವಿಧ್ವಂಸಕ ವಿಚಾರಗಳು

ಮಧ್ಯಮ ವರ್ಗದ ಸಿನಿಕತೆ ಜಾಗತೀಕರಣದ ಭರಾಟೆಯಲ್ಲಿ ಯುವಜನರ ನಡುವೆ ಬಿತ್ತಲಾಗುತ್ತಿರುವ 'ಅ ರಾಜಕೀಯ ಹೇಡಿತನ - ಪಲಾಯನವಾದಕ್ಕೆ ಸಾಕ್ಷಿಯಂತೆ ಈ ಸಿನಿಮಾ ಮೂಡಿಬಂದದೆ. ಇನ್ನೊಂದು ಅಪಾಯಕಾರಿ ವಿಚಾರವೆಂದರೆ ಚಿತ್ರ ಪ್ರತಿಪಾದಿಸುವ ವಿಧ್ವಂಸಕತನ. ಕ್ರಿಮಿನಲ್‌ಗಳನ್ನು ಬಿಡಬೇಕೆಂದು ಐಪಿಎಸ್ ಪ್ರತಾಪ್ ಮೇಲೆ ರಾಜಕಾರಣಿಗಳು ಒತ್ತಡ ಹಾಕಿದರೆ ಲಾಕಪ್‌ನಿಂದ ಅವರನ್ನು ಬಿಟ್ಟು ಹಿಂದಿನಿಂದ ಬೆನ್ನಟ್ಟಿ ಬಂದು ಗುಂಡಿಟ್ಟು ಕೊಲ್ಲುತ್ತಾನೆ. ಕ್ರಿಮಿನಲ್‌ಗಳಿಂದ ಲಂಚ ಸ್ವೀಕರಿಸಿದ್ದಕ್ಕಾಗಿ ತನ್ನ ಪತ್ನಿಯನ್ನೇ ಗುಂಡಿಟ್ಟು ಕೊಲ್ಲುತ್ತಾನೆ. ಚಿತ್ರದ ನಾಯಕನಂತೂ ಆಡಳಿತ ಪಕ್ಷದ ಕಛೇರಿಗೆ ನುಗ್ಗಿ ಗುಂಡಿಕ್ಕಿ ಹತ್ಯಾಕಾಂಡ ನಡೆಸಿ ಆರಾಮವಾಗಿ ಕೈತೊಳೆದುಕೊಂಡು ಹೊರ ಬರುತ್ತಾನೆ. ಈ ಯಾವುದರ ಸಂಬಂಧ ಆರೋಪ, ಮೊಕದ್ದಮೆ, ವಿಚಾರಣೆ, ಶಿಕ್ಷೆ ಏನೂ ಇಲ್ಲ!!

ಆಧುನಿಕನಗರದ ನವಯುವಕರು.

ಬೆಳೆಯುತ್ತಿರುವ ಇಂಥಹ ಗಂಭೀರ ಪರಿಸ್ಥಿತಿಯಲ್ಲಿಯೂ ವಿಶ್ವವಿದ್ಯಾಲಯ ಕೇಂದ್ರದಲ್ಲಿ 'ರಾಜ್ಯಶಾಸ್ತ್ರ' ಬೋಧಿಸುವ ಪ್ರಾಧ್ಯಾಪಕ ಮೇಧಾವಿಗಳೇ, ವಿದ್ಯಾರ್ಥಿ ಸಂಘದ ಚುನಾವಣೆ ರದ್ದು ಮಾಡಬೇಕೆಂಬ ಠರಾವುಗಳನ್ನು ಮಂಡಿಸುತ್ತಿರುವಾಗ ವ್ಯಾಪಾರಿ ಚಿತ್ರ ನಿರ್ದೇಶಕರೊಬ್ಬರು ಇಂದಿನ ಮಾರುಕಟ್ಟೆ ಮೂಡ್‌ಗೆ(ಮನೋಭಾವಕ್ಕೆ) ತಕ್ಕಂತೆ No politics pelase ಎಂದರೇ ಆಶ್ಚರ್ಯವೇನು ಇಲ್ಲ. ಆದರೆ ಸಿನಿಮಾ, ಪೋಲೀಸ್ ಠಾಣೆಗಳಲ್ಲೇ ಮಹಿಳೆಯರ ಮೇಲೆ ಅತ್ಯಾಚಾರಗಳು ನಡೆಯುತ್ತಿರುವ ಈ ಸಂದರ್ಭದಲ್ಲಿ ಸ್ವತಃ ಪೋಲಿಸ್ ಅಧಿಕಾರಿಗಳೇ ದರೋಡೆಕಾರರು ನಾಚುವಂತೆ ಅಕ್ಷರಶಃ ನಾಗರಿಕರ ದರೋಡೆ ನಡೆಸುತ್ತಿರುವ ಈಗಿನ ಸನ್ನಿವೇಶದಲ್ಲಿ ಇಂಥ ಪೋಲೀಸ್ ವ್ಯವಸ್ಥೆಯ ಮೇಲೆ ಅಚಲವೂ ಅಪಾರವೂ ಆದ ವಿಶ್ವಾಸವನ್ನು ಮೂಡಿಸಲು ಚಿತ್ರ ಯತ್ನಿಸುತ್ತಿರುವುದನ್ನು ಕೇವಲ ನಿರ್ದೇಶಕರ ಮುಗ್ಧತೆ ಎಂದು ಭಾವಿಸಲು ಸಾಧ್ಯವಿಲ್ಲ ಅಲ್ಲವೇ? ತನ ತಂಟೆಗೆ ಬರಬೇಡಿ, ಬುಡಕ್ಕೆ ಕೈಹಾಕಬೇಡಿ ಎಂದು ಭೋಧಿಸುವ 'ಕೇಣಕಲು ರಾಜಕೀಯ'ದ. ಬ ಎಚ್ಚರ ಅಗತ್ಯ.

ಕ್ವಿಟ್ ಇಂಡಿಯಾ ಹಾಗೆಂದರೇನು? ಮುಸ್ಲೀ ಲೀಗ್ ಒಂದು ಪುಟ್ಬಾಲ್ ತಂಡ...

ಇತ್ತೀಚೆಗೆ 'ಔಟ್‌ಲುಕ್' ಪತ್ರಿಕೆ ಬೆಂಗಳೂರು, ಚನ್ನೈ, ದೆಹಲಿ, ಮುಂಬೈಗಳಲ್ಲಿನ ಪ್ರತಿಷ್ಟಿತ ಕಾಲೇಜುಗಳ ವಿದ್ಯಾರ್ಥಿಗಳ ನಡುವೆ 'ಇತಿಹಾಸ'ದ ಕುರಿತ ಸಾಮಾನ್ಯಜ್ಞಾನದ ಸಮೀಕ್ಷೆ ನಡೆಸಿದಾಗ ಸಿಕ್ಕಿರುವ ಉತ್ತರ ನಿಜಕ್ಕೂ ಗಾಬರಿ ಹುಟ್ಟಿಸುವಂತದ್ದಾಗಿದೆ. 'ಭಾರತ ಬಿಟ್ಟು ತೊಲಗಿ' 'ಉಪ್ಪಿನ ಸತ್ಯಾಗ್ರಹ' ಏಕೆಂದರೆ ಇತಿಹಾಸದ ವಿದ್ಯಾರ್ಥಿಗಳಾದ ಇವರಿಗೆ ಗೊತ್ತಿಲ್ಲ!. ಗಾಂಧೀಜಿ ಅಂಗಿಯನ್ನೇಕೆ ತೊಡಲಿಲ್ಲ ಎಂದರೆ ಅಂದು ಬಟ್ಟೆ ಹೊಲಿಯುವ ಯಂತ್ರ ಇರಲಿಲ್ಲ ಎಂದು ಒಬ್ಬನೆಂದರೆ ಜಯಪ್ರಕಾಶನಾರಾಯಣ ಯಾರು ಎಂಬುದೇ ಗೊತ್ತಿಲ್ಲದ ವಿದ್ಯಾರ್ಥಿಗಳು ಅನೇಕರು 'ಮುಸ್ಲಿಂಲೀಗ್' ಬಗ್ಗೆ ಕೇಳಿದಾಗ 'ಪುಟ್ಬಾಲ್ ಟೀಂ' ಹೆಸರಿರಬಹುದು ಎಂದು ಉತ್ತರಿಸಿದ್ದಾರೆ. ಹೇಗಿದೆ ಹೊಸ ಪೀಳಿಗೆಯ ರಾಜಕೀಯ ಜ್ಞಾನ?

PRB DECR 319-79/79 AIKYARANGA WEEKLY Reg. No. 17015/64 CPM(G)/KA/BGS-119/2002
ಭಾರತ ಕಮ್ಯುನಿಸ್ಟ್ ಪಕ್ಷ(ಮಾರ್ಕ್ಸ್‌ವಾದಿ), ಕರ್ನಾಟಕ ರಾಜ್ಯ ಸಮಿತಿಯ ಪರವಾಗಿ ಮುದ್ರಣ ಮತ್ತು ಪ್ರಕಾಶನ: ಜಿ.ಎನ್.ನಾಗರಾಜು
ಸಂಪಾದಕರು: ಎಸ್.ವೈ.ಗುರುಶಾಂತ್ ಸಂಪಾದಕೀಯ ಕಛೇರಿ: ನಂ. 12, 18ನೇ ಅಡ್ಡರಸ್ತೆ, ಸಂಪಂಗಿರಾಮನಗರ, ಬೆಂಗಳೂರು-27 ಫೋನ್ ನಂ. 2236462,
ಮುದ್ರಣ: ಹನಿ ಪ್ರಿಂಟರ್ಸ್, ಕ್ವೀನ್ ರಸ್ತೆ, ಬೆಂಗಳೂರು.
Printed & Published by Communist Party of India(Marxist), Karnataka State Committee. Editor : S.Y.GURUSHANTH